ಮನೋಹರ ಗ್ರಂಥ ಮಾಲೆಯ ಸಾಹಿತ್ಯೋತ್ಸವ ಪ್ರಕಟನೆ

ಆಶುನಾಟಕಗಳು

(ಮೂರು ಏಕಾಂಕಗಳ ಸಂಗ್ರಹ)

ಶ್ರೀ

ಸಂಪಾದಕ:
ಜಿ. ಬಿ. ಜೋಶಿ

ಮನೋಹರ ಗ್ರಂಥ ಪ್ರಕಾಶನ ಸಮಿತಿ
ಧಾರವಾಡ

ಸಾಹಿತ್ಯ ವಿಷಯದಲ್ಲಿ ಸಲಹೆಗಾರರು:

ಶ್ರೀ. ದ. ರಾ. ಬೇಂದ್ರೆ, ಎಂ. ಎ.

ಶ್ರೀ. ರಂ. ಶ್ರೀ. ಮುಗಳಿ, ಎಂ. ಎ. ಬಿ. ಟಿ.

ಶ್ರೀ. ವಿ. ಕೃ. ಗೋಕಾಕ, ಬಿ. ಎ. (ಆಕ್ಸಫರ್ಡ)

ಸಂಪಾದಕ:

ಜಿ. ಬಿ. ಜೋಶಿ

ಬೆಲೆ: ೦-೧೨-೦

ಪ್ರಕಾಶಕರು:
ಜಿ. ಬಿ. ಜೋಶಿ
ಮನೋಹರ ಗ್ರಂಥಮಾಲಾ
ಧಾರವಾಡ

ಮುದ್ರಕರು:
ಕೆ. ಜಿ. ರಾಯದುರ್ಗ
ಮೋಹನ ಮುದ್ರಣಾಲಯ
ಧಾರವಾಡ

ಮೊದಲ ಮಾತು

•

ಶೀಘ್ರಕವಿಯ 'ಆಶುಕವನ'ದಂತೆ, ಸಾಹಿತಿಗಳ ಸಾಹಿತ್ಯಕೇಳಿಯಲ್ಲಿ ಲೀಲಾವಿನೋದಕ್ಕಾಗಿ ಸಾಮೂಹಿಕವಾಗಿ ಹುಟ್ಟಿದ ಒಂದು ಒಳ್ಳೆಯ ಕಾವ್ಯಕೃತಿಯಂತೆ, ಈ 'ಆಶುನಾಟಕ'ಗಳೂ ಕುಶಲ ನಟ-ನಾಟಕಕಾರರ ಸಮಯೋಚಿತ ಸಮಯಸ್ಫೂರ್ತಿಯಿಂದ ಹುಟ್ಟಿಬಂದಿವೆ.

ಈ ಆಶುನಾಟಕದ ಕಲ್ಪನೆಯು ಮೊಟ್ಟಮೊದಲು ನನ್ನ ತಲೆಯಲ್ಲಿ ಮೂಡಿದ್ದು ಏಳು ವರ್ಷಗಳ ಹಿಂದೆ—ನನ್ನ ಗೆಳೆಯನ ಮದುವೆಯ ಶುಭ ಪ್ರಸಂಗದಲ್ಲಿ.

ನನ್ನ ಗೆಳೆಯ ನಟ. ಹಾಸ್ಯಪಾರ್ಟಿ. ಮಾತಿನಲ್ಲಿ ಚತುರ. ನಗಿಸುವ ನಗೆಗಾರ. ಬೆಲ್ಲಕ್ಕೆ ಇರುವೆ ಮುತ್ತುವ ಹಾಗೆ ಅವನ ಸುತ್ತಲೂ ಯಾವಾಗಲೂ ಜನ. ಅವನ ಮಾತೆಂದರೆ ಅಷ್ಟು ಸವಿ. ಅವನು ಕುಳಿತಲ್ಲಿ ಕಂಪನಿ, ನಿಂತಲ್ಲಿ ನಾಟಕ. ಇಷ್ಟೆಲ್ಲ ಅವನ ಗುಣಪ್ರದರ್ಶನಕ್ಕೆ ಒಂದು ಜಾಗ ಬೇಕಲ್ಲ— ಒಂದು ನಾಟ್ಯಸಂಘ ಅದಕ್ಕಾಗಿ ಮೀಸಲಾಗಿದೆ. ನನ್ನ ಗೆಳೆಯ ಆ ನಾಟ್ಯಸಂಘದ ಸದಸ್ಯ. ಅವನ ಮದುವೆಗೆ ನಾಟ್ಯಸಂಘದ ಸದಸ್ಯರೆಲ್ಲರೂ ಬಂದಿದ್ದರು. ನಾನೂ ಹೋಗಿದ್ದೆ. ಸರಿ-ವಾರಿಗೆಯ ಮೂವತ್ತು ಮೂವತ್ತೈದು ಹುಡುಗರು ಒತ್ತಟ್ಟಿಗೆ—ಅದೂ ತಮ್ಮೊಬ್ಬ ಗೆಳೆಯನ ಮದುವೆಗಾಗಿ—ಕೂಡಿದರೆ ಅವರ ಹರಟೆಗೆ, ಲೀಲೆಗಳಿಗೆ, ಚಕ್ಕಂದಕ್ಕೆ ಇತಿಮಿತಿ ಉಳಿಯುವದೇ! ಎಲ್ಲರ ಮನಸ್ಸೂ ಆಗ ಗಾಳಿಯಂತೆ ಹಗುರು. ಅರ್ಥವಿಲ್ಲದ, ಸ್ವಾರ್ಥವಿಲ್ಲದ ಮುಕ್ತ ಮನಸ್ಸು ಅದು. ಮಾತು ಮಾತಿಗೂ ನಗೆಯಾಡುವದು; ಅರ್ಥವಿಲ್ಲದ ಮಾತುಗಳಿಗೂ ನಗುವದು. ಮದುವೆ ತೀರಿಸಿಕೊಂಡು ತಿರುಗಿ ಬರುವಾಗ ಬನಶಂಕರಿಯಲ್ಲಿ ರಾತ್ರಿಯ ‘ ವಸ್ತಿ ’ಯಾಗಬೇಕೆಂದು ಯಾವನ ತಲೆಯಲ್ಲಿಯೊ ಮಿಂಚಿತು. ಸರಿ, ಅದು ಕೃತಿಯಲ್ಲಿ ಬಂದೇಬಿಟ್ಟಿತು. ತಿರುಗಿ ಬರುವಾಗ ಬನಶಂಕರಿಗೇ ‘ ವಸ್ತಿ ’ ಬಿತ್ತು. ಅಂದು ಹುಣ್ಣಿಮೆ. ಶುಭ್ರ ಬೆಳದಿಂಗಳು ಶಂಕರಿಯ ಬನವನ್ನೆಲ್ಲ ತುಂಬಿತ್ತು. ವಯಸ್ಸು ಕಳೆದವರೂ ಕೂಡ ಆ ಬನ, ಆ ಬೆಳದಿಂಗಳು ನೋಡಿ ತಮ್ಮ ಹುಡುಗತನದ ನೆನಪಿನಿಂದ ಮನಸ್ಸಿನಲ್ಲಿಯಾದರೂ ಕುಣಿದಾಡಿರಬೇಕು, ನೆಗೆದಾಡಿರಬೇಕು. ನಮ್ಮ ಆ ಚಿಕ್ಕ ವಯಸ್ಸು ಎಲ್ಲದರಲ್ಲಿಯೂ ರಮ್ಯತೆಯನ್ನು ಕಾಣುತ್ತಿತ್ತು.

‘ ಈ ಹೊತ್ತು ರಾತ್ರಿ ಯಾರೂ ಮಲಗುವಂತಿಲ್ಲ ’ ಎಂದು ಯಾರೊ ಸಾರಿದರು. ಹಿರಿಯರೂ ಹುಡುಗರೂ ಅದಕ್ಕೆ ‘ ಹೂಂ ’ ಎಂದರು. ‘ ಮಲಗದಿದ್ದರೆ ಹಾಗಾದರೆ ಏನು ಮಾಡಬೇಕು ? ’ ಎಂಬುದನ್ನು ವಿಚಾರಿಸಿ ಕಾರ್ಯಕ್ರಮವನ್ನು ಗೊತ್ತುಪಡಿಸುವದಕ್ಕಾಗಿ ನಾಟ್ಯಸಂಘದ ಸದಸ್ಯರ ಮಂತ್ರಾಲೋಚನೆಯ ಸಭೆ ಕೂಡಲೆ ಸೇರಿತು. ತರ್ಕ-ವಿತರ್ಕ, ವಾದ-ವಿವಾದ, ಪ್ರಶ್ನೋತ್ತರ ಎಲ್ಲ ಮುಗಿದು ಕೊನೆಗೆ ನನ್ನ ಗೆಳೆಯನ ಸೂಚನೆಯಂತೆ ಯಾವುದಾದರೊಂದು ನಾಟಕವಾಡಬೇಕೆಂದು ತೀರ್ಮಾನವಾಯಿತು. ಇದ

ಶಂಕರಿಯ ದೇವಸ್ಥಾನದಲ್ಲಿಳಿದವರೆಲ್ಲರಿಗೂ ಹೋಗಿ ಮುಟ್ಟಿತು. ಎಲ್ಲರೂ ಕುತೂಹಲದಿಂದ ನಾಟಕ ಪ್ರಾರಂಭವನ್ನೇ ಎದುರು ನೋಡಹತ್ತಿದರು.

ನನ್ನ ಗೆಳೆಯ ತನ್ನ ಕೆಲ ನುರಿತ ಸಂಗಡಿಗರನ್ನು ಆಯ್ದುಕೊಂಡ. ಅವರಿಗೆಲ್ಲ ತಾನು ಕಲ್ಪಿಸಿಕೊಂಡ ಕತೆಯನ್ನೆಲ್ಲ ಹೇಳಿದ. ಅವರವರ ಪಾತ್ರ ಅವರವರಿಗೆ ಹಂಚಿಕೊಟ್ಟ. ಕತೆಯಲ್ಲಿಯ ವ್ಯಕ್ತಿಗಳ ಸ್ವಭಾವಪರಿಚಯ ಅವರಿಗೆ ಮಾಡಿಕೊಟ್ಟ. ಮಾತು ಮಾತ್ರ ರಂಗಭೂಮಿಯ ಮೇಲೇ ಸರಿ ಮಾಡಿಕೊಳ್ಳುವದಕ್ಕೆ ಬಿಟ್ಟ.

ಇತ್ತ ರಂಗಭೂಮಿಯ ಸಿದ್ಧತೆ ನಡೆಯಿತು. ಶಂಕರಿಯ ಆವಾರವೇ ರಂಗಭೂಮಿಯಾಯಿತು. ಗುಡಾರವೇ ಅಂಕಪಡದೆಯಾಯಿತು. ಹಾಸಿಗೆ ಸುರುಳಿಗಳೇ ದಿಂಬುಗಳಾದವು. ಮದುವೆಗೆಂದು ತಂದ ಒಂದೆರಡು 'ವಿಲಾಯತಿ ದೀಪ'ಗಳೇ ಬೆಳಕು ಬೀರಲಣಿಯಾದುವು. ಸೀರೆ-ಪೀತಾಂಬರಗಳಿಗೇನು ಕಡಿಮೆ ಇಂಥಲ್ಲಿ!

ರಂಗಭೂಮಿ ಸಿದ್ಧವಾಗುವಷ್ಟರಲ್ಲಿ ಒಂದು ಮೂಲೆಯಲ್ಲಿ ನನ್ನ ಗೆಳೆಯ ತನ್ನ 'ಗ್ರೀನ್ ರೂಮು' ಸಿದ್ಧಮಾಡಿಕೊಂಡಿದ್ದ. ಎಲ್ಲ ಪಾತ್ರಗಳನ್ನೂ ತಯಾರಿಸಿದ್ದ. ತಾನೂ ಸಿದ್ಧನಾಗಿದ್ದ. ಬಣ್ಣದ ಬೆಡಗಿಲ್ಲದೆ, ಭರ್ಜರಿ ಪಡದೆ ಇಲ್ಲದೆ, ಚಕ್-ಪಕ್ ಸೀನ್-ಸೀನರಿಗಳ ಜಂಜಾಟವಿಲ್ಲದೆ, ಆ ಅಟ್ಟಂಬಟ್ಟಾರಣ್ಯದಲ್ಲಿ ನನ್ನ ಗೆಳೆಯನ ನಾಟಕ 'ಸರಿಯಾಗಿ ಹತ್ತು ವೇಗೆ' ಪ್ರಾರಂಭವಾಗಿಯೆ ಬಿಟ್ಟಿತು.

ಪ್ರಾರಂಭವಾಗಿದ್ದ ನಾಟಕ ಮೊದಲಿನಿಂದ ಕೊನೆಯ ವರೆಗೂ ಕಳೆ ಕಟ್ಟುತ್ತ ಬಂತು. ನೆರೆದವರು ಬಾಯಿ ತೆರೆದು ನೋಡುತ್ತಿದ್ದರು. ನನ್ನ ಗೆಳೆಯನ ಸಮಯೋಚಿತ ಮಾತು, ಅಭಿನಯ ಅವರನ್ನು ಮೈಮರೆಸಿದ್ದವು.

ನಾಟಕ ನಲವತ್ತೈದು ನಿಮಿಷಗಳ ವರೆಗೂ ಆಯಿತು. 'ನಾಟಕದಲ್ಲಿಯ ಕತೆಯೇನು?' ಎಂಬದನ್ನು ನಾನಿಲ್ಲಿ ಹೇಳಲಾರೆ. ಆ ನಾಟ್ಯಸಂಘದವರು ನನ್ನ ಗೆಳೆಯನ ಆ ಅಲಿಖಿತ ನಾಟಕವನ್ನು ಈಗಲೂ ಅಭಿನಯಿಸುತ್ತಿದ್ದಾರೆ. ಸಮಯ ಸಾಧಿಸಿ ಅದನ್ನು ನೋಡಿರಿ. ಇಲ್ಲಿ ನಾನೇ ಅದನ್ನು ಬರೆಯಲು ಹವಣಿಸಿದರೆ—ಅಷ್ಟು ರಸದುಂಬಿ, ರುಚಿಯಾಗಿ, ನಾಟಕ ಕಣ್ಣಿಗೆ

ಕಟ್ಟುವಂತೆ ನಾನು ಬರೆದೇನೆಂಬ ಧೈರ್ಯವೂ ನನಗಿಲ್ಲ—ಓದುಗರಿಗೆ ಅದನ್ನು ನೋಡಿದಷ್ಟು ರುಚಿ, ಓದಿದರೆ ಸಿಕ್ಕಲಾರದೆಂಬದು ನನಗೆ ಗೊತ್ತಿದೆ. ಅಂತೆಯೇ ಬಿಟ್ಟಿದ್ದೇನೆ. ಕ್ಷಮಿಸಿ.

ಗುಡಾರದ ಅಂಕ ಪಡದೆ ಬೀಳುವ ಹೊತ್ತಿಗೆ ಹೆಣ್ಣುಮಕ್ಕಳಲ್ಲಿ ಸ್ವಲ್ಪ ಗುಜುಗುಜು ನಡೆದದ್ದು ಕೇಳಿಸಿತು. ನಾನೇ ಹೋಗಿ ನೋಡಿದೆ. ಮದು-ಮಗಳು ಬಿಕ್ಕಿಬಿಕ್ಕಿ ಅಳುತ್ತಿದ್ದಳು. 'ಏನಾಯಿತು?' ಎಂದೆ. 'ನಾಟಕದಾಗಿನ ತನ್ನ ಗಂಡನ ಹುಚ್ಚುಹುಚ್ಚು ನೋಡಿ, ಖರೇನs ಹುಚ್ಚಾದಂತ ತಿಳಕೊಂಡು ಅಳತಾಳ!' ಎಂದು ಒಂದು ಹುಡುಗಿ ಹೇಳಿ ನಕ್ಕಿತು. ನನಗೂ ನಗೆ ಬಂತು. ನನ್ನ ಗೆಳೆಯನ ಹತ್ತರ ಹೋಗಿ ಈ ಮಾತು ತಿಳಿಸಿದೆ. ನನ್ನ ಗೆಳೆಯ ನಕ್ಕ, ಏನೂ ಉತ್ತರ ಕೊಡಲಿಲ್ಲ. ಅಷ್ಟೊತ್ತಿಗೆ ಪ್ರೇಕ್ಷಕರಲ್ಲಿಯ ಒಬ್ಬರು ಸದ್ಗೃಹಸ್ಥರು ನಮ್ಮನ್ನೆಲ್ಲ ಸರಿಸಿ, ನನ್ನ ಗೆಳೆಯನ ಹತ್ತಿರ ಹೋಗಿ "ನಾಟಕಾ ಬಹಳ 'ಗ್ರ್ಯಾಂಡ್' ಆತರೆಪಾ! ಈ ನಾಟಕ ಯಾರು ಬರದ್ದು?" ಎಂದು ಕೇಳಿದರು. ನನ್ನ ಗೆಳೆಯ 'ಈ ನಾಟಕಾ ಬರದ್ದಲ್ಲರೀ, ಬಂದದ್ದು' ಎಂದು ಹೇಳಿ ನಕ್ಕ.

ಹೀಗೆ ಕೆಲ ನಟರೆ ಕೂಡಿ ಯಾವದೊ ಒಂದು ಕತೆಯ ಎಳೆಯನ್ನು ಹಿಡಿದುಕೊಂಡು ಮಾತಿಗೆ ಮಾತು ಜೋಡಿಸುತ್ತ, ತಮ್ಮ ಲೀಲಾವಿನೋದದಲ್ಲಿ, ತಮಗೂ ತಿಳಿಯದಂತೆ, ಒಂದು ಸಾಹಿತ್ಯಕೃತಿಯನ್ನು ನಿರ್ಮಿಸಿದರು. ಅದೇ ಮುಂದೆ 'ವರ ಪರೀಕ್ಷೆ' ಎಂದು ಹೆಸರು ಪಡೆದು, ಆ ನಾಟ್ಯ ಸಂಘಕ್ಕೆ ಅಭಿನಯಿಸಲು ಒಂದು ಅಲಿಖಿತ ನಾಟಕವಾಯಿತು.

ಏಳು ವರ್ಷಗಳ ಹಿಂದೆ ನಡೆದ ಈ ಸಂಗತಿಯೆಲ್ಲ ಅಂದು ನನ್ನ ಮನಸ್ಸಿನ ಭೂಮಿಯಲ್ಲಿ ಬೀಜವಾಗಿ ನಾಟಿತು. ಏಳು ವರ್ಷ ಕಾಲ ಯಾವುದೋ ಒಂದು ಆಶೆಯ ಹಸಿಯಿಂದ ಅಲ್ಲಿಯೆ ಬೆಳೆಯಿತು. '**ಮನೋಹರ ಗ್ರಂಥ ಮಾಲೆಯ ಸಾಹಿತ್ಯೋತ್ಸವದ**' ಸುಗ್ಗಿಯಲ್ಲಿ ಫಲ ಬಿಟ್ಟಿತು. ಆ ಫಲವೇ ಈ '**ಆಶುನಾಟಕಗಳು**'. ಅದನ್ನೆ ನಾನೀಗ ಕನ್ನಡಿಗರ ಕೈಗೆ ಕೊಟ್ಟಿದ್ದೇನೆ.

ಆಶುನಾಟಕ ಸ್ಪರ್ಧೆ ನಡೆಯುವ ಮೊದಲು ಈ ನಾಟಕಗಳು ತಂತ್ರದಲ್ಲಿ, ಸರಸಸಂಭಾಷಣಾಚಾತುರ್ಯದಲ್ಲಿ, ಕೊಟ್ಟ ವಿಷಯದ ಬಗ್ಗೆ ಕತೆ-ಯನ್ನು ಸ್ವಾಭಾವಿಕವಾಗಿ ಬೆಳೆಸಿಕೊಂಡು ಹೋಗುವ ರೀತಿಯಲ್ಲಿ, ಇಷ್ಟು

ಸೊಗಸಾಗಿ ಅಭಿನಯಿಸಲ್ಪಡಬಹುದೆಂದಾಗಲಿ, ಆ ನಾಟಕಗಳನ್ನೆಲ್ಲ ಕೂಡಿಸಿ ಪುಸ್ತಕರೂಪವಾಗಿ ಪ್ರಕಟಿಸಬಹುದೆಂದಾಗಲಿ, ನಾನು ನನ್ನ ಕನಸು ಮನಸಿನಲ್ಲಿಯೂ ಬಗೆದಿರಲಿಲ್ಲ. ಆಶುನಾಟಕ ಸ್ಪರ್ಧೆಯಲ್ಲಿ ಭಾಗವಹಿಸಿದ ಬಾಗಿಲುಕೋಟೆ, ಬೆಂಗಳೂರು, ಗದುಗಿನ ನಾಟ್ಯಸಂಘದವರು ತಾವು ಅಭಿನಯಿಸಿದ ನಾಟಕಗಳನ್ನು ನೆನಪಿನಿಂದ ಬರೆದು ಕೊಟ್ಟಿರದಿದ್ದರೆ, ಇದೆಲ್ಲ ಮನಸ್ಸಿನಲ್ಲಿಯ ಮಂಡಿಗೆಯೆ ಆಗುತ್ತಿತ್ತು. ಆದರೆ ಗಾಳಿಗೂಡಿ ಹೋಗಬಹುದಾಗಿದ್ದ ಮಾತುಗಳು ರೂಪುಗೊಂಡು ನಾಟ್ಯಸಂಘದವರ ಸಹಾಯದಿಂದ ಇಲ್ಲಿ 'ಕೃತಿ'ಯಾಗಿ ನಿಂತಿವೆ. ಅದಕ್ಕಾಗಿ ನಾನು ಆ ನಾಟ್ಯಸಂಘದವರಿಗೆ ಕೃತಜ್ಞನಾಗಿದ್ದೇನೆ.

ಈ ರೀತಿಯ ಆಶುನಾಟಕ ಸ್ಪರ್ಧೆಯ ಪ್ರಯೋಗ ಈ ಪ್ರಮಾಣದಲ್ಲಿ ಆದದ್ದು ಇದೇ ಮೊದಲನೆಯ ಸಲವೆನ್ನಬಹುದು. ಮಂಗಳೂರತ್ತ ಶ್ರೀ. ಕಾರಂತರು ತಮ್ಮ ಸಂಗಡಿಗರೊಂದಿಗೆ ಆಗೀಗ ಈ ರೀತಿಯ ನಾಟಕ ಪ್ರಯೋಗಗಳನ್ನು ಮಾಡುತ್ತಿರುತ್ತಾರೆಂದು ಕೇಳಿದ್ದೇನೆ. ಬೆಂಗಳೂರು, ಮೈಸೂರುಗಳಲ್ಲಿಯೂ ಕೆಲ ಪ್ರಯೋಗಗಳು ನಡೆದಿರಬಹುದು. ನನಗೆ ಗೊತ್ತಿಲ್ಲ. ಆದರೆ ಹೀಗೆ ಆಶುನಾಟಕಗಳ **ಸ್ಪರ್ಧೆ** ನಡೆದದ್ದು ಮಾತ್ರ ಇದೇ ಮೊದಲೆಂದು ನನಗೆ ತೋರುತ್ತದೆ.

ಈಗ ಆದ ಈ ಸ್ಪರ್ಧೆ ಇನ್ನೂ ಅಷ್ಟು ದೊಡ್ಡ ಪ್ರಮಾಣದಲ್ಲಿ ನಡೆಯಬಹುದಾಗಿತ್ತು; ಆದರೆ ಅದಕ್ಕೆ ಕಾಲದ ಅನುಕೂಲತೆ ಇರಲಿಲ್ಲ. ಬರಬೇಕೆಂದರೂ ಪ್ರವಾಸ ಬಹಳ ತೊಂದರೆಯದಾಗಿತ್ತು. ಆದರೆ ಈ ಯುದ್ಧದ ಕಾಲ ಸರಿದು ಅನುಕೂಲ ಕಾಲ ಬಂತೆಂದರೆ ಇನ್ನೊಮ್ಮೆ ಇದೇ ರೀತಿಯ ನಾಟಕ ಸ್ಪರ್ಧೆಯನ್ನು ಇದಕ್ಕೂ ಹೆಚ್ಚು ವಿಸ್ತಾರವಾಗಿ ಏರ್ಪಡಿಸಬೇಕೆಂಬ ಆಶೆಯ ಬಳ್ಳಿ ನನ್ನಲ್ಲಿನ್ನೂ ಕಮರಿಲ್ಲ. ಮತ್ತೆ ಅದು ಸಕಾಲದಲ್ಲಿ ಕುಡಿಯೊಡೆದು ಹೂ ಬಿಟ್ಟೀತು.

ಸಾಹಿತ್ಯೋತ್ಸವದ ಕಾರ್ಯಕ್ರಮಗಳಲ್ಲಿ ಆಶುನಾಟಕ ಸ್ಪರ್ಧೆಯ ಕಾರ್ಯಕ್ರಮ ತೀರ ಹೊಸದು. ಬಹಳ ಜನರಿಗೆ ಗೊತ್ತಿಲ್ಲದ್ದು. ಅಂತೆಯೆ ನೋಡಲು ಬಂದಿದ್ದವರೆಲ್ಲರೂ ಈ ಆಶುನಾಟಕಗಳ ಪ್ರಯೋಗ ಏನಾಗುವುದೋ ಏನೋ ಎಂದು ತವಕದಿಂದ ನಿರೀಕ್ಷಿಸುತ್ತಿದ್ದರು.

ಉತ್ಸವಕ್ಕೆ ಬಂದಿದ್ದ ಐದು ನಾಟ್ಯ ಸಂಘಗಳಲ್ಲಿ ಮೂರೇ ಮಾತ್ರ ಈ ಸ್ಪರ್ಧೆಯಲ್ಲಿ ಭಾಗ ವಹಿಸಲು ಧೈರ್ಯ ಮಾಡಿದವು. ಈ ಮೂರರಲ್ಲಿಯೂ ಮೊದಲು ಅಭಿನಯಿಸುವ ಸಾಹಸ ಮಾಡಿದವರು ಬಾಗಿಲುಕೋಟೆಯ ನಾಟ್ಯ ಸಂಘದವರು.

ಈ ಸ್ಪರ್ಧೆಯ ವಿವರಗಳನ್ನೆಲ್ಲ ಗೊತ್ತುಮಾಡಿ, ಅದರ ಕಾರ್ಯಕ್ರಮ ವನ್ನೆಲ್ಲ ಶ್ರೀಮಾನ್ ಮುಗಳಿಯವರು ಹೊತ್ತು ನಡೆಯಿಸಿದರು. ಸ್ಪರ್ಧೆಯ ಫಲಶ್ರುತಿ ಹೇಳುವ ಕಠಿಣವಾದ, ಸೂಕ್ಷ್ಮವಾದ ಕೆಲಸವನ್ನು ಶ್ರೀಗಳಾದ ಕಾರಂತ, ಸಂಗೋರಾಮ, ಎಂ. ಜಿ. ವೆಂಕಟೇಶಯ್ಯ ಇವರು ಒಳ್ಳೆ ಧೈರ್ಯದಿಂದ ನಿರ್ವಹಿಸಿದರು. ಇವರೆಲ್ಲರಿಗೂ ನಾನು ಅತ್ಯಂತ ಕೃತಜ್ಞ ನಾಗಿದ್ದೇನೆ.

ಉತ್ಸವದ ಮೊದಲ ದಿನ ಸಂಜೆ ಐದು ಗಂಟೆಗೆ ಶ್ರೀ. ಮುಗಳಿಯವರು “ ಒಬ್ಬ ಸಂಸಾರಿಗನಾದ ಸಾಹಿತಿಯು ಒಂದು ಕವನವನ್ನು ಒಂದೇ ದಿನ ದಲ್ಲಿ ಕಟ್ಟಿ ಮುಗಿಸಲು ಪ್ರಯತ್ನಿಸಿ, ಆಗದ್ದಕ್ಕೆ ನಿರಾಶನಾಗುವ ಬಗೆ ’ ಮತ್ತು “ ಲಾಟರಿಯಲ್ಲಿ ಒಂದು ಲಕ್ಷ ರೂಪಾಯಿ ಗೆದ್ದು ಉನ್ಮತ್ತನಾದ ಭಾಗ್ಯವಂತನ ಒಂದು ದಿನಚರ್ಯ ” ಎಂದಿಷ್ಟೆ ಎರಡು ಕಾಗದ ತುಂಡಿನ ಮೇಲೆ ಬೇರೆ ಬೇರೆಯಾಗಿ ಬರೆದು ಬಾಗಿಲುಕೋಟೆ, ಬೆಂಗಳೂರಿನ ನಾಟ್ಯ ಸಂಘದವರಿಗೆ ಕೊಟ್ಟರು. ಅಂದೇ ರಾತ್ರಿ ಒಂಭತ್ತು ಗಂಟೆಗೆ, ಕೊಟ್ಟ ಆ ವಿಷಯಕ್ಕೆ ಹೊಂದಿಕೆಯಾಗುವಂತೆ ತಾವೇ ಕತೆ ಕಟ್ಟಿಕೊಂಡು ಅರ್ಧ ತಾಸಿನ ಒಂದು ನಾಟಕವನ್ನು ಅಭಿನಯಿಸಬೇಕೆಂದು ಅವರಿಗೆ ತಿಳಿಸ ಲಾಯಿತು.

ಇದೆಲ್ಲವೂ ಹೊಸದು; ಪ್ರಯೋಗ. ಎಲ್ಲಿ ಅಪಹಾಸ್ಯಕ್ಕೀಡಾಗು ವೆವೋ ಎಂದು ಆ ನಾಟ್ಯಸಂಘದವರಿಗೆ ಭಯ. ಹೂಡಿದ ಈ ಸ್ಪರ್ಧೆಯ ಪ್ರಯೋಗ ಹದಗೆಟ್ಟು ಮಾಡಿದವರಿಗೂ ಮಾಡಿಸಿದವರಿಗೂ ಕೂಡಿಯೆ ಒಂದು ಅಳುಕಿನ ನೆನಪಾಗಿ ಎಲ್ಲಿ ಉಳಿದೀತೊ ಎಂದು ನನಗೆ ಭಯ. ಬಂದಿದ್ದ ಉಳಿದವರಿಗೆಲ್ಲ ಏನೇ ಆಗಲಿ, ನಾಟಕ ನೋಡಬೇಕೆಂಬ ತಡೆಯ ಲಾರದ ಕುತೂಹಲ.

ಸರಿಯಾಗಿ ರಾತ್ರಿ ಒಂಬತ್ತಕ್ಕೆ ಮೊದಲು ಬಾಗಿಲುಕೋಟೆಯವರ ಆಶುನಾಟಕ ಪ್ರಾರಂಭವಾಯಿತು. ಅಲ್ಲಲ್ಲಿ ಬೇರೆಯವರ ನಾಟಕಗಳ ಛಾಯೆ ಅದರಲ್ಲಿ ಕಂಡುಬಂದರೂ ಒಟ್ಟಿನಲ್ಲಿ ಅದೊಂದು ಒಳ್ಳೆಯ ನಾಟಕವೆನಿಸಿತು. ಅದರಲ್ಲಿಯ ಶ್ರೀನಿವಾಸಾಚಾರ್ಯರ ಪಾತ್ರವೆ ಇಡೀ ಆ ನಾಟಕಕ್ಕೆ ಜೀವ ಕಳೆ ತಂದಿತ್ತು. ನೋಡಿದವರಿಗೆಲ್ಲ ನಾಟಕ ಬಹಳ ಸಂತೋಷ ಕೊಟ್ಟಿತು.

ಅಂದೇ ರಾತ್ರಿ ಬಾಗಿಲುಕೋಟೆಯವರ ನಾಟಕ ಮುಗಿದ ಕೂಡಲೆ ಬೆಂಗಳೂರವರ ನಾಟಕ ಪ್ರಾರಂಭವಾಯಿತು. ನಟ-ನಾಟಕಕಾರರಾದ ಶ್ರೀ. ಚಿ. ಸದಾಶಿವಯ್ಯನವರು ಅದರಲ್ಲಿ ಪಾತ್ರ ವಹಿಸಿದ್ದರು. ನಾಟಕದಲ್ಲಿ ಯಾವುದನ್ನೂ ತೆಗೆದುಹಾಕುವಂತಿರಲಿಲ್ಲ. ಕಥೆ, ಸಂಭಾಷಣೆ, ಪಾತ್ರಸೃಷ್ಟಿ ಅಭಿನಯ ಎಲ್ಲವೂ ' ಹೌದು, ನಾಟಕ ಬರೆದರೆ ಹೀಗೆ ಬರೆಯಬೇಕು, ಆಡಿದರೆ ಹೀಗೆ ಆಡಬೇಕು.' ಎನ್ನುವ ಹಾಗಿದ್ದವು. ಇವರ ನಾಟಕದಲ್ಲಿ 'ಇಂಥವರಕಿಂತ ಇಂಥವರು ಚೆನ್ನಾಗಿ ಅಭಿನಯಿಸಿದರು, ' ಎಂದು ಹೇಳುವದೇ ಬಹಳ ಕಷ್ಟ. ಎಲ್ಲರೂ ಅಷ್ಟೇ ಚೆನ್ನಾಗಿ, ನೈಜವಾಗಿ ಅಭಿನಯಿಸಿದರು. ಕಡಿಮೆ ಮಾತಿನಲ್ಲಿ ಅಭಿನಯದಿಂದ ಅರ್ಥದ ಹುರುಳು ತುಂಬುವದನ್ನು ಇವರಿಂದಲೇ ಕಲಿಯಬೇಕು. ಇವರ ನಾಟಕ ನೋಡಿ ' ಶ್ರೀನಿವಾಸ 'ರು ' It is a perfect piece of art ' ಎಂದು ಮೆಚ್ಚಿ ನುಡಿದರು. ಈ ' ಸೌಭಾಗ್ಯ ' ಕನ್ನಡದ ಸೌಭಾಗ್ಯವೇ.

ಕೊನೆಯ ದಿನ ರಾತ್ರಿ ಗದುಗಿನ ನಾಟ್ಯಸಂಘದವರು ತಮ್ಮ ಪಾಲಿಗೆ ಬಂದಿದ್ದ ವಿಷಯವನ್ನು ತೆಗೆದುಕೊಂಡು ನಾಟಕವಾಡಿದರು. ನಾಟಕ ಮೊದಮೊದಲು ಸಪ್ಪಗೆ ಸುರುವಾದರೂ ಬರಬರುತ್ತ ಕಳೆಯೇರಿತು. ಮಾರವಾಡಿಯ ಪಾತ್ರ ಬಂದಮೇಲಂತೂ ನಾಟಕ ಶಿಖರ ಮುಟ್ಟಿತು. ಇವರಿಗೇ ಸ್ಪರ್ಧೆಯ ಬಹುಮಾನ ದೊರಕಿತು.

ಈ ' ಆಶುನಾಟಕಗಳ ' ಸಂಗ್ರಹವು ಮನೋಹರ ಗ್ರಂಥಮಾಲೆಯ ಸಾಹಿತ್ಯೋತ್ಸವದ ಸವಿನೆನಪಿಗಾಗಿ ಪ್ರಕಟವಾಗಿದೆ. ಅದೂ ಕೂಡ ಕನ್ನಡಿಗರಾದ ಕೆಲ ಉದಾರ ಅಂತಃಕರಣಿಗಳ ಧನಸಹಾಯದಿಂದ. ಒಳ್ಳೆಯ ಮೇಧಾವಿ ಡಾಕ್ಟರರೆಂದು ಹೆಸರುಪಡೆದ ವೈ. ವಾ. ವಾಸುದೇವರಾವ ಉಮಚಗಿಯವರ ನೆನಪಿಗಾಗಿ ಅವರ ಮಕ್ಕಳಾದ ಶ್ರೀ. ಆನಂದರಾಯರು

ಸಾಹಿತ್ಯೋತ್ಸವದ ಕಾಲಕ್ಕೆ ಒಂದು ನೂರಾ ಒಂದು ರೂಪಾಯಿಯ ಕಾಣಿಕೆ ಸಲ್ಲಿಸಿದ್ದಾರೆ. ವಾಸುದೇವರಾಯರ ಕಟು-ಮಧುರ ಶಿಸ್ತಿನ ಜೀವನದ ಬಗ್ಗೆ ನನಗೆ ಅವರಲ್ಲಿ ತುಂಬ ಗೌರವವಿತ್ತು, ಆದರವಿತ್ತು. ಆದರ ಕುರುಹೆಂದೆ ಈ 'ಆಶುನಾಟಕ'ಗಳನ್ನು ಕೃತಜ್ಞತೆಯಿಂದ ಅವರ ಚಿರ ಆತ್ಮಕ್ಕೆ ಅರ್ಪಿಸಿದ್ದೇನೆ.

ಅದರಂತೆ ಶ್ರೀ. ಜೀವಣದಾಸ ಪುಣೇಕರ ಮತ್ತು ಅವರ ಬಂಧುಗಳು ಅಕಾಲದಲ್ಲಿ ಮೃತ್ಯುವಿಗೀಡಾದ ತಮ್ಮ ತಮ್ಮನಾದ ಗಣಪತದಾಸ ಪುಣೇಕರರ ಸ್ಮರಣಾರ್ಥವಾಗಿ ಐವತ್ತೊಂದು ರೂಪಾಯಿಯ ಕಾಣಿಕೆ ಸಲ್ಲಿಸಿದ್ದಾರೆ.

ತಮ್ಮ ಸ್ನೇಹದ ಕಾಣಿಕೆಯೆಂದು 'ಅಥಣಿಯ ಗೆಳೆಯರು' ಸಾಹಿತ್ಯೋತ್ಸವಕ್ಕೆ ಇಪ್ಪತ್ತು ರೂಪಾಯಿ ಸಲ್ಲಿಸಿದ್ದಾರೆ.

ಇವರೆಲ್ಲರಿಗೂ ನಾನು ಚಿರಋಣಿಯಾಗಿದ್ದೇನೆ.

ಈ 'ಆಶುನಾಟಕಗಳಿ'ಗೆ ಆಶೆ ಹುಟ್ಟಿಸುವಂತಹ ಚಿತ್ತಾಕರ್ಷಕ ಹೊದಿಕೆ-ಚಿತ್ರವನ್ನು ಗೆಳೆಯ ರಾಘವೇಂದ್ರರು ಬರೆದುಕೊಟ್ಟಿದ್ದಕ್ಕಾಗಿ ನಾನು ಅವರಿಗೆ ಎಂದಿಗೂ ಉಪಕೃತನಾಗಿದ್ದೇನೆ.

ಈ 'ಆಶುನಾಟಕ'ಗಳನ್ನು ನಿರ್ಮಿಸಿ, ಅಭಿನಯಿಸಿ, ಬರೆದುಕೊಟ್ಟ ಬಾಗಿಲುಕೋಟೆ, ಬೆಂಗಳೂರು, ಗದುಗಿನ ನಾಟ್ಯಸಂಘದವರಿಗೆ, ಆಶುನಾಟಕ ಸ್ಪರ್ಧೆಗೆ ಪರೀಕ್ಷಕರಾಗಿ ಕೆಲಸ ಮಾಡಿದ ಶ್ರೀಗಳಾದ ಕಾರಂತ, ಸಂಗೋರಾಮ, ವೆಂಕಟೇಶಯ್ಯ ಇವರಿಗೆ, ಆಶುನಾಟಕಗಳಿಗೆ ವಿಷಯ ಆಯ್ದುಕೊಟ್ಟು, ಆ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಿದ್ದಕ್ಕಾಗಿ ಶ್ರೀ. ರಂ. ಶ್ರೀ. ಮುಗಳಿಯವರಿಗೆ, ಕಾಣಿಕೆ ಸಲ್ಲಿಸಿ ಸಹಾಯಮಾಡಿದ ಡಾ. ಉಮಚಗಿ ಆನಂದರಾಯರು, ಜೀವಣದಾಸ ಪುಣೇಕರ, 'ಅಥಣಿಯ ಗೆಳೆಯರು' ಇವರಿಗೆ, ಹೊದಿಕೆಯ ಚಿತ್ರ ಬರೆದುಕೊಟ್ಟ ಶ್ರೀ. ರಾಘವೇಂದ್ರರಿಗೆ, ಇವರೆಲ್ಲರಿಗೂ ನಾನು ಬಹಳ ಕೃತಜ್ಞನಾಗಿದ್ದೇನೆಂದು ಇನ್ನೊಮ್ಮೆ ತಿಳಿಸಿ ಈ 'ಮೊದಲ ಮಾತು' ಮುಗಿಸುತ್ತೇನೆ.

—ಜಿ. ಬಿ. ಜೋಶಿ.

ಅರ್ಪಣ



ದಿವಂಗತ

ಡಾಕ್ಟರ್ ವಾಸುದೇವರಾವ ಉಮುಚಗಿ

ಇವರ

ಕಟುಮಧುರ ತತ್ತ್ವನಿಷ್ಠ ಜೀವನದ

ನೆನಪಿಗೆ

*



ಕವಿಯ ಸೋಲಿನಲ್ಲಿ ಪಾತ್ರವಹಿಸಿದ
ಬಾಗಿಲುಕೋಟೆಯ ವಾಸುದೇವ ವಿನೋದಿನಿ ನಾಟಕ ಸಭೆಯ ಸದಸ್ಯರು

ಕವಿಯ ಸೋಲು

"ಒಬ್ಬ ಸಂಸಾರಿಕನಾದ ಸಾಹಿತಿಯು
ಒಂದು ಕವನವನ್ನು ಒಂದೇ ದಿನದಲ್ಲಿ
ಕಟ್ಟಿ ಮುಗಿಸಲು ಪ್ರಯತ್ನಿಸಿ,
ಆಗದ್ದಕ್ಕೆ ನಿರಾಶನಾಗುವ ಬಗೆ"

೧-೫-೧೯೪೨

ವಿಷಯ ಕೊಟ್ಟದ್ದು . . ಸಂಜೆ ಐದು ಗಂಟೆಗೆ
ಅಭಿನಯ ಪ್ರಾರಂಭ . ರಾತ್ರಿ ಒಂಬತ್ತು ಗಂಟೆ
ಅಭಿನಯಿಸಿದ ವೇಳೆ . . ೨೫ ನಿಮಿಷ ಮಾತ್ರ

ಪಾತ್ರಗಳು

•

ಶ್ರೀಪತಿ . . . . ಕವಿ

ಶಾರದೆ . . . . . ಕವಿಯ ಹೆಂಡತಿ

ಯಮುನಕ್ಕ . . ಕವಿಯ ಅಕ್ಕ, ವಿಧವೆ

ಶ್ರೀನಿವಾಸಾಚಾರ್ಯ . ದೇಶಾವರಿ ಬ್ರಾಹ್ಮಣ

ವೆಂಕಣ್ಣನಾಯಕ. ಶ್ರೀಪತಿ ಇದ್ದ ಮನೆಯ ಮಾಲಕ

ಅಭಿನಯಿಸಿದವರು:

ಬಾಗಿಲುಕೋಟೆಯ ವಾಸುದೇವ ವಿನೋದಿನಿ ನಾಟಕ ಸಭೆಯವರು

ಪಾತ್ರವಹಿಸಿದವರು

•

ಶ್ರೀಪತಿ . ಶ್ರೀ. ಹಣಮಂತರಾವ ಬೆಣ್ಣೂರ

ಶಾರದೆ . . . ಶ್ರೀ. ನರಸಿಂಹ ಮುಳಗಿ

ಯಮುನಕ್ಕ . ಶ್ರೀ. ವೆಂಕಟರಾವ ಮಿರ್ಜಿ

ಶ್ರೀನಿವಾಸಾಚಾರ್ಯ. ಶ್ರೀನಿವಾಸ ಪರ್ವತಿ

ವೆಂಕಣ್ಣನಾಯಕ . ಶ್ರೀ. ವೆಂಕಣ್ಣ ಮಿರ್ಜಿ

ದೃಶ್ಯ

[ಶ್ರೀಪತಿಯ ಮನೆಯ ಪಡಸಾಲೆ. ಆಧುನಿಕ ಕನ್ನಡ ಗಣ್ಯಸಾಹಿತಿಗಳ ಛಾಯಾ ಚಿತ್ರಗಳು ಗೋಡೆಗಳನ್ನಲಂಕರಿಸಿವೆ. ಒಂದು ಮೇಜು; ಮೇಜಿನ ಹತ್ತಿರ ಎರಡು ಮೂರು ಕುರ್ಚಿಗಳು. ಮೇಜಿನ ಮೇಲೆ ಕನ್ನಡ ಪುಸ್ತಕ ತುಂಬಿದ ಒಂದು 'ಶೆಲ್ಫ್' ಒಂದು ಕಡೆಗೆ, ವರ್ತಮಾನಪತ್ರ ಇನ್ನೊಂದು ಕಡೆಗೆ, ಎದುರಿಗೆ ಸುಂದರ ಸುಳಿಗಳಲ್ಲಿ ಕೂಡಿಸಿದ ಎರಡು ಫೋಟೋ—ತನಗೆ ತೀರ ಬೇಕಾದವರೆಂದು ತೋರಿಸುವುದಕ್ಕಾಗಿ ಅವಕ್ಕೆ ಈ ಮಹತ್ವದ ಸ್ಥಾನ ದೊರಕಿದೆ. ಅದರ ಹತ್ತಿರವೆ ಬರೆಯುವ ಸಾಮಗ್ರಿ ಎಲ್ಲ ಸಿದ್ಧವಾಗಿದೆ.

ಶ್ರೀಪತಿಯು ವಿಚಾರದಲ್ಲಿ ತಲ್ಲೀನನಾಗಿ ಅಲ್ಲಿಯೆ ಅತ್ತಿಂದಿತ್ತ ತಿರುಗಾಡುತ್ತಿದ್ದಾನೆ. ವಿಚಾರದ ಆವೇಶವೆಲ್ಲ ಮುಖದ ಮೇಲೆ ಮೂಡಿ ಮರೆಯಾಗುತ್ತಿದೆ. ಶ್ರೀಪತಿ ತರುಣ. ಹಿಕ್ಕಿ ಮಿಂಚುವ ಕ್ರಾಪು ತಲೆಯ ಮೇಲೆ. ಮೀಸೆಯಿಲ್ಲದ ಮುಖ. ಮೈಮೇಲೆ ಅರ್ಧಂಗಿ. ಅದರ ಕಿಸೆಯಲ್ಲಿ 'ಫೌಂಟೆನ್ ಪೆನ್'. ಮುಂಗೈಗೆ ಗಡಿಯಾರ. ಬೆರಳ ನಡುವೆ ಸಿಗರೇಟು.]

ಶ್ರೀಪತಿ:—(ಸಿಗರೇಟು ಸೇದಿ ಹೊಗೆ ಬಿಟ್ಟು, ಹೊಗೆಯನ್ನು ನೋಡುತ್ತ) ಹಂ! ಹೊಳೆಯಿತು....ಕಾರ್ಮೋಡಗಳು....ಗುಡುಗು..ಮಿಂಚು.. ಮಳೆ....ಇದೆಲ್ಲ ಕೂಡಿದ ಕವನ! (ಕಾವ್ಯನಿರ್ಮಾಣಕ್ಕೆ ತೊಡಗುವನು) 'ಖಟ್ ಖಡಲ್ ಎಂದು ಖಟ್ ಖಡಲ್ ಎಂದು, ಕಾರ್ಮೋಡಗಳು ಉಸಿರುತಿರೆ' (ಎರಡು ಮೂರು ಸಲ ಇದನ್ನೆ ಉಚ್ಚರಿಸಿ) ಛೇ! ಎಲ್ಲಾ ಮಹಾಪ್ರಾಣಗಳು! ಕೇಳಿದವರ ಪಂಚಪ್ರಾಣ ಹಾರಿಹೋದಾವು....ಉಹುಂ, ಇದು ಬೇಡ. ರಮ್ಯವಾದುದನ್ನು ವರ್ಣಿಸಬೇಕು. ಒಳ್ಳೇದು..(ಅತ್ತಿತ್ತ ತಿರುಗುತ್ತ) ಹಂ! ಸಿಕ್ಕಿತು, ಸರಿಯಾದ ವಿಷಯ. 'ಸಾಯಂಕಾಲ....ಸೂರ್ಯಾಸ್ತ....ಹೊಂಬಣ್ಣದ ಕಿರಣಗಳು..' (ಯೋಚಿಸುತ್ತ) 'ದೇವರವಿ ಗಮಿಪ ನಸಸ್ತ್ರಾಚಲಕೆ। ದೇವಿಸಂಧ್ಯಾ ಸಂತೋಷಿಪುದೇಕೆ' (ಒಂದೆರಡು ಸಲ ಅಂದದ್ದನ್ನೆ ಅಂದು) ಛೇ! ಹಳೆಯ ಮಾದರಿಯಾಯಿತು ಇದು! ಈಗಿನವರಿಗೆ ಇದು ರುಚಿಸುವುದಿಲ್ಲ. ಅವರಿಗೆ ಕಂಡದ್ದನ್ನು ಕಂಡಹಾಗೆಯೆ ಹೇಳಬೇಕು. ಹಾಗಾದರೆ ಯಾವ ವಿಷಯ ಆರಿಸಿಕೊಳ್ಳಲಿ? (ಶರ್ಟಿನ ಗುಂಡಿಯ ಹತ್ತಿರಿದ್ದ ಫೌಂಟನ್ ಪೆನ್ ನೋಡಿ) ಹಂ! ನಾನೀಗ ಕಂಡದ್ದು ಇದನ್ನು. ಇದರ ಮೇಲೆಯೆ ಕವನ ಕಟ್ಟಿದರಾಯಿತು.

(ಯೋಚಿಸಿ) ಛೇ ! ಇದೂ ಬೇಡ. ಏನೋ ಈ ದಿನ ನನ್ನ ಮೆದುಳಿನ ಮೇಲೆ ಆಲಸ್ಯದ ಪರೆ ಬಂದಿರಬಹುದೇನು ? ವಿಚಾರ-ಝರಿಯು ನಿರರ್ಗಳವಾಗಿ ಮುಂದೆ ಹರಿಯದಾಗಿದೆ.... (ಸಿಗರೇಟು ಹೊತ್ತಿಸುತ್ತ) ಅದಕ್ಕೆ ಒಂದಿಷ್ಟು 'ಗ್ಯಾಸ್ ಪ್ರೆಶ್ಶರ್' ಕೊಡೋಣ, ಅಂದರೆ ಮುಂದೆ ಸುಗ್ಗುತ್ತದೆ.... (ವಿಚಾರದಲ್ಲಿ ಸಿಗರೇಟಿಗೂ ಬೆಂಕಿ-ಕಡ್ಡಿಗೂ ಸಂದರ್ಶನವೇ ಆಗದೆ ಕೈ ಸುಟ್ಟಾಗ ಎಚ್ಚರಗೊಂಡು) ಹಂ! ಹಂ!! ಕಾವ್ಯಸಮಾಧಿಗೆ ಒಯ್ಯುವ ಈ ಸಿಗರೇಟಿನ ಮೇಲೆಯೇ ಏಕೆ ಬರೆಯಬಾರದು ? (ಕುರ್ಚಿಯ ಮೇಲೆ ಕುಳಿತು, ಮನಸ್ಸಿನಲ್ಲಿ ಓಡಾಡುತ್ತಿದ್ದ ವಿಚಾರಗಳನ್ನು ಮುಖದ ಮೇಲೆ ತೋರ್ಪಡಿಸುತ್ತ, ಕಳ್ಳದನಿಯಲ್ಲಿ ಮೊದಲು ಸುರುವು ಮಾಡಿ ಆಮೇಲೆ ಗಟ್ಟಿಯಾದ ದನಿಯಲ್ಲಿ) 'ಸಂತಸದಿ ಝುರುಕಿಯನು ಎಳೆಯೆ, ಹೊಗೆಯು ಸುರಳಿಸುರಳಿಯಾಗಿ ಹರಿಯೆ' (ಈ ಸಾಲುಗಳನ್ನೆ ತಿರು ತಿರುಗಿ ಬೇರೆ ಬೇರೆ ಭಾವಗಳಲ್ಲಿ ಅನ್ನುತ್ತಿರುವಾಗ ಶಾರದೆಯು ಪ್ರವೇಶಿಸುವಳು.)

ಶಾರದೆ:—(ಗಂಡನ ಕಡೆಗೆ ನೋಡದೆ ತನ್ನಲ್ಲಿಯೆ) ದಿನಾಲು ಆ ಕವಿತಾ ಈ ಕವಿತಾ ಅಂತ ಕಟಿಗೋತ ಕೂಡತಾರ, ಅದರಿಂದರೆ ಏನೂ ಫಾಯಿದೆ ಇಲ್ಲ, ಪುರುಷಾರ್ಥ ಇಲ್ಲ. ಹೀಂಗಂತ ಹೇಳಿದರೂ ಕೇಳೂದಿಲ್ಲ. ಮನೀ ಸಂಸಾರದ ಕಡೆಗೆ ಲಕ್ಷ್ಯಾನs ಇಲ್ಲ. ಚಪಲಹಾರ ಮಾಡಿಸಿಕೊಡರಿ ಅಂತ ಎಷ್ಟುಸಾರೆ ಹೇಳಿದರೂ ದಾದs ಇಲ್ಲ. (ಶ್ರೀಪತಿಗೆ ತಿಳಿಯದಂತೆ ಮೇಜಿನ ಮೇಲಿನ ಸಂಯುಕ್ತ ಕರ್ನಾಟಕವನ್ನು ತಗೆದುಕೊಂಡು ಮೆಲ್ಲಗೆ ಅದನ್ನು ನೋಡುತ್ತ) ಅವ್ವ ! ಇದೂ ಒಂದು ಸೆಟ್ಟಗs ಆಯಿತು. ಇವರಿಗೆ ಬರೆಯೋದೂ ಸಿಕ್ಕಂಗಾಯ್ತು, ನನಗ ಚಪಲಹಾರಾನೂ ಸಿಕ್ಕ್ಯಾಂಗಾಯ್ತು (ಶ್ರೀಪತಿಯ ಕಡೆಗೆ ನೋಡಿ)ಅಲ್ಲ, ಇದನ್ನ ನೋಡೀರೇನೂ ಅಂದೆ ? (ಶ್ರೀಪತಿಯು ಉತ್ತರ ಕೊಡದೆ ತನ್ನ ವಿಚಾರದಲ್ಲಿಯೆ ಇದ್ದುದನ್ನು ನೋಡಿ) ಏನು, ಬಹಳ ವಿಚಾರದಾಗ ಮುಣುಗಿದ್ಹಾಂಗ ಕಾಣಸ್ತದs ?

ಶ್ರೀಪತಿ:—(ಹೊಗೆ ಬಿಡುತ್ತ) ಸಂತಸದಿ ಝುರುಕಿಯನು ಎಳೆಯೆ....

ಶಾರದೆ:—(ಗಟ್ಟಿಯಾದ ದನಿಯಲ್ಲಿ) ಏನದು ಏನದೂ ? ಇನ್ನೊಮ್ಮೆ ಅನ್ನರಿ ನೋಡೋಣ ! ಅಹಹಹ ಏನು ವಿಚಾರೊ ಏನೋ !

ಶ್ರೀಪತಿ:—(ಹೆಂಡತಿಯನ್ನು ನೋಡಿ ಕಕ್ಕಾವಿಕ್ಕಿಯಾಗಿ) ಅಂ, ಅಂಹ; ಏನೂ ಇಲ್ಲ, ಏನೂ ಇಲ್ಲ. ಏನಂದಿ ?

ಶಾರದೆ:—ಏನೂ ಇಲ್ಲ, ಆಗಳೆ ಏನೋ ಅಂದಿರಲ್ಲ, ಏನದೂ ?

ಶ್ರೀಪತಿ:—ಅದs, ಇಲ್ಲಿ ನೋಡು ಈ ಸಿಗರೇಟು ಸೇದಿದ್ದರಿಂದ ನನಗೆ ಕಾವ್ಯಸ್ಫೂರ್ತಿ ಬಂತು. ಕಾವ್ಯಕ್ಕ ಸ್ಫೂರ್ತಿ ಕೊಡುವ ಈ ಸಿಗರೇಟಿನ ಮೇಲೇ ಕವನ ಕಟ್ಟುತ್ತಿದ್ದೆ. ಹಂ, ತಡೆ. (ಅದೇ ಸಾಲುಗಳನ್ನು ಮತ್ತೆ ಅನ್ನುವನು)

ಶಾರದೆ:—ಅಯ್ಯ! ಇದೇನಿದೂ ಬೇಕಬೇಕಾದ್ದರ ವ್ಯಾಲೆ ಕವಿತಾ ಕಟ್ಟೋದೇನು? ಏನಾರೆ ಚಲೋ ಉಪಯೋಗ ಬೀಳುವ ಸಾಮಾನದ ವ್ಯಾಲರೆ ಕಟ್ಟಿದರ ಚಿಂತಿಲ್ಲ. ಏನ ಈಗಿನ ಕವಿಗಳೋ ಏನೋ! ಕಾಗೀ ವ್ಯಾಲೆ, ಗುಬ್ಬಿ ವ್ಯಾಲೆ, ಬೀಡಿ ಸಿಗರೇಟಿನ ವ್ಯಾಲೆ ಕವಿತಾ ಕಟ್ಟೂದs? ಇನ್ನೂ ನನ್ನ ಪುಣ್ಯಾ, ಚಪ್ಪಲೀ ವ್ಯಾಲೆ ಕಟ್ಟಲಿಲ್ಲಾ!

ಶ್ರೀಪತಿ:—ಅದ್ಯಾಕ, ಚಪ್ಪಲೀ ವ್ಯಾಲೂ ಬರದಾರ, ದಿನಕರ ದೇಸಾಯಿ ಅಂಬೋರು.

ಶಾರದೆ:—ತೀರಿ ಹೋಯಿತು; ಅದೂ ಬಂದು ಹೋಯಿತs! ಆಗಲಿ, ಏನೇನು ಕಾಣಬೇಕಾಗೇದೊ ಈ ಕಣ್ಣು! ಆಯಿತು, ಹಂಗಾರ ಬರೆಯೋದು ಬರೀತಿರಿ, (ಸಂಯುಕ್ತ ಕರ್ನಾಟಕವನ್ನು ತೋರಿಸಿ) ಇದರಾಗ ಬಂದ ಜಾಹೀರಾತು ನೋಡಿ ಅದಕ್ಕಾರs ಬರೆದರ ಒಂದು ಉಪಯೋಗಾದರೂ ಆದೀತು. ಈ ಸಿಗರೇಟಿನ ವ್ಯಾಲ ಬರೆದರ ಏನ್ಸಿಗ್ತದ ಮಣ್ಣು. ಅದೇನು ಹೊಟ್ಟೆಗೆ ಹಾಕ್ತsದ, ನೆತ್ತಿಗೆ ಹಾಕ್ತsದs ?

ಶ್ರೀಪತಿ:—(ಸಂಯುಕ್ತ ಕರ್ನಾಟಕವನ್ನು ಇಸಿದುಕೊಂಡು ನೋಡುತ್ತ) ಅದರಾಗ ಏನು ಬಂದದ ಮತ್ತ?

ಶಾರದೆ:—ಕವಿತಾ ಕಟ್ಟಿದವರಿಗೆ ಎರಡು ನೂರು ರೂಪಾಯಿ ಬಹುಮಾನ ಅಂತ.

ಶ್ರೀಪತಿ:—(ಲಕ್ಷ್ಯವಿಲ್ಲದೆ) ಅಲ್ಲs, ಹಣದಾಸೆಗೆ ಕವಿತಾ ಕಟ್ಟುವವ ನಾನಲ್ಲ. ಏನು ಹುಚ್ಚೀ ನೀನು; ಸ್ಫೂರ್ತಿ ರೊಕ್ಕ ಕೊಟ್ಟರ ಬರೂದಿಲ್ಲ. ಅದು ಒಳಗಿನಿಂದ ತಾನs ಚಿಮ್ಮಿ ಬರಬೇಕು ಚಿಮ್ಮಿ. ಆಗ ನೋಡು ಕವಿತಾದ ಸೂರಿ! ಇಂಥಾ ಈ ಬಹುಮಾನಕ್ಕ ಬಾಯಿ ತಗದು ಕವಿತಾ ಬರೆಯೊ ಮಬ್ಬ ಅಲ್ಲ ನಾನು.

ಶಾರದೆ:—ಸಾಕು, ಸಾಕು. ನಿಮ್ಮದೂ ಒಂದು ಮಾತs. ರೊಕ್ಕಾ ಅಂದರ ಜೀವಿಲ್ಲದ ಗಂಟೀ ನಾಲಗಿ ಬಡಕೋತದಂತ, ಇನ್ನ ಮನುಷ್ಯನ ನಾಲಗಿ ಕುಣೀಲಾರದs? ಹೆಂಗಸರ ಮಾತೂ ಅಂದರ ನಿಮಗ ಯಾವಾಗಲೂ ಹೀಂಗs; ಏನಾರೆ ಹೇಳಿದರ ಏನಾರೆ ಉತ್ತರ ಕೊಟ್ಟುಬಿಡೋದು. ಅಲ್ಲಾ, ಚಪಲಹಾರ ಮಾಡಿಸಿಕೊಡ್ರೀ ಅಂತ ನಿಮಗ ದುಂಬಾಲಬಿದ್ದು ಎಷ್ಟು ದಿನಾ ಆಯ್ತು ಹೇಳ್ರಿ ನೀವs? ಕೇಳಿದ ಸರ್ತಿಗೊಮ್ಮೆ 'ನನ್ನ ಹತ್ತಿಲೆ ದುಡ್ಡು ಇಲ್ಲಾ' ಅಂತ ಕೈ ಝಾಡಸ್ತೀರಿ, ಏನು ಮಾಡಬೇಕು? (ಅಳುಮೋರೆ ಮಾಡಿ ನಿಲ್ಲುವಳು)

ಶ್ರೀಪತಿ:—ಆಹಾ, ಹಿಂಗ ಮಾರಿ ಮಾತ್ರ ಮಾಡಬ್ಯಾಡ ನೋಡು. ಏನಂತೀದಿ ಹೇಳ್ಯರೆ ಹೇಳು?

ಶಾರದೆ:—ನೀವೀಗ ಅದರೊಳಗ ಬೇಡಿದ್ಹಂಗ ಕವಿತಾ ಕಟ್ಟಬೇಕು, ನಿಮಗs ಆ ಬಹುಮಾನ ಸಿಗಬೇಕು, ಅದನ್ನs ತಗೊಂಡು ನಾನು ಚಪಲ ಹಾರ ಮಾಡಿಸಿಕೋಬೇಕು ಅಂತೀನಿ.

ಶ್ರೀಪತಿ:—ಹೂಂ. (ಸಂಯುಕ್ತ ಕರ್ನಾಟಕವನ್ನು ಓದುತ್ತ) 'ಮನೋಹರ ಗ್ರಂಥಮಾಲೆಯ ಸಾಹಿತ್ಯೋತ್ಸವದ ಅಧ್ಯಕ್ಷರು ಶ್ರೀನಿವಾಸರು. ಈ ಉತ್ಸವಕ್ಕೆ ತಕ್ಕ ಸ್ವಾಗತಪದ್ಯವನ್ನು ರಚಿಸಿ ಕಳಿಸಿದವರಲ್ಲಿ ಮೊದಲನೆ ನಂಬರು ಬಂಡವರಿಗೆ ಎರಡು ನೂರು ರೂಪಾಯಿಗಳ ಬಹುಮಾನ.' ಇಷ್ಟೇ ಹೌದಲ್ಲೋ. ಆಗಲಿ. (ಬಳ್ಳೀ ಉತ್ಸಾಹದಿಂದ ಕುರ್ಚಿಯ ಮೇಲೆ ಕುಳಿತುಕೊಳ್ಳುವನು.)

ಶಾರದೆ:—ಮುಂದೆ ನೋಡಿದಿರೋ ಇಲ್ಲೋ. ಇವತ್ತೇ ಕಡೆಯ ತಾರೀಖು. ಸಂಜೆಯೊಳಗಾಗಿ ಟಪಾಲಿಗೆ ಹಾಕಬೇಕು. ನೀವೇನು ಸಿಗರೇಟು ಸೇದಿಕೋತ ಅದರ ಹೊಗೀ ಮ್ಯಾಲ ಕೂತುಕೊಂಡು ಸವಾರಿಗೆ ಹೊರಟಿರೀಂದ್ರ, ಹಗಲು ಯಾವದೋ ರಾತ್ರಿ ಯಾವದೋ ನಿಮಗ ಪತ್ತೇನೇ ಆಗೂದಿಲ್ಲ. ಅದಕ್ಕ ಮೊದಲಿಗೆ ಅದನ್ನ ಬರೆದು ಮುಗಿಸಿರೀ ಅಂತೀನಿ.

ಶ್ರೀಪತಿ:—ಹೌದು, ಅದೆಲ್ಲ ಖರೆ ಆದ. ಆದರ ಸ್ಫೂರ್ತಿ ಬರಬೇಕಲ್ಲ ಸ್ಫೂರ್ತಿ?

ಶಾರದೆ:—ಅದಕ್ಕೇನು ಮಾಡಬೇಕಿನ್ನ?

ಶ್ರೀಪತಿ:—ಇಷ್ಟೂ ತಿಳಿವಲ್ಲದs. ಒಂದು ಕಪ್ಪು First class ಕೆ. ಟಿ.

ಚಹಾ ಬಂತಂದರ ನೋಡು, ಅರ್ಧಾ ತಾಸಿನೊಳಗ ಕವಿತಾ ಹೊರಬಿತ್ತಂತ ತಿಳಕೊ.

ಶಾರದೆ:—(ನೈಯ್ಯಾರದಿಂದ, ಉಬ್ಬಿನಿಂದ ಒಳಕ್ಕೆ ಹೋಗಿ ಮುಖ ಸಪ್ಪಗೆ ಮಾಡಿಕೊಂಡು ಮರಳಿ ಬಂದು) ಚಹಾಕ್ಕ ಸಕ್ಕರೀನೇ ಇಲ್ಲಾ.

ಶ್ರೀಪತಿ:—ಸಕ್ಕರೀನೇ ಇಲ್ಲs! ಆಯಿತು ಇನ್ನ ನಮ್ಮ ಕವಿತಾನೂ ಸಪ್ಪಗs. ಕಿಸೆದೊಳಗ ಒಂದು ದುಡ್ಡೂ ಇಲ್ಲ ಕಾಣಸ್ತದ.

ಶಾರದೆ:—ಇಲ್ಲದಿದ್ದರ ಇಲ್ಲ. ನಾನೇ ಮಗ್ಗಲ ಮನೀಗೆ ಹೋಗಿ ಸ್ವಲ್ಪ ಕಡಾ ತಂದು ಮಾಡತೀನಿ. ಅಲ್ಲೀ ತನಕಾ ಅಂದ್ರ ಕವಿತಾ ಬರೆದು ಮುಗಿಸಿಬಿಡ್ರಿ.... ಇಕಾ, ನಿಮಗ ಬಂದ ಆ ಎರಡು ನೂರು ರೂಪಾಯಿ ನನ್ನವು ಮತ್ತೆ. (ಹೋಗುವಳು)

ಶ್ರೀಪತಿ:—(ಕುರ್ಚಿಯ ಮೇಲೆ ಬರೆಯಲು ಸಜ್ಜಾಗಿ, ಮತ್ತೊಮ್ಮೆ ಆ ಜಾಹೀರಾತನ್ನು ಓದುವನು) ಮನೋಹರ ಗ್ರಂಥಮಾಲೆಯ ಸಾಹಿತ್ಯೋತ್ಸವ. ಶ್ರೀ. ಶ್ರೀನಿವಾಸರು ಅಧ್ಯಕ್ಷರು. ಸ್ವಾಗತ ಪದ್ಯ! ಸರಿ.. 'ಸ್ವಾಗತವು ಸ್ವಾಗತವು ಶ್ರೀನಿವಾಸರಿಗೆ' (ಒಂದೆರಡು ಸಲ ಇದನ್ನೆ ಅನ್ನುತ್ತಿರುವಷ್ಟರಲ್ಲಿ ಶ್ರೀಪತಿಯ ಅಕ್ಕ ಬರುವಳು.)

ಯಮುನಕ್ಕ:—ಶ್ರೀಪತಿ, ಏ ಶ್ರೀಪತೀ! (ಶ್ರೀಪತಿಯು ತನ್ನ ಕಾವ್ಯದ ಗುಂಗಿನಲ್ಲಿ ಅತ್ತ ನೋಡುವುದಿಲ್ಲ) ಈಗಿನ ಮಂದೀನೇ ಒಂದು ಥರಾ! ನೋಡಿದಾಗೆಲ್ಲ ಹೊಗಿ ಬಿಡೂದು, ಏನಾರ ಬರಕೋತ ಕೂಡೂದು. ಮನ್ಯಾಗ ಏನು ನಡದದ, ಏನು ಇಲ್ಲ, ಏನು ಅದ, ಒಂದರೆ ನೋಡತಾನs ಮಹರಾಯಾ! ಗಂಡ ಹ್ಯಾಂಗ, ಹಾಂಗ ಹೆಂಡ್ತಿ. ಬೇಶ್ ಕೂಡಿಸ್ಯಾನ ಬ್ರಹ್ಮ ಈ ಜೋಡೀನ! ಆಗಲಿ, ನಮಗರೆ ಯಾಕ ಬೇಕು ಉಳಿದ ಪಂಚೇತಿ. ಬಂದ ಕೆಲಸ ಎಷ್ಟು ಅಷ್ಟು ಕೇಳಿದರಾತು. (ಒಂದೆರಡು ಹೆಜ್ಜೆ ಮುಂದೆ ಬಂದು ಶ್ರೀಪತಿಯನ್ನು ದಿಟ್ಟಿಸಿ) ಶ್ರೀಪತಿ, ಏ ಶ್ರೀಪತೀ! ಏನ ನಡಿಸೀಯಪ ಇದನ್ನ?

ಶ್ರೀಪತಿ:—ಏನೂ ಇಲ್ಲ ಅಕ್ಕಾ. ಏನೋ ಒಂದು ಕವಿತಾ ಬರದರ ಎರಡು ನೂರು ರೂಪಾಯಿ ಬಹುಮಾನ ಅಂತ. ಅದಕ್ಕಾಗಿ ನಡಿಸೀನಿ.

ಯಮುನಕ್ಕ:— ಹೀಂಗs! ಎರಡು ನೂರು ರೂಪಾಯಿ ಸಿಗತಾವs! ಅಯ್ಯ ಖೋಡೀ! ಹಂಗಾರ ಶ್ರೀಪತಿ, ಅನಾಯಸ ಊರೊಳಗ ಶ್ರೀಗಳವರು

ಬಂದಾರ, ಮನೀಗೆ ಪಾದಪೂಜಾಕ್ಕರೆ ಕರೆಯೋಣ. ಪುರಾಣದಿಂದ ಬರೋ ವಾಗ ಹೇಳಿ ಬರಲ್ಯಾ ಹಂಗಾರ?

ಶ್ರೀಪತಿ:—ಅಲ್ಲ ಅಕ್ಕಾ, ರೂಪಾಯಿ ಇವತ್ತs ಬರತಾವಂತ ತಿಳ-ಕೊಂಡೇನು ?

ಯಮುನಕ್ಕ:— ಇಲ್ಲೇನು ? ನನಗೇನು ತಿಳಿಬೇಕಪ್ಪ ಅದೆಲ್ಲ. ಹಂಗಾರ ರೂಪಾಯಿ ಬಂದ ದಿವಸ ಕರೆಯೋಣ.

ಶ್ರೀಪತಿ:—ಅಕ್ಕಾ, ಆ ರೂಪಾಯಿ ನನ್ನವಲ್ಲ.

ಯಮುನಕ್ಕ:— ಯಾರವು ಹಂಗಾರ ?

ಶ್ರೀಪತಿ:—ಆಕೀವು. ಆಗಳೆ ವಚನ ಕೊಟ್ಟೇನಿ. ಬೇಕಾದರ ಆಕೀನ್ನ ಕೇಳು.

ಯಮುನಕ್ಕ:— ಆಹಾ, ಆಗಳೆ ಬಾಯಿಬೀಗ ಬಿದ್ದದಲ್ಲ ! ನನ್ನ ಹಣೇ ಬರಹ ! ಯಾರೇನು ಮಾಡೋದು ! ನಾಯಿಹಾಂಗ ಬದುಕೋದು ನನ್ನ ದೈವದಾಗ ಬರದದ. ಅಂದಮ್ಯಾಲ ನೀನಾರೆ ಏನು ಮಾಡೀ ! ಅದs ಅವರು ಇದ್ದರ ನನ್ನ ಗತಿ ಹಿಂಗ್ಯಾಕ ಆಗ್ತಿತ್ತು? ಅವರ್ನ ಇವರ್ನ ಯಾಕ ಕೇಳಲಿ, ನನ್ನ ಹಾದಿ ನಾ ಕಂಡಕೋತೀನಿ. ನಂದು ಈ ಮನಿಯೊಳಗ ಏನ ನಡೀತದ ಅಂತ ನಾ ಇಲ್ಲಿ ಇರ್ಲಿ ! ಮುಖ್ಯ ನಂದೇ ತಪ್ಪು. (ಅಳುವಳು)

ಶ್ರೀಪತಿ:—ಅಕ್ಕಾ, ಈಗ ಅಳೋದಕ್ಕೆ ಏನಾಯ್ತು ? ಯಾರು ಏನು ಅಂದರು ನಿನಗ? ಸುಮ್ಮಸುಮ್ಮನೆ ರಂಭಾಟ ಹೂಡತೀದಿ. ನಾವಿಬ್ಬರೂ ನಿನಗ ಹೊರತಿದ್ದೀವs? ಹೇಳಿದ್ಹಾಂಗ ಕೇಳಿಕೊಂಡು ಇದ್ದೀವಿ. ಹೀಂಗ ಇದ್ದೂ ನೀನು ಸಿಟ್ಟುಮಾಡಿಕೊಂಡರ ಏನ ಬಂತು? ಸ್ವಾಮಿಗಳನ್ನು ಕರೆ ಯೋದು ಹೌದಲ್ಲೊ, ಆಗಲಿ, ಮುಂದೀದೆಲ್ಲಾ ಕರೆಯೋದು ಆಗಲಿ. ಒಂದು ದಿವಸ ನಾವೂ ಕರೆಯೋಣಂತ.

ಯಮುನಕ್ಕ:— (ಸಮಾಧಾನದಿಂದ) ಆಗಲಪ್ಪಾ. ಹಂಗೇ ಮಾಡು. ಆದರ ಇವತ್ತ ಪುರಾಣದ ಮಂಗಳ ಅದ. ತಟ್ಟ್ಯಾಗ ಹಾಕಲಿಕ್ಕೆ ಒಂದು ಎಂಟಾಣೆ ಆರೆ ಕೊಡು.

ಶ್ರೀಪತಿ:—ಈಗ ನನ್ನ ಹತ್ತಿರ ಒಂದು ಬಿಲ್ಲಿ ಸಹಿತ ಇಲ್ಲಾ. ನೀನs ನಿನ್ನ ಹತ್ತಿರ ಇದ್ದಷ್ಟು ಹಾಕು. ಇಲ್ಲದಿದ್ದರ ಕೈಗಡ ಇಸಕೊ, ಹಿಂದಿನಿಂದ

ಕೊಡತೀನಿ. ಇಷ್ಟ್ಯಾಕ. ನಾಳೆ ನಮ್ಮ ತೋಟದ ರೈತ ರೂಪಾಯಿ ತಗೊಂಡು ಬರತಾನ. ಆ ರೂಪಾಯಿ ನೀನs ಇಸಕೊಂಡು ಬಿಡು.

ಯಮುನಕ್ಕ:—ಖರೇನs, ನೋಡು ?

ಶ್ರೀಪತಿ:—ಖಟ್ಟಖರೆ. (ಹೊರಗೆ ನೋಡಿ) ಅಕಾ, ತೆಗ್ಗಿನಮನಿ ತುಂಗಕ್ಕ ನಿನ್ನ ಪುರಾಣಕ್ಕ ಬರತಾಳ ಕಾಣಸ್ತದ ನೋಡು.

ಯಮುನಕ್ಕ:— ಹೌದು. ನಿಂದರ್ರೀ ತುಂಗಕ್ಕಾ, ಬಂದೆ. ಬರ್ತೀನಪ್ಪಾ ಶ್ರೀಪತಿ. (ಹೋಗುವಳು)

ಶ್ರೀಪತಿ:—ಉಶ್ ಅಪ್ಪಾ ! ಅಂತೂ ಪೀಡಾ ತಪ್ಪಿತು. ಏನೋ ಶಾರದಾಸ ಕವಿತಾಕ್ಕ ಬಲ ಇದ್ದ್ಹಾಂಗ ಕಾಣಸೂದಿಲ್ಲ......ನೋಡೋಣ.

(ಮತ್ತೆ ಬರೆಯಲು ಪ್ರಾರಂಭಿಸುವನು)

'ಸ್ವಾಗತವು ಸ್ವಾಗತವು ಶ್ರೀನಿವಾಸರಿಗೆ ।
ಸ್ವಾಗತವು ಸುಸ್ವಾಗತವು ಶ್ರೀನಿವಾಸರಿಗೆ ॥
ಸಾಹಿತ್ಯದಾಗಸದಲ್ಲಿ, ಹತ್ತೈದು ಹೊಸ
ತಾರೆಗಳು ಮಿನುಗುತಿರೆ........'

[ದೇಶಾವರಿ ಬ್ರಾಹ್ಮಣನೊಬ್ಬನು ಪ್ರವೇಶಿಸುವನು]

ಶ್ರೀನಿವಾಸಾಚಾರ್ಯ:— ಸ್ವಾಗತವು ಸ್ವಾಗತವು ಶ್ರೀನಿವಾಸರಿಗೆ ! ಅಬ್ಬ! ರಾಯರು ಎಷ್ಟು ದೊಡ್ಡಮನಸ್ಸಿನವರು ಅಂತೀನಿ. ಅಲ್ಲ, ರಾಯರ, ನಾನು ಬಡಬ್ರಾಹ್ಮಣ. ನನಗ್ಯಾಕ ಇಷ್ಟು ಸ್ವಾಗತ ಅಂತೀನಿ—ಸ್ವಾಗತ ಇಲ್ಲದೇನೇ ಬರುವವರು ನಾವು—ನಮಗ್ಯಾಕ ಇಷ್ಟು ಸ್ವಾಗತ ಅಂತೀನಿ !

ಶ್ರೀಪತಿ:—ಸ್ವಾಮಿ, ಸ್ವಾಗತವು ತಮಗಲ್ಲ, ಶ್ರೀನಿವಾಸರಿಗೆ.

ಶ್ರೀನಿವಾಸ:—ಅದಕ್ಕs ರಾಯರ, ನಮಗ ಸ್ವಾಗತ ಬ್ಯಾಡಾ ಅಂದೆ.

ಶ್ರೀಪತಿ:—ನಿಮಗಲ್ಲ ಅಂತ ಹೇಳಲಿಲ್ಲs? ನಿಮಗ್ಯಾಂವ ಸ್ವಾಗತ ಮಾಡುವವ !

ಶ್ರೀನಿವಾಸ:—ಅಲ್ಲ, ನೀವೇ ಅನ್ನಲಿಲ್ಲ, ಶ್ರೀನಿವಾಸರಿಗೆ ಸ್ವಾಗತ ಅಂತ?

ಶ್ರೀಪತಿ:—ಹೌದು, ಅಂದೆ. ಮುಂದೇನು ?

ಶ್ರೀನಿವಾಸ:—ಮತ್ತ ನಾನೇ ಶ್ರೀನಿವಾಸ! ಅದಕ್ಕs ನಮಗ್ಯಾಕ ಷ್ಟ ಸ್ವಾಗತ ಅಂತ?

ಶ್ರೀಪತಿ:—(ನಗುತ್ತ) ಅಯ್ಯೋ ಮಹರಾಯಾ! ಶ್ರೀನಿವಾಸ ಅಂದರ ಸೀನಲ್ಲ; ಮನೋಹರ ಗ್ರಂಥಮಾಲೆಯ ಸಾಹಿತ್ಯೋತ್ಸವದಲ್ಲಿ ಅಧ್ಯಕ್ಷರಾಗಿ ಬರುವ ಶ್ರೀನಿವಾಸರು; ಅಂದರೆ ಮಾಸ್ತಿ ವೆಂಕಟೇಶ ಐಯ್ಯಂಗಾರ್ಯರು. ತಿಳಿಯಿತೇನು ?

ಶ್ರೀನಿವಾಸ:—ಮಾಸ್ತಿಯವರ್‍ರೀ, ಬೆಳಗಾಂವಿ ಸಾಹಿತ್ಯಸಮ್ಮೇಲನಕ್ಕೆ ಬಂದಿದ್ದರು ? ಅವರು ಲೆಕ್ಚರು ಹ್ಯಾಂಗ ಕೊಡತಾರ ಅಂದ್ರೀ....!

ಶ್ರೀಪತಿ:—ಮಹರಾಯರs ಈಗ ನಿಮ್ಮ ಲೆಕ್ಚರಂತೂ ಸಾಕುಮಾಡಿರಿ. ದಯಮಾಡಿ ಬಂದ ಹಾದಿ ಹಿಡಿದು ಹೋಗರಿ. ನಮಗಿಷ್ಟು ಈಗ ಜರೂರ ಕೆಲಸ ಅದ. ಇದನ್ನು ಮುಗಿಸಿ ಈಗಿಂದೀಗ ಟಪಾಲಿಗೆ ಹಾಕಬೇಕಾಗಿದೆ.

ಶ್ರೀನಿವಾಸ:—ಏನದು ರಾಯರ ?

ಶ್ರೀಪತಿ:—ಏನೂ ಇಲ್ಲ, ಒಂದು ಕವಿತೆ.

ಶ್ರೀನಿವಾಸ:—ರಾಯರು ಕವಿತಾ ಕಟ್ಟತೀರೇನು ? (ಬಾಗಿ ಬರೆದದ್ದನ್ನು ಓದಲು ಹವಣಿಸುವನು) ರಾಯರ, ನಿಮ್ಮ ಅಕ್ಷರೇನು ಮುತ್ತಿನಾಂಗ ಅವರೀ ! ಕವಿತಾ ಏನೊ ಬಹಳ ಸರಸ ಇದ್ದಾಂಗ ಕಾಣಸತದ ರಾಯರs !

ಶ್ರೀಪತಿ:—ನಿಮ್ಮ ಸರ್ಟಿಫಿಕೇಟು ಸಿಕ್ಕಿತಿಲ್ಲೊ, ಇನ್ನು ಬಹುಮಾನದ ಅವಶ್ಯಕತೆ ಉಳಿಲೇ ಇಲ್ಲ. ಅದಿರಲಿ, ನಿಮ್ಮ ಕೆಲಸ ಏನು ? ನೀವು ಯಾಕ ಬಂದೀರಿ ? ನೀವು ಯಾರು ? ನಿಮ್ಮ ಕೆಲಸ ಏನಾದರೂ ಇದ್ದರ ತೀವ್ರ ಮುಗಿಸಿಕೊಂಡು ಹೊರಡರಿ.

ಶ್ರೀನಿವಾಸ:—ಅಲ್ಲ ರಾಯರ, ಅದೇನಾರ ಇರಲಿ ಬಿಡಿರಿ. ಈಗಿನ ಮಂದೀ ಕವಿತಾನ ನನ್ನ ಮನಸ್ಸಿಗೆ ಬರೂದಿಲ್ಲ ನೋಡ್ರಿ ರಾಯರ. ನಿಮ್ಮ ಧರತೀ ನೋಡಿದರ ಜೈಮಿನಿಭಾರತದ್ಹಾಂಗ ಅದ. ಅಲ್ಲ ರಾಯರ, ಈಗಿನ ಕವಿಗಳು ಏನ ಕವಿತಾ ಬರೀತಾರ ಅಂತೀರಿ— 'ಹಕ್ಕಿ ಹಾರುತಿದೆ ನೋಡಿದಿರಾ!' ಅಂತ. ಇವರ ಕವಿತಾ ಓದಿದರ 'ನಮ್ಮ ಪ್ರಾಣ ಹಾರುತಿದೆ ನೋಡಿದಿರಾ !' ಅನಬೇಕಾಗತದ ನಾವು. ಇವೇನ್ರಿ, ಇವು ಕವಿತಾ ಏನು ಇವು ? ಇನ್ನೂ ನೋಡಿಲ್ಲ ರಾಯರs ನೀವು. ಇನ್ನೊಬ್ಬವ ಬರವಾನ, ಅದನ್ನ ಓದಿ ನನಗ ಹುಚ್ಚನಗಿ ಬಂತೇನ್ರುಪ. 'ಕರಿಮರಿ ನಾಯಿ ಕುಂಯಿಗುಡುತಿತ್ತು' ಅಂತ ನಾಯಿಯ ಮ್ಯಾಲ ಕವಿತಾನs ? ಮತ್ತ ಇನ್ನೂ ಎಂಥೆಂಥಾವು ಅವ ಅಂದ್ರಿ–

'ನೂಲೋಲ್ಯಾಕ ಚೆನ್ನೀ? ಕದರಿಲ್ಲೋ ಜಾಣಾ' ಏನ್ರಿ ರಾಯರ, ಹೆಂಗಸರ ಹಾಡಿನಂಥಾವು ಇವು ಕವಿತಾನs? ಅದೇ ನಮ್ಮ ಲಕ್ಷ್ಮೀಶ ಕವಿ ಬರದಾನ ನೋಡ್ರಿ, ಅಂದ್ರ ದಿಕ್ಕು ತಪ್ಪಿ ಹೋಗಬೇಕು.

'ತಲ್ಲಕ್ಷಣಂಗಳಿಂ ಸಲ್ಲಲಿತವಾದ ಹಯ ।
ವಿಲ್ಲಿ ವಿಧಿವಶದಿಂದ ವಿಲ್ಲದಿರ್ದೊಡೆ ಧರಾ ।
ವಲ್ಲಭನ ರಂಜಿಸುವ ಪೆಲ್ಲಡಿಗಳಂ ಕಾಣಬಲ್ಲೆನೆ ಮಹೀತಳದೊಳು ॥
ಎಲ್ಲಿರ್ದೊಡಾ ತಾಣದಲ್ಲಿ ಪೊಕ್ಕರಸಿ ತಂ ।
ದಲ್ಲದೆನ್ನಯ ಭಾಷೆ ಸಲ್ಲದಿದಕೆಂತೆನುತೆ ।
ಘಲ್ಲಿಸುವ ಚಿಂತೆಯಿಂ ನಿಲ್ಲದೆ ವೃಕೋದರಂ ತಲ್ಲಣಿ........'

ಶ್ರೀಪತಿ:—(ನಡುವೆಯೆ ನಿಲ್ಲಿಸಿ) ಸಾಕು, ಸಾಕು. ಏನ್ರಿ ಸ್ವಾಮಿ, ನಿಮ್ಮ ಕವಿತಾ ಗಡಗಿನಿಂದ ಹಿಡಿದು ಹುಟಗಿ ತನಕಾ ಅಂದರೂ ಮುಗಿಯೂ ಹಾಂಗ ಕಾಣಸೂದಿಲ್ಲ! ದುಡ್ಡು ಕೊಟ್ಟು ಹಚ್ಚಿ ಎರಡು ದುಡ್ಡು ಕೊಟ್ಟು ಬಿಡಿಸ ಬೇಕನ್ನೊ ಪೈಕಿ ಕಾಣಸತೀರಿ ನೀವು. (ಸಿಟ್ಟಿನಿಂದ) ಸುಮ್ಮನ ಹೊರಗ ಹೋಗತೀರೋ ಏನು ಅರ್ಧಚಂದ್ರಪ್ರಯೋಗ ಆಗಬೇಕೋ? ಬಹಳ ವಿಚಿತ್ರ ವ್ಯಕ್ತೀನs ಕಾಣಸತೀರಲ್ಲ!

ಶ್ರೀನಿವಾಸ:—ಹಾಂಗೇನಿಲ್ಲ ರಾಯರ. ನಮ್ಮ ಹುಡುಗನ ಮುಂಜ್ವಿ ತಿರುಪತ್ಯಾಗ ಮಾಡಬೇಕೂ ಅಂತ ಬೇಡಿಕೊಂಡೀವಿ. ಅದಕ್ಕ ತಮ್ಮಿಂದ ಏನಾದರೂ ಸಹಾಯ ಆದೀತು ಅಂತ....

ಶ್ರೀಪತಿ:—ಏನ ಅಡ್ಡಿ ಇಲ್ಲ ಮಹಾಸ್ವಾಮಿ, ಬರ್ರಿ. ಏಕಾದಶೀ ಮನಿಗೆ ಗೋಕುಲಷ್ಟಮಿ ಬಂದ್ಹಂಗಾತು.

ಶ್ರೀನಿವಾಸ:—ಏನ್ರಿ ರಾಯರ, ತಮ್ಮಂಥವರು ಹೀಂಗಂದರ?

ಶ್ರೀಪತಿ:—ಏನೂ ಇಲ್ಲ. ಈಗ ಯುದ್ಧದ ದಿವಸಾ. ಗಾಡಿಯಲ್ಲಿ ಜಾಗಾನೂ ಸಿಗೂದಿಲ್ಲ. ತಿರುಪತಿ ತನಕಾ ಹೋಗೋ ಶ್ರಮ ಯಾಕ ತಗೋತೀರಿ ಅಂತ.

ಶ್ರೀನಿವಾಸ:—ನನಗೆಲ್ಲಿ ಬೇಕಾಗಿತ್ತು ರಾಯರs, ನಮ್ಮಾಕಿ ಹರಕೀ ಕಾಲಾಗ ಇಷ್ಟೆಲ್ಲ ಪೀಕಲಾಟ.

ಶ್ರೀಪತಿ:—(ಸ್ವಗತ) ಅಂತೂ ಈ ರಿಪಿ ಮಹರಾಯ ನಮ್ಮ ಬೆನ್ನು ಬಿಡುವ ಲಕ್ಷಣವಿಲ್ಲ. ಏನು ಮಾಡಬೇಕಿನ್ನು? (ಪ್ರಕಾಶ) ಸ್ವಾಮಿ, ಈಗ ನನ್ನ ಹತ್ತರ ದುಡ್ಡು ಇಲ್ಲ. ಇಲ್ಲಿ ನಿಮಗೇನೂ ಸಿಗುವದಿಲ್ಲ. ದಯಮಾಡಿ ಹೊರಡಿರಿ ಇನ್ನ. ಮಾತಾಡಲಿಕ್ಕೆ ನನಗ ಹೊತ್ತೂ ಇಲ್ಲ.

ಶ್ರೀನಿವಾಸ:—ಇಷ್ಟ್ಯಾಕ ಸಿಟ್ಟು ರಾಯರ, ಹೋಗತೀನಿ, ನೀವು ದುಡ್ಡು ಕೊಡದಿದ್ದರ ಇಲ್ಲ. ಮತ್ತೇನಾದರ ೩—(ಮೇಜಿನ ಮೇಲಿನ ಒಂದು ಪುಸ್ತಕ ತೆಗೆದುಕೊಂಡು ಅದನ್ನು ಓದುತ್ತ ಕುರ್ಚಿಯ ಮೇಲೆ ಕುಳಿತು) ರಾಯರ! ಭರಮಪ್ಪನ ಭೂತ! ಜಾಗೀರದಾರರು ಬರದ ಹೊಸ ಪುಸ್ತಕ ಇದೇ ಏನ್ರಿ? ಅವರೂ ಏನ ಬರೀತಾರಂದ್ರೀ, ಛೇ, ಛೇ. ಅವರು ಬರೆಯೋದೂ ಹಂಗೆ, ಮಾತಾಡೋದೂ ಹಂಗೆ, ನೋಡ್ರಿ.

ಶ್ರೀಪತಿ:—(ರೊಚ್ಚಿಗೆದ್ದು) ಅದು ಭರಮಪ್ಪನ ಭೂತಾ, ನೀನು ನನ್ನ ಭೂತಾ. ಹೋಗು ಮಹರಾಯಾ, ಬೇಕಾದರ ಆ ಪುಸ್ತಕಾ ಸಹಿತ ತಗೊಂಡು ಹೋಗು. ದಯಮಾಡಿ ಮೊದಲ ಹೊರಡು.

ಶ್ರೀನಿವಾಸ:—ಛೇ ಛೇ ಹಂಗ್ಯಾಕ ರಾಯರ. ಅದನ್ಯಾಕ ಒಯ್ಯಲಿ. ನಾಲ್ಕು ರಸ್ತೆ ಕೂಡಿದಲ್ಲೆ ಇಟ್ಟರೂ ಯಾರೂ ಒಯ್ಯೂದಿಲ್ಲ ಅದನ್ನ. ನಾವೇನ್ರಪಾ ಹಳ್ಳಿಯವರು. ನಿಮ್ಮಿಂದ ಏನೋ ಸುದ್ದಿ ತಿಳಕೊಂಡು ಹೋಗಬೇಕೂ ಅಂತ—ಅಲ್ಲ ರಾಯರ, ಮೊನ್ನೆ ವಿಶಾಖಾಪಟ್ಟಣದ ಮ್ಯಾಲ ಬಾಂಬು ಬಿತ್ತಂತ? ಯುದ್ಧ ಅಗದೀ ಸಮೀಪಕ್ಕೇ ಬಂದ್ಹಾಂಗ ಆತೆರಪಾ!

ಶ್ರೀಪತಿ:—ಹೌದು ಹೌದು. ಮನ್ಯಾಗs ಬಂದು ನಿಂತದ. ಇನ್ನ ಸ್ವಲ್ಪ ಹೊತ್ತಾದರ ನಿಮ್ಮ ತಲೀಮ್ಯಾಲs ಬಾಂಬು ಬೀಳತಾವ. (ಸ್ವಗತ) ಈ ಪೀಡಾ ಲಗೂ ಹೋಗೂ ಹಾಂಗ ಕಾಣಸೂದಿಲ್ಲ.

ಶ್ರೀನಿವಾಸ:—ಅಲ್ಲ ರಾಯರ, ಅದೇನು, ರಾಜಗೋಪಾಲಾಚಾರ್ಯರು ವರ್ಕಿಂಗ್ ಕಮಿಟಿಗೆ ರಾಜೀನಾಮೆ ಕೊಟ್ಟರಂತ? ಗಾಂಧೀಗೆ ಅವರಿಗೆ ಬಡದಾಟ ಆತೇನ್ರಿ? ಅಲ್ಲ, ರಾಜಗೋಪಾಲಾಚಾರೀ ಅಂಥವರೇ ಕೂತು ಪಾಕಿಸ್ತಾನಾ ಕೊಡಬೇಕು ಅಂದರ ನಮ್ಮ-ನಿಮ್ಮಂಥವರ ಗತಿ ಏನ ರಾಯರs?

ಶ್ರೀಪತಿ:—ಅಧೋಗತಿ! ಅಲ್ಲ ಸ್ವಾಮಿ, ನನ್ನ ನೀವು ಏನಂತ ತಿಳಕೊಂಡೀರಿ? ನಾನೂ ನಿಮ್ಮಂತೆ ಒಬ್ಬ ಮನುಷ್ಯ. ನಾನೇನು ಸಾರ್ವಜನಿಕ ವಾಚನಾಲಯ ಅಲ್ಲ. . ಇಷ್ಟೆಲ್ಲ ಮಾಹಿತಿ ಬೇಕಾಗಿದ್ದರೆ ಹೋಗಿ ವರ್ತಮಾನ ಪತ್ರ ಕೊಂಡು, ಇಲ್ಲದಿದ್ದರ ಇನ್ನೊಬ್ಬರದರೊಳಗ ತಲಿ ಹಾಕಿ, ಓದಿರಿ. ಅದಕ್ಕೂ ಹೆಚ್ಚಿಗೆ ಬೇಕಾಗಿದ್ದರೆ ವರ್ಧಾಕ್ಕೆ ಹೋಗಿ ಗಾಂಧೀಜಿಯವರ ಭೆಟ್ಟಿಯಾಗಿ ಬರ್ರಿ; ಮದ್ರಾಸಕ್ಕೆ ಹೋಗಿ ರಾಜಾಜಿಯ ಭೆಟ್ಟಿ ಆಗಿ ಬರ್ರಿ. ಅಂದರ ಎಲ್ಲಾ ತಿಳೀತದ. ಹುಂ, ಇಲ್ಲಿಂದ ಮೊದಲ ಹೊರಡಿರಿ. (ಕೈ ಹಿಡಿಯಲು ಹೋಗುವನು)

ಶ್ರೀನಿವಾಸ:—ಛೆ, ಛೇ! ಇಲ್ಲ ರಾಯರ! ಹೋಗತೀನಿ. ಹೋಗೋದಕ್ಕೇನೂ ಅಡ್ಡಿ ಇಲ್ಲ; ಆದರೆ ಮಧ್ಯಾಹ್ನದ ಹೊತ್ತು ಆಯ್ತು. ಇಲ್ಲೇ ಸ್ವಲ್ಪ ಭೋಜನ ತೀರಿಸಿಕೊಂಡು ಬಿಸಿಲು ತಗ್ಗಿದ ವ್ಯಾಲ ಊರಿಗೆ ಹೋಗಬೇಕೂಂತ. ರಾಯರ, ತಮ್ಮ ಮನಸ್ಸು ದೊಡ್ಡದು ಏನ್ರಿಪಾ!

ಶ್ರೀಪತಿ:—(ಸ್ವಗತ) ಛೆ ಛೇ! ಅಂತೂ ಈ ಅಸಾಮಿ ಅಶನ ಕೆಚ್ಚಿದ ಹೊರತು ನಮ್ಮಲ್ಲಿಂದ ಏನು ಕದಲೋಹಾಂಗ ಕಾಣೂದಿಲ್ಲ. (ಪ್ರಕಾಶ) ಆಗಲಿ, ಮಹರಾಯಾ. ಆದರೆ ನನಗೀಗ ಬಹಳ ಕೆಲಸ ಅದ. ಅದು ಮುಗಿಯೋ ತನಕ ಹೊರಗ ಹೋಗಿ ಬರ್ರಿ ಬೇಕಾದರೆ. ಅಡಿಗಿಯಾದಮೇಲೆ ಕರೆಕಳಸತೀನಿ. ಕರೆಕಳಸದ ಜನರ ನೀವು ಒಳಗ ಬಂದರ, ಇವತ್ತ ಊಟ ಇಲ್ಲದನಸ ಹೋಗಬೇಕಾಗತದ ಗೊತ್ತಿಲಿ!

ಶ್ರೀನಿವಾಸ:—ರಾಯರ, ನಾ ಹೇಳಿಲ್ರೆ ನಿಮ್ಮದು ದೊಡ್ಡ ಮನಸ್ಸು ಅಂತ. ನೀವು ಕರೆಯೋ ತನಕ ಹೊರಗೇ ಇರತೀನಿ. ಅಲ್ಲೀ ತನಕ ಓದಲಿಕ್ಕೆ ಈ ವರ್ತಮಾನಪತ್ರ ಇಷ್ಟು ಒಯ್ದಿರತೀನಿ ರಾಯರ, ಹಃ ಹಃ ಹಃ.

ಶ್ರೀಪತಿ:—ಆಗಲಿ. ಸದ್ಯಕ್ಕೆ ಹೊರಗ ಹೋದರೆ ಸಾಕಾಗೇದ. (ಆಚಾರಿಯು ಹೋಗಿ ಬಂದು ಹೋಗಿ ಬಂದು ಕೊನೆಗೊಮ್ಮೆ ಹೋಗುವನು) ಉಶ್ಶ್! ಅಂತೂ ಶಾರದೆ ಯಾವ ಮುಹೂರ್ತದಲ್ಲಿ ಈ ಬಹುಮಾನಕ್ಕೆ ಆಸೆ ಮಾಡಿದಳೋ! ಕವಿತಾ ಮುಗಿಯುವಂತಿಲ್ಲ, ಬಹುಮಾನ ದೊರಕುವಂತಿಲ್ಲ; ಶಾರದೆಗೆ ಚಪಲಹಾರ ಕನಸಿನ್ಯಾಗಿನ ಗಂಟು! (ಶಾರದೆ ಚಹಾ ತೆಗೆದುಕೊಂಡು ಬರುವಳು)

ಶಾರದೆ:—ಇಕಾ, ಚಹಾ ತಂದೀನಿ ಅಂದೆ. (ಶ್ರೀಪತಿ ಕನಸಿನಿಂದ ಎಚ್ಚತ್ತವನಂತೆ ಎದ್ದು ನಿಲ್ಲಲು) ಕವಿತಾ ಮುಗೀತೇನು ?

ಶ್ರೀಪತಿ:—ಆಂ! ಕವಿತಾನs? ಹುಂ, ಮುಗೀತದ, ನನ್ನ ಅವತಾರ ಮುಗಿದ ಪ್ಯಾಲ! (ಕಪ್ಪು ತೆಗೆದುಕೊಂಡು) ಸುರುವು ಮಾಡೋದಕ್ಕೇ ನಮ್ಮ ಅಕ್ಕಾ, ಮಹಾರಾಯಳು ಬಂದು ರಂಭಾಟ ಮಾಡಿ ಹೋದಳು. ಆಕಿ ಹೋಗೂದರಾಗs ಇನ್ನೊಂದು ಪೀಡಾ ಗಂಟುಬಿತ್ತು. ಹೀಂಗಾದರ ಏನ ಬರೀತಿನ ನನ್ನ ತಲಿ!

ಶಾರದೆ:—ಮತ್ತ ಯಾರು ಬಂದರು ?

ಶ್ರೀಪತಿ:—ನೋಡು, ಅಲ್ಲಿ ಹೊರಗ ಕೂತಾನ. ನಿಮ್ಮ ಬೀಗರ ಪೈಕಿ ಕಾಣಸತಾನ. ಅಸಾಮಿ ಭಾರಿ ಅದ! ಕಡೀಕ ಊಟಅರೆ ಮಾಡಿ ಹೋಗ್ತೀನಿ ಅಂತ ಕೂತಾನ, ಕೂತರ ಕೂಡಲಿ. ಈಗ ನೀನು ಇಷ್ಟು ಮಾಡು. ನೀನೂ ಹೊರಗ ಹೋಗಿ ಕೂಡು. ಕವಿತಾ ಮುಗಿಯೋ ತನಕ ಯಾರನ್ನೂ ಒಳಗೆ ಬಿಡಬ್ಯಾಡ. ಯಾರು ಬಂದರೂ ಮನ್ಯಾಗ ಇಲ್ಲಾ ಅಂತ ಹೇಳಿಬಿಡು.

ಶಾರದೆ:—ಆಗಲಿ, ಹಂಗೇ ಮಾಡತೀನಿ. (ಕಪ್ಪು ಇಸಿದುಕೊಂಡು) ಈ ಸಾರೆ ಮುಗಿಸಿಬಿಡಿರಿ ಮತ್ತೆ. (ಹೋಗುವಳು)

ಶ್ರೀಪತಿ:—(ಕುರ್ಚಿಯ ಮೇಲೆ ಕುಳಿತು)

ಸ್ವಾಗತವು ಸ್ವಾಗತವು ಶ್ರೀನಿವಾಸರಿಗೆ।
ಸಾಹಿತ್ಯದಾಗಸದಿ ಹತ್ತೈದು ಹೊಸ ತಾರೆಗಳು ಮಿನುಗುತಿರೆ. .

ಶಾರದೆ:—(ತೆರೆಯ ಮರೆಯಲ್ಲಿ) ಗಂಡಸರು ಮನ್ಯಾಗ ಇಲ್ಲಾ.

ವೆಂಕಣ್ಣ:—ಏನ್ರೀ, ದಿನಾ ಹೀಂಗs ಹೇಳ್ತೀರಿ. ಇವತ್ತ ಕೇಳೂದಿಲ್ಲ.

ಶಾರದೆ:—ಮನ್ಯಾಗ ಇಲ್ಲರೀ.

ವೆಂಕಣ್ಣ:—ಅದನ್ನೇನು ಕೇಳೂದಿಲ್ಲ. (ಇಬ್ಬರೂ ಒಳಕ್ಕೆ ಬರುವರು) ಆಹಹ! ಏನ ರಾಯರ! ಅಂತೂ ಈ ದಿವ್ಸ ಮನ್ಯಾಗ ಸಿಕ್ಕಿರಿ! ನಾವು ಬರೂದು ನೀವು ಹೊರಗ ಹೋಗಿರೋದು ನಡದೇ ಇತ್ತು. ಎಷ್ಟು ತಿಂಗಳಾತು ರಾಯರ, ಮನೀ ಬಾಡಿಗೀ ಇಷ್ಟು ಕೊಟ್ಟುಬಿಡ್ರಿ.

ಶ್ರೀಪತಿ:—ಓಹೋ! ಏನ ನಾಯಕರ, ಬರ್ರಿ, ಕೂತುಕೊಳ್ಳಿರಿ. (ವೆಂಕಣ್ಣ ಕುರ್ಚಿಯ ಮೇಲೆ ಕೂಡುವನು) ಈಗ ಸ್ವಲ್ಪ ಅಡಚಣೆ ಒಳಗ ಇದ್ದೇನಿ. ಇಷ್ಟ

ದಿವಸs ಕೇಳೀರಂತ, ಇನ್ನಷ್ಟು ದಿವಸ ತಡೀರಿ. ನಿಮ್ಮ ಬಾಡಿಗಿ ಎಲ್ಲಾ ಚುಕ್ತಾ ಮಾಡತೀನಿ.

ವೆಂಕಣ್ಣ:—ನಿಮ್ಮ ಅಡಚಣಿ ಏನ ರಾಯರ, ಮುಗಿಯೋ ಹಾಂಗ ಕಾಣೂದಿಲ್ಲ! ಆದೇನಿಲ್ಲ ಶ್ರೀಪತಿರಾಯ, ಇವತ್ತ ಏನs ಮಾಡಿ ಬಾಡಿಗಿ ಕೊಡಬೇಕು. ಇಲ್ಲಾ ನಿಮ್ಮ ಸಾಮಾನ ತಗೊಂಡು ಹೊರಗ ಹೋಗ ಬೇಕು. ಸುಮ್ಮನ ನಮ್ಮ ಮನಿ ನಮಗ ಬಿಟ್ಟುಬಿಡಿರಿ.

ಶ್ರೀಪತಿ:—ನಾಯಕರ, ಸ್ವಲ್ಪ ತಡೆಯಿರಿ. ಹಾಂಗ ಒಮ್ಮೆಲೆ ಸಿಟ್ಟಾಗ ಬೇಡಿರಿ. ಎಲ್ಲಾರ ಮರ್ಯಾದೇನೂ ಒಂದs. ನಿಮ್ಮ ಉಪಕಾರ ಬಹಳ ಆಗೇದ. ಇದೊಂದು ಸಾರೆ ನನ್ನ ಮಾತು ನಡಸರಿ.

ವೆಂಕಣ್ಣ:—ಆದೇನು ಕೇಳೋ ಹಾಂಗಿಲ್ಲ. ಹೊರಗ ಆಳು ಸಹ ಕೂಡಿಸಿ ಬಂದೀನಿ. ಬಾಡಿಗಿ ಕೊಡಬೇಕು, ಇಲ್ಲದಿದ್ದರೆ ಮನಿ ಖಾಲೀ ಮಾಡಬೇಕು.

ಶ್ರೀಪತಿ:—ನಾಯಕರ, ಸ್ವಲ್ಪ ಶಾಂತರೀತಿಯಿಂದ ಕೇಳರಿ. ಈಗ ನಾನೊಂದು ಕವನ ಕಟ್ಟಹತ್ತಿದ್ದೇನೆ. ಅದರಿಂದ ನನಗೆ ಎರಡು ನೂರು ರೂಪಾಯಿ ಸಿಗತಾವ ನಿಮ್ಮ ಬಾಡಿಗಿ ಎಲ್ಲಾ ಚುಕ್ತಾ ಮಾಡತೀನಿ. ಈಗ ದಯಮಾಡಿ ಹೋಗರಿ.

ವೆಂಕಣ್ಣ:—ನಿಮ್ಮ ಕವಿತಾ ಅಂದರೇನು ಬಂಗಾರ ಇದ್ದಾಂಗೇನು? ಅವೆಲ್ಲ ನಮಗ ಹೇಳಬ್ಯಾಡ್ರಿ. . ಅಪೂಟ ಇಲ್ಲಾ ಅಂದ್ರ ಹ್ಯಾಂಗರೀ? ಸ್ವಲ್ಪ ಇಲ್ಲ ಸ್ವಲ್ಪ ಕೊಡಬೇಕು. ಅಷ್ಟೂ ಆಗದಿದ್ದರ ಮನೀ ಬಿಟ್ಟುಬಿಡ್ರಿ.

ಶ್ರೀಪತಿ:—ಸ್ವಲ್ಪ ತಡೀರಿ ನಾಯಕರ, ವಿಚಾರಿಸುತ್ತೇನೆ. (ಶಾರದೆಯ ಹತ್ತಿರ ಹೋಗಿ ಕಿವಿಮಾತಿನಲ್ಲಿ) ಶಾರದಾ, ಈ ಪೀಡಾ ದೂರಾಗುವದಿಲ್ಲ. ಏನಾದರೂ ಸ್ವಲ್ಪ ನಿನ್ನ ಹತ್ತಿರ ಸ್ವಲ್ಪ ಇದ್ದರ........

ಶಾರದೆ:—(ಸಿಟ್ಟಿನಿಂದ) ಹುಂ, ಹುಂ. ಆದ, ಕೊಡಲೇನು?

ಶ್ರೀಪತಿ:—(ತಿಳಿಯದೆ) ಏನು? ಕೊಡು ಕೋಡು, ಬೇಗನೆ ಕೊಡು.

ಶಾರದೆ:—ತಗೊಳ್ರಿ, ಇದೊಂದ ಉಳದದ, ಅದನ್ನೂ ಕೊಟ್ಟಬಿಡ್ರಿ. ಮಂಗಳಸೂತ್ರಕ್ಕೆ ಕೈಹಚ್ಚುವಳು)

ಶ್ರೀಪತಿ:—ಏ! ಏ! ಏನು ಏನು! ಬೇಡ, ಬೇಡ. ನಾನೆಲ್ಲ ಸಮಾಧಾನ ಮಾಡುತ್ತೇನೆ.

ಶಾರದೆ:—ಅಯ್ಯು, ಹಂಗಾರ, ನೀವು ಕವಿತಾ ಬರೀಲಿಲ್ಲ, ನಾನು ಚಹಾ ಫರಾಳ ಕಾಣಲಿಲ್ಲ. ಆಗಳೆ ಪೋಸ್ಟಿನ ಹೊತ್ತು ಮೀರಿ ಹೋಗಿಬಿಟ್ಟಿತು, ಇನ್ನೇನು!

ಶ್ರೀಪತಿ:—(ನಿರುತ್ಸಾಹದಿಂದ) ಅದಕ್ಕೇ ಶಾರದಾ, ನಾನು ಹೇಳುವುದು. ಹೊಟ್ಟೆ ತುಂಪಾಗಿದ್ದರೆ ಬುದ್ಧಿ ಚುರುಕಾಗಿರುವುದು. ಇಂಥಾ ರಂಭಾಟದಾಗ ಕವಿತಾ ಬರಿ ಅಂದರ ಹ್ಯಾಂಗ ಸಾಧ್ಯ ಆದೀತು!

ಶಾರದೆ:—ಇದನ್ನೇನು ನೀವು ನನಗ ಕಲಿಸಬೇಕಾಗಿಲ್ಲ. ಅಯ್ಯು, ನನ್ನ ಹಣೇಬರ ಏನದನೋ ಅದು ಆಗ್ತದ. ಇನ್ನೆಲ್ಲಿಯ ಆಶೆ!

ಶ್ರೀಪತಿ:—ಈ ಬ್ರಹ್ಮರಾಕ್ಷಸ ಬೆನ್ನುಹತ್ತಿದಾಗ ನಿರಾಶೆಯೇ....

ವೆಂಕಣ್ಣ:—ಏನ ರಾಯರ ಏನು? ನಾವು ಕೇಳಿದ್ದೂ ನಿರಾಶಾ ಅನ್ರಿ ಹಂಗಾರ!

ಶ್ರೀಪತಿ:—ನಮಗs ನಿರಾಶೆಯಾದ ಮೇಲೆ ನಿಮಗೂ ಅದೇ. ಈ ಆಶೆಯು ಬಿಸಿಲ್ಗುದುರೆ ಹತ್ತಲಿಕ್ಕೆ ಹೋದರ ಹಲ್ಲು ಮುರಕೊಂಬೋದು ತಪ್ಪಿದ್ದಲ್ಲ. ಶಾರದಾ, ಇನ್ನೇನಿದೆ ನಡೆ. ಇಷ್ಟೊತ್ತಿನ ವರೆಗೆ ಕಟ್ಟಿದ್ದೆಲ್ಲ ಗಾಳಿಯ ಗೋಪುರ!

(ತೆರೆ ಬೀಳುವುದು)



‘ಸೌಭಾಗ್ಯ’ದಲ್ಲಿ ಪಾತ್ರವಹಿಸಿದ ಬೆಂಗಳೂರಿನ ‘ಯುನೈಟೆಡ್ ಆರ್ಟಿಸ್ಟ್ಸ’

ಸೌಭಾಗ್ಯ

"ಲಾಟರಿಯಲ್ಲಿ ಒಂದು ಲಕ್ಷ ರೂಪಾಯಿ
ಗೆದ್ದು ಉನ್ಮತ್ತನಾದ ಭಾಗ್ಯವಂತನ
ಒಂದು ದಿನಚರ್ಯ"

೧-೫-೧೯೪೨

ವಿಷಯ ಕೊಟ್ಟದ್ದು . . ಸಂಜೆ ಐದು ಗಂಟೆಗೆ
ಅಭಿನಯ ಪ್ರಾರಂಭ . . ರಾತ್ರಿ ೯-೪೫ ಗಂಟೆಗೆ
ಅಭಿನಯಿಸಿದ ವೇಳೆ . . ೩೫ ನಿಮಿಷ ಮಾತ್ರ

ಪಾತ್ರಗಳು

●

ಸುಬ್ಬುನರಸಿಂಹಯ್ಯ . . . . . ಒಬ್ಬ ಬಡ ಗೃಹಸ್ಥ

ಸುಬ್ಬುಲಕ್ಷ್ಮಮ್ಮ . . . . . . ಗೃಹಸ್ಥನ ಹೆಂಡತಿ

ಸುಬ್ಬುಕೃಷ್ಣಯ್ಯ . . ಈ ದಂಪತಿಗಳ ಏಕಮಾತ್ರ ಪುತ್ರ

ಸಂಗರಾಮಯ್ಯ . . ಈ ಕುಟುಂಬ ವಾಸಿಸುತ್ತಿರುವ ಮನೆಯ ಮಾಲಕ

ಅಭಿನಯಿಸಿದವರು:
ಬೆಂಗಳೂರಿನ "ಯುನೈಟೆಡ್ ಆರ್ಟಿಸ್ಟ್ಸ್"

ಪಾತ್ರವಹಿಸಿದವರು

●

ಸುಬ್ಬುನರಸಿಂಹಯ್ಯ . . ಶ್ರೀ. ಸಿ. ಕೆ. ನಾಗರಾಜರಾವ್

ಸುಬ್ಬುಲಕ್ಷ್ಮಮ್ಮ . . ಶ್ರೀ. ವಾಸುದೇವರಾವ್ ಗಿರಿಮಾಜಿ

ಸುಬ್ಬುಕೃಷ್ಣಯ್ಯ . ಶ್ರೀ. ಸಿ. ಕೆ. ಶಂಕರನಾರಾಯಣರಾವ್

ಸಂಗರಾಮಯ್ಯ . . . . ಚಿ. ಸದಾಶಿವಯ್ಯ

ಪ್ರವೇಶ

[ಸುಬ್ಬನರಸಿಂಹಯ್ಯನ ಮನೆಯ ಪಡಸಾಲೆ. ಎದುರುಗಡೆಯ ಗೋಡೆಯಲ್ಲಿರುವ ಗೂಡಿನಲ್ಲಿ ಹಳೆಯದಾಗಿ ಮಂಕು ಹಿಡಿದ ಒಂದು ಕುಂಟು ಗಡಿಯಾರ. ಗೂಡಿನ ಎಡ ಭಾಗದಲ್ಲಿ ಗೋಡೆಗೆ ತಗಲುಹಾಕಿರುವ ಒಂದು ಎಣ್ಣೆಯ ಲ್ಯಾಂಪು. ಬಲಭಾಗದಲ್ಲಿ ಗೋಡೆಗಂಟಿಸಿರುವ ಒಂದು ಸರಸ್ವತಿಯ ಪಠ. ಈ ಗೂಡಿನ ಕೆಳಗೆ ಗೋಡೆಯನ್ನೊರಗಿ ಹದಿನೇಳು ವರುಷದ ಸುಬ್ಬುಕೃಷ್ಣನು ಇಳಿಜಾರು ಮೇಜಿನ ಮುಂದೆ ಕುಳಿತಿರುವನು. ಮೇಜಿನ ಮೇಲೆ ಬಲಪಕ್ಕದಲ್ಲಿ ಹಲವು ಪುಸ್ತಕಗಳು, ಎಡಪಕ್ಕದಲ್ಲಿ ಮಡಿಸಿಟ್ಟಿರುವ ಅಂಗಿಯ ಮೇಲೆ ಒಂದು ಬಿಳಿಯ ಟೋಪಿ. ಸುಬ್ಬುಕೃಷ್ಣನ ಮುಖ ಬಳಲಿರುವುದು.]

ಸು. ಕೃಷ್ಣ:—(ಮೇಜಿನ ಮೇಲಿನ ಪುಸ್ತಕವನ್ನು ದಿಟ್ಟಿಸುತ್ತಾ)

"Breathes there the man with soul so dead
Who never to himself hath said
(ಹೊಟ್ಟೆಯನ್ನು ಮುಟ್ಟಿಕೊಂಡು ಗದ್ಗದಿತನಾಗುವನು)
This is my own, my native land........."

(ಕತ್ತೆತ್ತಿ ಕಣ್ಣುಗಳನ್ನು ಒರಸಿಕೊಂಡು ಹಿಂದಿರುಗಿ ಗಡಿಯಾರವನ್ನು ನೋಡಿ, ಅಂಗಿ ಟೋಪಿಗಳನ್ನು ಧರಿಸಿ, ಕೆಲವು ಪುಸ್ತಕಗಳನ್ನು ಜೋಡಿಸಿ ಹಿಡಿದು, ಸರಸ್ವತಿಯ ಪಟವನ್ನು ಕಣ್ಣಿಗೊತ್ತಿಕೊಂಡು, ಬಲಗಡೆಯ ಬಾಗಿಲ ಬಳಿಗೆ ಬರುವನು)

ಅಮ್ಮಾ ! ಅಮ್ಮಾ !! ನಾನು ಸ್ಕೂಲಿಗೆ ಹೊರಡುತ್ತೇನಮ್ಮ.

(ಒಳಬಾಗಿಲಿನಿಂದ ಮೂವತ್ತೈದು ವರುಷದ ಸುಬ್ಬುಲಕ್ಷ್ಮಮ್ಮನು ಪ್ರವೇಶಿಸುವಳು. ಸೆರಗು ಹರಿದ ಸೀರೆ. ಹರಳಿಲ್ಲದ ಓಲೆ. ಮಂಕಾದ ಮೂಗುತಿ. ಹಣೆಯಲ್ಲಿ ಬಟ್ಟನೆ ಕುಂಕುಮ)

ಸು. ಲಕ್ಷ್:—ಆಗಲೇ ಹೊತ್ತಾಗಿಬಿಡಿತೇನೋ ಮಗೂ ಸ್ಕೂಲಿಗೆ ?

ಸು. ಕೃಷ್ಣ:—ಹೌದಮ್ಮಾ ! ಹತ್ತೂವರೆಕ್ಕಾಲಾಯಿತು ಆಗಲೇ.

ಸು. ಲಕ್ಷ್:—ಅನ್ನ ಆಗಿದೆಯೋ ಮಗೂ; ಚಟ್ನಿ ತಿರುವ್ತಾ ಇದೀನಿ. ಸ್ವಲ್ಪ ಚಟ್ನಿ ಅನ್ನಾನಾದರೂ ತಿಂದುಕೊಂಡು ಹೋಗುವಿಯಂತೆ. ಇಲ್ಲದಿದ್ದರೆ ಸಂಜೆ ವರೆಗೂ ಹೇಗಪ್ಪ ಉಪವಾಸವಿರುವುದು ?

ಸು. ಕೃಷ್ಣ:—ಪರವಾಯಿಲ್ಲಮ್ಮ; ಹೋಗಿಬಿಟ್ಟು ಎರಡು ಘಂಟೆಗೆ ಮನೆಗೆ ಬರುತೇನೆ.

ಸು. ಲಕ್ಷ:—ನಿನಗೋಸ್ಕರ ಭಾಗೀರಥಮ್ಮನವರ ಮನೇಯಿಂದ ಒಂದು ಪಾವು ಅಕ್ಕಿ ತಂದು ಹಾಕಿದಸಲ್ಲೋ ಮಗೂ. ಸ್ವಲ್ಪ ಇರೋ.

ಸು. ಕೃಷ್ಣ:—(ಕಣ್ಣುಗಳಲ್ಲಿ ನೀರು ತುಂಬಿ) ಬೇಡಮ್ಮ, ನೋಡೋಣ. ಮುಂಕ್ಕಾಲು ಪಾಲು ಹೋಗುತಾನೇ ಮನೆಗೆ ವಾಪಸ್ಸು ಬರೋಹಾಗಾ ಗುತ್ತೋ ಏನೋ, ಹೋಗಿ ನೋಡುತೇನೆ.

ಸು. ಲಕ್ಷ:—(ಹತ್ತಿರ ಬಂದು ತಲೆಯನ್ನು ನೇವರಿಸುತ್ತಾ) ಇದು ಯಾಕೋ ಮಗೂ ಕಣ್ಣಿನಲ್ಲಿ ನೀರು ?

ಸು. ಕೃಷ್ಣ:—ಫೀಸ್ ಕೊಡೋದಕ್ಕೆ ಈ ಹೊತ್ತೇ ಕಡೇ ದಿನಾವಮ್ಮಾ ! ಅದೂ ನಾಲಕ್ಕಾಣೆ ಫೈನ್ ಸೇರಿಸಿ. ಈ ಹೊತ್ತು ಕೊಡದಿದ್ದವರನೆಲ್ಲಾ ಹೆಸರು ಹೊಡೆದು ಹಾಕಿ, ಮನೆಗೆ ಕಳುಹಿಸಿಬಿಡುತಾರಮ್ಮ: ಕ್ಲಾಸಿಗೆ ಸೇರಿಸುವುದಿಲ್ಲ. (ಕಣ್ಣೊರಸಿಕೊಳ್ಳುವನು)

ಸು. ಲಕ್ಷ:—ಎಂಥಾ ದುಸ್ಥಿತಿ ಬಂದಿತಪ್ಪಾ ನಮಗೇ ! ದೇವರು ಅವರಿಗಾದರೂ ಒಳ್ಳೆಯ ಬುದ್ಧಿ ಕೊಡಲಿಲ್ಲ. ಮುತ್ತಿನ ಮಣಿಯ ಹಾಗೇ ಮನೆಗೊಬ್ಬ ಮಗ. ಅವನನ್ನ ಅಚ್ಚುಕಟ್ಟಾಗಿ ಸಾಕೋದಕ್ಕಿಲ್ಲದ ಹಾಗಾ ಯಿತು! ಇದ್ದಬಿದ್ದ ಒಂದೆರಡು ಒಡವೆಗಳೂ, ಪುಡಿಗಾಸುಗಳೂ ಅವರ ಲಾಟರೀ ಹುಚ್ಚಿಗೆ ಆಹುತಿಯಾಯಿತು. ಕಡೇದಾಗಿ ಉಳಿದಿದ್ದ ಆ ನೀಲಿ ಪೀತಾಂಬರ......ಹಠ ಮಾಡಿ ಏನೋ ಈ ಸಲ ದುಡ್ಡಿನ ಸುರಿಮಳೆ ಸುರಿಯುತ್ತೇಂತ ನಂಬಿಕೊಂಡು ಅದನ್ನ ತಗೊಂಡು ಹೋಗಿ, ಆ ಮಾರ್ವಾಡೀ ಹತ್ತಿರ ಒತ್ತೆ ಇಟ್ಟು ನನ್ನ ಹೆಸರಿನಲ್ಲೇ ಟಿಕೀಟು ತಗೊಂಡು ಬಿಟ್ಟರು....ಕೆಲಸ ಕಳೆದುಕೊಂಡು ಮನೆಯಲ್ಲಿ ಕೂತು ಎರಡು ವರುಷ ವಾಯಿತು. ಅಂದಿನಿಂದ ಈ ಭಿಕ್ಷಾಟನದ ಸಂಸಾರವೇ ಆಗಿದೆ. ಆ ಪೀತಾಂಬರವಾದರೂ ಇದ್ದಿದ್ದರೇ ನಿನ್ನ ಕಣ್ಣಿನ ನೀರನಾದರೂ ಒರೆಸಬಹು ದಾಗಿತ್ತು. ಮಗೂ! ನಿಮ್ಮ ಮೇಷ್ಟರಿಗಾದರೂ ಹೇಳಿ ನೋಡಪ್ಪ 'ಇನ್ನೊಂ- ದೆರಡುವಾರದಲ್ಲೇ ಫೀಸ್ ಬಾಕಿ ಎಲ್ಲಾ ಕೊಟ್ಟುಬಿಡುತೇವೇ ' ಅಂತ.

ಸು. ಕೃಷ್ಣ:—ಹಾಗೆ ಆಗೊಲ್ಲ ಅಮ್ಮ. ಈಗ ಬಂದಿರೋ ಹೆಡ್ ಮೇಷ್ಟ್ರು ತುಂಬಾ ಕಟ್ಟುನಿಟ್ಟು. ಫೀಸ್ ಕೊಡೋಕಾಗದಿದ್ದರೆ ಓದೋದನ್ನೇ ಬಿಟ್ಟುಬಿಡೀಂತ ಹೇಳುತಾರೆ.

ಸು. ಲಕ್ಷ:—ಒಂದು ಸ್ವಲ್ಪ ಇರೋ. ಅಂಗಿ ಟೋಪಿ ತೆಗೆದುಬಿಟ್ಟು ಬಾರೋ. ಒಂದೆರಡು ತುತ್ತು ಚೆಟ್ಟನಿ ಅನ್ನ ಕಲಸಿ ಹಾಕಿಬಿಡುತೇನೆ. ಬರೀ ಹೊಟ್ಟೇಲಿ ಅಷ್ಟು ದೂರ ಓಡುತಾ ಹೋಗಬೇಕಲ್ಲಪ್ಪಾ.

ಸು. ಕೃಷ್ಣ:—(ಇತ್ತ ತಿರುಗಿ) ಬೇಡಮ್ಮ. ನನಗೆ ಅನ್ನ ಸೇರೊಲ್ಲ. ಸ್ಕೂಲಿಗೆ ಹೋಗಿಬರುತೇನೆ. (ನಿಷ್ಕ್ರಮಣ)

ಸು. ಲಕ್ಷ:—(ಅತ್ತಕಡೆಯೇ ನೋಡುತ್ತಿದ್ದು ನಿಟ್ಟುಸಿರು ಬಿಟ್ಟು) ಈ ಕಷ್ಟವನ್ನ ಯಾರು ನೋಡಿಯಾರು? ಕರುಳು ಹಿಂಡಿದ ಹಾಗಾಗುತ್ತೆ. ದೇವರಿಗೆ ನಮ್ಮ ಮೇಲೆ ದಯ ಯಾವಾಗ ಬರುತ್ತೋ! (ಕಣ್ಣೊರಸಿಕೊಂಡು ಒಳಕ್ಕೆ ಹೋಗುವಳು)

(ಕ್ಷಣಕಾಲಾನಂತರ ಹೊರಬಾಗಿಲ ಬಳಿ ಧ್ವನಿ—'ಸುಬ್ಬುನರಸಿಂಹಯ್ಯಾ! ಸುಬ್ಬುನರಸಿಂಹಯ್ಯಾ!' ಎಂದು. ಸುಬ್ಬುಲಕ್ಷ್ಮಮ್ಮನು ಮತ್ತೆ ಈಚೆಗೆ ಬರುವಳು.)

ಸು. ಲಕ್ಷ:—(ಸೊಂಟಕ್ಕೆ ಸೆಕ್ಕಿಸಿದ್ದ ಸೆರಗನ್ನು ಸರಿಪಡಿಸಿಕೊಳ್ಳುತ್ತ) ಯಾರೂ? ಯಾರದೂ?

(ಶಾಲು ಹೊದೆದು, ಕೈಲಿ ದೊಣ್ಣೆ ಹಿಡಿದ ಬಿಳಿಮೀಸೆ ಮುದಿ ಸಂಗರಾಮಯ್ಯನ ಪ್ರವೇಶ)

ಸಂಗ:—ನಾನಮ್ಮ ತಾಯೀ! ಸಂಗರಾಮಯ್ಯ.......ಸುಬ್ಬುನರಸಿಂಹಯ್ಯ ಮನೇಲಿ ಇಲ್ಲವೇನೂ?

ಸು. ಲಕ್ಷ:—ಇಲ್ಲ. ಅವರು ಬೆಳಿಗ್ಗೆ ಅಷ್ಟು ಹೊತ್ತಿಗೇ ಎದ್ದು ಹೊರಟು ಹೋದರು.

ಸಂಗ:—ಎಲ್ಲಿಗೆ ಹೋಗಿದಾನೆಯೋ?

ಸು. ಲಕ್ಷ:—ನಾನು ಹೇಗೆ ಹೇಳಲಿ? ಅವರ ಓಡಾಟಗಳೊಂದೂ ನನಗೆ ತಿಳಿಯದು. ಮನೆಯಲ್ಲಿರೋವಾಗ ಅವರಾತಂಕದ ಮುಖ ನೋಡಿದರೆ ಅವರನ್ನ ಏನು ಕೇಳೋದಕ್ಕೂ ಮನಸ್ಸೇ ಬರೊಲ್ಲ.

ಸಂಗ:—ನನಗೆ ಗೊತ್ತು ಎಲ್ಲಿ ಹೋಗಿದಾನೇ ಅಂತ.

ಸು. ಲಕ್ಷ್ಮಿ:—ಎಲ್ಲಿ ಹೋಗಿದಾರೆ?

ಸಂಗ:—ಇನ್ನೆಲ್ಲಿಗೆ ಹೋದಾನು ಹೇಳು! ಬೆಳಗಾಯಿತೂ ಅಂದ್ರೆ, ಆ ಪುಟ್ಟಪ್ಪನ ಹೋಟಲ ಹಿಂದುಗಡೆ ಮಾವಿನಮರದ ಕೆಳಗೆ ಜಮಾ ಇವರೆಲ್ಲಾ. ಇವರ ಅದೃಷ್ಟಪರೀಕ್ಷೆ ಮಾಡೋದಕ್ಕೆ ಆ ಕುಂಟ ಕುಟುಂಬಶಾಸ್ತ್ರಿ ಬೇರೇ. ನಿನ್ನದು ಇಂಥಾ ನಕ್ಷತ್ರ; ಇಂಥಾ ನಂಬರಿಗೆ ದುಡ್ಡು ಹಾಕು. ನಿನಗೆ ಇಷ್ಟು ಬರುತ್ತೆ. ನಿನ್ನದು ಅಂಥಾ ನಕ್ಷತ್ರ; ಅಂಥಾ ಬಣ್ಣದ ಕುದುರೆ ಮೇಲೆ ದುಡ್ಡು ಕಟ್ಟು; ನಿನಗೆ ಅಷ್ಟು ದುಡ್ಡು ಬರುತ್ತೆ ಅಂತ ಹುಚ್ಚು ಹಿಡಿಸಿ ಕುಣಿಸುತಾನೆ ಇವರನೆಲ್ಲಾ. ಈ ಗುಂಪಿಗೆ ಸೇರದಿದ್ದರೆ ಸುಬ್ಬು ನರಸಿಂಹಯ್ಯನೂ ಹೇಗೋ ಇರತಿದ್ದ....ಅಲ್ಲಮ್ಮಾ! ನನಗೆ ಆರು ತಿಂಗಳಿಂದ ಮನೆ ಬಾಡಿಗೆ ಕೊಡುವುದಕ್ಕೆ ದುಡ್ಡಿಲ್ಲ. ಅಂಥಾದ್ದರಲ್ಲಿ, ತಿರುಗಿ ಒಂದು ಡಬ್ಬಲ್ ಟಿಕೆಟ್ ತಗೊಂಡಿದಾನಂತಲ್ಲಾ ಲಾಟರೀದು, ಅದಕ್ಕೆಲ್ಲಿಂದ ಬಂತು ದುಡ್ಡು?

ಸು. ಲಕ್ಷ್ಮಿ:—ನಿಮಗೆ ಹೇಗೆ ಗೊತ್ತು ಟಿಕೆಟ್ ತಗೊಂಡದ್ದು?

ಸಂಗ:—ತಗೊಂಡ ಮೇಲೆ ನನಗೆ ಪತ್ತೆ ಆಯಿತು. ಆ ಹೋಟಲ ಮುಂದೆ ಹಿಡಿದೆ ನಿನ್ನ ಗಂಡನ್ನ. ಬಾಡಿಗೆ ದುಡ್ಡು ಕೇಳಿದ್ದಕ್ಕೆ 'ಇನ್ನೊಂದು ಸ್ವಲ್ಪ ದಿವಸ ಸುಧಾರಿಸಿಬಿಡಿ, ನಿಮ್ಮ ಹಣದ ಒಂದಕ್ಕೆ ಎರಡರಷ್ಟು ಕೊಡುತೇನೆ. ಬೇಕಾದರೆ ಈ ಡಬ್ಬಲ್ ಟಿಕೆಟ್‌ನಲ್ಲೇ ನಿಮಗರ್ಧ—ನನಗರ್ಧ' ಅಂತಂದ. ಅವನ ಹುಚ್ಚನ್ನ ನೋಡಿ ನಾನು ಹಾಗೇ ಹೊರಟುಹೋದೆ; ಹೌದೂ ಆ ಟಿಕೆಟ್‌ಗೆ ದುಡ್ಡೆಲ್ಲಿಂದ ಹೊಂಚಿದ?

ಸು. ಲಕ್ಷ್ಮಿ:—ನಾನು ಏನು ಹೇಳಲೀ ಸಂಗರಾಮಯ್ಯನವರೇ!

ಸಂಗ:—ಅದೇ ಆ ಡಬ್ಬಲ್ ಟಿಕೀಟಿಗೆ ದುಡ್ಡು ಎಲ್ಲಿಂದ ಬಂದಿತೂ ಅನ್ನೋದನ್ನ ಹೇಳು.

ಸು. ಲಕ್ಷ್ಮಿ:—ಆ ದಿನ ಬಂದ್ರೂ, ಮನೇಲಿ ಕಣ್ಣೀರು ತುಂಬಿಕೊಂಡು ಕೂತುಕೊಂಡರು. 'ಹೇಗಾದರೂ ಮಾಡಿ ಹತ್ತು ರೂಪಾಯಿ ತಂದು ಕೊಡು; ಈ ಸಲ ತಾರಾಬಲ ಚಂದ್ರಬಲ ಚೆನ್ನಾಗಿದೆ; ಭಾಗ್ಯಲಕ್ಷ್ಮಿ ಮನೇಗೆ ಬಂದೇ ಬರುತಾಳೇ' ಅಂತ. ನನಗೇನೂ ತೋಚಲಿಲ್ಲ. ಕಡೇಗೆ ತುಂಬಾ ಯೋಚನೆ ಮಾಡಿ, ನಮ್ಮ ತಂದೆಯ ಗುರುತಾಗಿ, ನಮ್ಮ ಮದುವೆಯ

ಜ್ಞಾಪಕವಾಗಿ ಉಳಿದಿದ್ದ ನೀಲಿ ಪೀತಾಂಬರಾನ ಈಚೆಗೆ ತೆಗೆದು ತಂದು ಕೊಟ್ಟುಬಿಟ್ಟೆ. ಅವರ ಸಂತೋಷಕ್ಕೆ ಪಾರವೇ ಇಲ್ಲ. ಅದರಿಂದ ನನ್ನ ಹೆಸರಿನಲ್ಲೇ ಟಿಕೆಟ್ ತಗೊಂಡರಂತೆ.

ಸಂಗ:—ಅಲ್ಲಾ, ನಿನ್ನ ನೀಲೀ ಪೀತಾಂಬರಕ್ಕೂ ಟಿಕೀಟಿಗೂ ಏನು ಸಂಬಂಧಾವಮ್ಮಾ ?

ಸು. ಲಕ್ಷ:—ಆ ಸೀರೇನ ತಗೊಂಡು ಹೋಗಿ, ಆ ಮಾರವಾಡಿಯ ಹತ್ತಿರ........

ಸಂಗ:—ಅಯ್ಯೋ ! ಅಯ್ಯೋ !! ಎಲ್ಲಿಯ ವರೆಗೆ ಹತ್ತಿಬಿಡಿತು ಇವನ ಹುಚ್ಚು !......ನೋಡು ಸುಬ್ಬುಲಕ್ಷ್ಮಮ್ಮ ! ನಿಮ್ಮ ಹುಚ್ಚಿಗೆ ನೀವು ಹೇಗಾದರೂ ದುಡ್ಡು ಹೊಂಚಿಕೊಳ್ಳುತೀ(; ಆದರೆ ನನ್ನ ಕಷ್ಟದ ಕೂಗು ನಿಮ್ಮ ಕಿವೀಗೆ ಕೇಳೊಲ್ಲ..ನ್ಯಾಯವೇ ! ನರಿಯ ಕೂಗು ಗಿರಿ ಮುಟ್ಟೀತೇ ಅಂತ ಅಲ್ಲವಮ್ಮಾ ! ನಾಳೆ ಫಸ್ಟಿಗೆ ಏಳು ತಿಂಗಳು ಆಯಿತು ನಿಮ್ಮಂದ ಬಾಡಿಗೆ ಬಂದು. ನನಗೂ ನಿಮ್ಮ ಮನೆ ಬಾಗಿಲಿಗೆ ಅಲದೂ ಅಲದೂ ಎರಡು ಜೊತೆ ಎಕ್ಕಡ ಸವೆದುಹೋಯಿತೇ ಹೊರತೂ, ಒಂದು ಬಿಡಿಕಾಸಾದರೂ ಕೈಗೆ ಬರಲಿಲ್ಲ. ನಾನಾದರೂ ಸಾವುಕಾರನೇ ?—ನಿಮ್ಮನ್ನ ಪೀಡಿಸದೆ ತೆಪ್ಪಗೆ ಇದ್ದುಬಿಡೋಣ, ನಿಮ್ಮ ಲಾಟರೀ ಲಕ್ಷ್ಮಿ ಪ್ರತ್ಯಕ್ಷವಾಗುವ ವರೆಗೂ ಅಂದ್ರೇ ?....ನನ್ನ ಜೀವನ ನಡೆಸುವುದಕ್ಕೆ ಇರೋ ಆಧಾರ ನನ್ನ ಮೂರು ಮನೆಗಳ ಬಾಡಿಗೆ. ಅವುಗಳ ಪೈಕಿ ಒಂದರಲ್ಲಿ ನೀವಿದೀರಿ. ನನ್ನ ಪುಣ್ಯವೋ ಏನೋ ನಿಮ್ಮ ಅದೃಷ್ಟಕ್ಕೂ ನನ್ನ ಅದೃಷ್ಟದ ಹಾಗೇ ಗ್ರಹಣ ಹಿಡಿದು ಕೂತಿದೆ. ಅದೆಂದಿಗೆ ಬಿಡುತ್ತೋ, ದೇವರಿಗೇ ಗೊತ್ತು.. !ಆ ಪೇಟೇಲಿರುವ ಮನೇ, ಅದಕ್ಕೆ ಆ ಪುಟ್ಟಪ್ಪನೇ ಇನ್ನೊಬ್ಬಾತನ್ನ ಕರೆದುಕೊಂಡು ಬಂದು, ಬಾಡಿಗೆ ಪತ್ರ ಬರೆಸಿ, ಒಂದು ತಿಂಗಳು ಅಡ್ವಾನ್ಸ್ ಕೊಡಿಸಿ, ಹೋಟಲು ಇಡಿಸಿದ. ಆ ಧಾಂ ಧೂಂ ನೋಡಿ ನನ್ನ ಅದೃಷ್ಟ ಖುಲಾಯಿಸಿತೂಂತ ಅಂದುಕೊಂಡೆ. ಆದರೆ ಆ ಪುಣ್ಯಾತ್ಮ ಇದ್ದ ಎಂಟು ತಿಂಗಳಲ್ಲಿ ಒಂದು ತಿಂಗಳ ಬಾಡಿಗೇನೂ ಸಹಾ ಕೈಯೆತ್ತಿ ಕೊಡಲಿಲ್ಲ. 'ನನ್ನ ಹೋಟಲಿನಲ್ಲಿರುವ ಮೇಜುಗಳನ್ನು ನೋಡೀ; ಗೋಡೇಗೆ ತೂಗುಹಾಕಿರುವ ಭಾರಿಭಾರಿ ಕನ್ನಡಿಗಳನ್ನ ನೋಡೀ; ತಿಂಡಿಗಳಿಟ್ಟಿರುವ ದೊಡ್ಡದೊಡ್ಡ ಬೀರುಗಳನ್ನ

ನೋಡೀ; ನಿಮ್ಮ ಬಾಡಿಗೆಗೆ ಏನು ಭಯ ಸಂಗರಾಮಯ್ಯನವರೇ!' ಅಂತಾನೇ ಇದ್ದ. ಕಡೇಗೆ ದೀಪಾವಳಿ ಹಿಂದಿನ ದಿವಸ ರಾತ್ರಿ ಹೋಟಲು ಮುಚ್ಚಿ ಮಲಗಿದ್ದ. ಬೆಳಿಗ್ಗೆ ಎದ್ದು ಹೋಗಿ ನೋಡಿದರೇ, ಹೋಟಲ್ ತೆಗೆದಿಲ್ಲ; ಬೀಗ ಹಾಕಿದೆ. ಸಂಜೆಗೆ ಬೀಗ ಒಡೆಯಿಸಿ ನೋಡಿದರೇ—ಹಾಲಿನಲ್ಲಿ ಒಂದು ತಟ್ಟೆ ಬೂಂದೀ ಕಾಳು ಚೆಲ್ಲಿದೆ; ಉಗ್ರಾಣದಲ್ಲಿ ನಾಲ್ಕು ಮೈದಾ ಹಿಟ್ಟಿನ ಖಾಲೀ ಚೀಲಗಳು, ಒಂದು ಕಡಲೇ ಹಿಟ್ಟಿನ ಖಾಲಿ ಡಬ್ಬ ಬಿದ್ದಿವೆ; ಅಡುಗೆಯ ಮನೆಗೆ ಹೋಗಿ ಇಣುಕಿದರೇ ಒಲೇ ಬಳಿ ಮುತ್ತುಗದೆಲೆಯ ಮೇಲೆ ಒಂದು ಮುದ್ದೆ ಹಳೆಯ ಚಟ್ನಿ ನಾರುತಾ ಇದೆ. ಆಯಿತಲ್ಲಮ್ಮಾ ಅಲ್ಲಿ ನನ್ನ ಉದ್ಧಾರವಾದದ್ದು! ಆ ಹೊತ್ತಿನಿಂದ ಆ ಮನೆ ಖಾಲಿಯಾಗೇ ಇದೆ. ಬರೋವರೆಲ್ಲಾ ಹೋಟಲಿಗೇಂತಾನೇ ಕೇಳುತಾರೆ; ನನಗೆ ರೇಗಿ ಬೀಳೋ ಹಾಗೆ ಆಗುತ್ತೆ. ಇನ್ನು ಆ ಕೋಟೆಯ ಮನೇ—ಅಲ್ಲಿಗೆ ಯಾವನೋ ಸೂಟ್-ಗೀಟ್ ಹಾಕಿಕೊಂಡು ಮೂರು ಜನ ಹೆಂಗಸರನ್ನ ಕರೆದುಕೊಂಡು ಬಂದು, 'ಇವರು ನನ್ನ ಶಂಗಿಯರು; ನಾನು ತಮಗೆ ತಿಂಗಳು ತಿಂಗಳಿಗೆ ತಪ್ಪದೆ ಬಾಡಿಗೆಯನ್ನು ತಲುಪಿಸುತೇನೆ' ಅಂತ ಹೇಳೀ, ತನ್ನ ತಂಗಿಯರನ್ನ ಆ ಮನೇಲಿ ತಂಗಿಸಿಬಿಟ್ಟು ಹೋದ ಆ ನನ್ನ ತಮ್ಮ ಇನ್ನೂ ಬರುತಾ ಇದಾನೆ ತವರುಮನೇಯಿಂದ. ಈ ಹೆಂಗಸರ ಮಾತಿನಂತೆ ನಾನೂ ನಾಲ್ಕು ತಿಂಗಳು ಎದುರು ನೋಡದೇ. ಕಡೆಗೆ ಹೊಟ್ಟೆಯ ಸಂಕಟ ತಡೀಲಾರದೆ, ಹೋಗಿ ಸ್ವಲ್ಪ ರೇಗಿದೆ. ಅದಕ್ಕೇನು ಪ್ರತಿಫಲ ಆಯಿತೂಂತಿಯಾ?...... ಮಾರನೆಯ ದಿನ ಹೋಗಿ ನೋಡಿದರೇ ಮನೆಯ ಬಾಗಿಲು ಹಾರುಹೊಡೆದಿದೆ. ತಂಗಿಯರೂ ಇಲ್ಲ—ಮಂಗಳಗೌರಿಯರೂ ಇಲ್ಲ. ಅಲ್ಲಾ ಸುಬ್ಬುಲಕ್ಷ್ಮಮ್ಮಾ! ನೀನು ಕಷ್ಟದಲ್ಲಿರೋಳು; ನನ್ನ ಕಷ್ಟವನ್ನ ನಿನ್ನ ಹತ್ತಿರ ಹೇಳಿಕೊಂಡರೆ ನಿನಗೆ ಅರ್ಥವಾದರೂ ಆಗುತ್ತೆ. ನೋಡೂ ಮನೇಲಿ ಹದಿನೈದು ಮಕ್ಕಳೋ! ಈಗ ದೊಡ್ಡ ಹೆಣ್ಣುಮಕ್ಕಳಿಬ್ಬರೂ ಬಾಣಂತನಕ್ಕೆ ಬಂದಿದಾರೆ. ಹೈಸ್ಕೂಲು ಕಾಲೇಜಿನಲ್ಲಿ ಓದೋ ಹುಡುಗರು ಐದು ಜನ. ಬಿ. ಎ. ಪ್ಯಾಸ್ ಮಾಡಿ ಕೆಲಸವಿಲ್ಲದೇ ಮನೇಲಿ ಕೂತಿರೊರು ಇಬ್ಬರು.. ನನ್ನ ಮೂರನೇ ಹುಡುಗಿ ಪುಟ್ಟಂಕನಿಗೆ ಮೂರು ಸಲ ಗಂಡು ಗೊತ್ತುಮಾಡಿದ್ದಾಯಿತು. ಗಂಡು ಗೊತ್ತಾದಾಗ ದುಡ್ಡು ಸಿಗೊಲ್ಲ; ದುಡ್ಡು ಕೂಡಿಸುವ ವೇಳೆಗೆ ಗಂಡು

ಪರಾರಿ. ನನ್ನ ಈ ಕಷ್ಟಕ್ಕೆ ಯಾರಮ್ಮ ದಿಕ್ಕು?....ನೀನು ಮನಸ್ಸಿಗೆ ವ್ಯಥೆಪಟ್ಟುಕೊಳ್ಳಬೇಡ ಹೀಗೆ ಹೇಳುತೇನೇಂತ—ನೀವು ಈ ಏಳು ತಿಂಗಳ ಬಾಡಿಗೆ ಕೊಡದಿದ್ದರೂ ಚಿಂತೆ ಇಲ್ಲ; ದಯಮಾಡಿ ನಾಳೆ ಹತ್ತನೇ ತಾರೀಖಿನ ಒಳಗೆ ಮನೆ ಖಾಲಿ ಮಾಡಿಬಿಡಿ.

ಸು. ಲಕ್ಷ್:—(ಅಂಗಲಾಚಿ) ಸಂಗರಾಮಯ್ಯನವರೇ! ನೀವೇ ನನ್ನ ತಂಡೆ. ನೀವು ಇಷ್ಟು ನಿಷ್ಠುರವಾದರೆ ನಾವು ಹೇಗೆ ಬದುಕುವುದು? ಏನೋ ಉಪವಾಸವಿದ್ದರೂ ನಿಮ್ಮ ನೆರಳಿನಲ್ಲಿ ತಂಪಾಗಿದೇವೆ. ನೀವು ಅಟ್ಟಿಬಿಟ್ಟರೇ ನಾವಿನ್ನೆಲ್ಲಿ ಹೋಗಿ ಬದುಕೇವಿ ಈ ಅವಸ್ಥೇಲಿ?

ಸಂಗ:—ಊರಿನ ಕಷ್ಟವನ್ನೆಲ್ಲಾ ಹಂಚಿಕೊಂಡು ನಾನು ಹೇಗೆ ಸಾಕಿಕೊಳ್ಳಿ ಸುಬ್ಬುಲಕ್ಷ್ಮಮ್ಮ...ನಿನ್ನ ಗಂಡ ಮನೆಗೆ ಬಂದಮೇಲೆ ಅವನಿಗೆ ಈ ಮಾತನ ತಿಳಿಸಿಬಿಡು. ನೀವು ಮನೇನಾದರೂ ಖಾಲಿ ಮಾಡಿದರೆ ನನಗೆ ಉಪಕಾರವಾಗುತ್ತೆ. ಬಂದಿರೋ ಗಿರಾಕಿಗೆ ಇದನ್ನ ಮಾರಿಬಿಟ್ಟಾದರೂ ನನ್ನ ಕಷ್ಟ ಕಡಿಮೆ ಮಾಡಿಕೊಳ್ಳುತೇನೆ.

ಸು. ಲಕ್ಷ್:—ನೀವು ಹಾಗನ್ನಬೇಡಿ ಸಂಗರಾಮಯ್ಯನವರೇ! ಸ್ವಲ್ಪ ನಿಧಾನಿಸಿ. ದೇವರು ಕಣ್ಣುಬಿಟ್ಟು ನೋಡಿದರೆ ನಿಮ್ಮ ಬಾಡಿಗೇನ ನಾವು ನಿಲ್ಲಿಸಿಕೊಳ್ಳುವುದಿಲ್ಲ. ನಿರ್ವಂಚನೆಯಾಗಿ ಕೊಟ್ಟುಬಿಡುತೇವೆ. (ಕಣ್ಣೊರಸಿ ಕೊಳ್ಳುವಳು)

ಸಂಗ:—(ಕತ್ತೆತ್ತಿ ನೋಡಿ, ನೊಂದು, ಸಮಾಧಾನ ಮಾಡುವ ಧ್ವನಿಯಲ್ಲಿ) ಇಲ್ಲ ನೋಡು ಸುಬ್ಬುಲಕ್ಷ್ಮಮ್ಮ, ನೀನು ಅಷ್ಟು ವ್ಯಥೆಪಟ್ಟುಗೋಬೇಡ. ಹೋಗಲಿ ಬಿಡು....ಇನ್ನೂ ಒಂದು ತಿಂಗಳು ದಾರಿ ನೋಡಿಬಿಡುತೇನೆ. ದೇವರು ಮಾಡಿಸಿದ ಹಾಗಾಗಲೀ......ನೋಡಮ್ಮಾ ತಾಯಿ! ಒಂದು ವೇಳೆ ಬರೋ ಫಸ್ಟ್ ಒಳಗೂನೂವೆ ನಿನ್ನ ಗಂಡ ನನ್ನ ದುಡ್ಡಿಗೆ ಏನೂ ತರದೂದು ಮಾಡದೇ ಹೋದರೆ, ನಾನು ಆಮೇಲೆ......

ಸು. ಲಕ್ಷ್:—ಅಷ್ಟು ಮಾಡಿದರೆ ಸಾಕು ಸಂಗರಾಮಯ್ಯನವರೇ! ಇನ್ನು ಒಂದು ತಿಂಗಳ ತಪಸ್ಸಿನಿಂದಲೂ ದೇವರು ಕಣ್ಣುಬಿಟ್ಟು ನೋಡದೇ ಹೋದರೆ, ನಾವು ನಿಜವಾಗಿಯೂ ನಿರ್ಭಾಗ್ಯರು—ನಿಮ್ಮ ನೆರಳಿನಲ್ಲಿ ನೆಲೆಯಾಗಿ ನಿಲ್ಲೋದಕ್ಕೆ ಅಯೋಗ್ಯರೂಂತ ಸ್ಪಷ್ಟವಾದ ಹಾಗೆಯೇ ಆಯಿತು.

ಸಂಗ:—ನೀನು ಅಡುಗೆ ಕೆಲಸದಲ್ಲಿ ಇದ್ದೆಯೋ ಏನೋ ಪಾಪ! ತೊಂದರೆ ಮಾಡಿದ ಹಾಗಾಯಿತು.

ಸು. ಲಕ್ಷ್ಮಿ:—ಅಡುಗೆ ಕೆಲಸ ಏನು ಮಹಾ! ಅನ್ನ ಆಗಿತ್ತು; ಚಟ್ನಿ ತಿರುವುತಾ ಇದ್ದೆ.

ಸಂಗ:—ನೀನು ಏನೂ ತಿಳದುಕೊಳ್ಳದಿರೋ ಪಕ್ಷಕ್ಕೆ ಒಂದು ಮಾತು ಹೇಳಲೇ ಅಂತ....

ಸು. ಲಕ್ಷ್ಮಿ:—ಹೇಳಿ ಸಂಗರಾಮಯ್ಯನವರೇ! ನೀವು ನನ್ನ ತಂದೆ ಇದ್ದ ಹಾಗೆ; ಸಂಕೋಚವೇಕೆ!

ಸಂಗ:—ಏನೂ ಇಲ್ಲ....ಮನೇಲಿ ಅಕ್ಕಿ ಇರಲಿಲ್ಲ. ಆ ಸುಬ್ಬರಾಯ ಸೆಟ್ಟೀ ಹತ್ತಿರ ಹೋಗಿದ್ದೆ. ಅವನು ಊರಿಗೆ ಹೊರಟು ಹೋಗಿದ್ದ. ಅವನ ಮಗ ಅಂಗಡಿ ಮೇಲೆ ಕುಳಿತಿದ್ದ. ಅಪ್ಪನನ್ನ ಕೇಳದೇ ಸಾಲ ಕೊಡುವುದಕ್ಕೆ ಆಗೋದಿಲ್ಲಾಂತ ಅಂದುಬಿಟ್ಟ....ನಿನಗೆ ತೊಂದರೆಯಾಗದಿರುವ ಪಕ್ಷಕ್ಕೆ, ಒಂದು ಹದಿನೆಂಟು ಪಾವು ಅಕ್ಕಿ ಕೊಟ್ಟಿದ್ದರೇ......ಆಮೇಲೆ ಮಜಾ ಹಾಕಿಕೊಳ್ಳಬಹುದಾಗಿತ್ತು.......

ಸು. ಲಕ್ಷ್ಮಿ:—(ಗದ್ಗದಿತಳಾಗಿ)......ಅಯ್ಯೋ! ನನ್ನ ದೌರ್ಭಾಗ್ಯಕ್ಕೆ ಮಿತಿಯೇ ಇಲ್ಲದ ಹಾಗಿದೆ....ಏನು ಹೇಳಲಿ !!

ಸಂಗ:—ಯಾಕೆ ತಾಯೀ?

ಸು. ಲಕ್ಷ್ಮಿ:—ಬೆಳಿಗ್ಗೆ ಆ ಹುಡುಗ ಸುಬ್ಬುಕೃಷ್ಣ ಉಪವಾಸ ಸ್ಕೂಲಿಗೆ ಹೋಗುತ್ತಲ್ಲಾಂತ ನಮ್ಮ ಮಗ್ಗಲು ಮನೆ ಭಾಗೀರ್ಥಮ್ಮನವರಿಂದ ಒಂದು ಪಾವು ಅಕ್ಕಿ ಇಸುಕೊಂಡು ಬಂದು ಅನ್ನ ಮಾಡಿದೆ. ಸಾರಿಗೆ ಬೇಳೆ ಇಲ್ಲದೆ ಚಟ್ನಿ ತಿರುವುತಾ ಇದ್ದೆ. ಅವನು ಹೊತ್ತಾಯಿತೂಂತ ಅದನ್ನೂ ತಿನ್ನದೆ ಹೊರಟುಹೋದ.

ಸಂಗ:—(ಹೊರಡಲನುವಾಗಿ) ಹೋಗಲಿ ಬಿಡೂ ತಾಯೀ! ನೀನು ಮನಸ್ಸಿಗೇನೂ ವ್ಯಥೆಪಟ್ಟುಕೊಳ್ಳಬೇಡ. ನೀನು ಭಾಗ್ಯಲಕ್ಷ್ಮಿ. ನಿನ್ನ ಭಾಗ್ಯವನ್ನ ಬೈದುಕೊಳ್ಳಬೇಡ. ಇದೆಲ್ಲಾ—ನೀವು ಹುಟ್ಟುದರಿದ್ರನಾದ ನನ್ನ ಮನೆಗೆ ಬಾಡಿಗೆ ಬಂದರಲ್ಲಾ ಅದರ ಪ್ರಭಾವ...ನಾನು ಬರುತೇನಮ್ಮ!

ಸುಬ್ಬನರಸಿಂಹಯ್ಯ ಬಂದರೇ, ನಾನು ಬಂದಿದ್ದೇಂತ ಹೇಳಿಬಿಡು. ಆ ಗುಪ್ತಸಂಗಡೀ ಕಡೆಗೆ ಹೋಗಿಬಿಟ್ಟು ಹಾಗೆ ತಿರುಗಿಕೊಂಡು ಬರುತೇನೆ..

ಸು. ಲಕ್ಷ್:—ಬಂದೇ ಸಂಗರಾಮಯ್ಯನವರೇ! ಒಂದು ನಿಮಿಷ ಕುಳಿತುಕೊಳ್ಳಿ. ಬಂದೇ.

ಸಂಗ:—ಯಾಕೆ ತಾಯೀ?

ಸು. ಲಕ್ಷ್:—(ಒಳಕ್ಕೆ ಹೋಗುತ್ತಾ) ಒಂದು ಲೋಟ ಪಾನಕ ತಂದು ಕೊಡುತೇನೆ, ಬಿಸಲಲ್ಲಿ ನಡೆದು ಬಂದಿದ್ದೀರಿ. (ನಿಷ್ಕ್ರಮಣ)

ಸಂಗ:– ಅಯ್ಯೋ! ನನಗೆ ಯಾಕಮ್ಮಾ ಪಾನಕ! ನಿನ್ನ ಮಗನಿಗಾದರೂ ಕೊಟ್ಟುಕಳುಹಿಸೋದಕ್ಕಿಲ್ಲವೇ! (ಇಳಿಜಾರು ಮೇಜಿನ ಮೇಲೆ ಕೂಡುವನು)

ಸು. ಲಕ್ಷ್:—(ಪಾನಕದ ಲೋಟ ತಂದು) ಅವನು ಹೊರಟು ಹೋದ ಮೇಲೆ ದೇವರ ನೈವೇದ್ಯಕ್ಕೋಸ್ಕರ ಕೊಂಚ ಮಾಡಿದ್ದೆ; ತಗೊಳ್ಳಿ!

ಸಂಗ:— ಅಲ್ಲಾ ತಾಯೀ! ನೈವೇದ್ಯ ಮಾಡಿ ನೀನೂ, ಅವನೂ....

ಸು. ಲಕ್ಷ್:—ನೀವೇ ಪ್ರತ್ಯಕ್ಷ ನಮ್ಮ ಮನೆ ದೇವರು. ನಿಮಗಿಂತ ದೊಡ್ಡ ದೇವರು ಯಾರೂ ಸಂಗರಾಮಯ್ಯನವರೇ?

ಸಂಗ:—(ಹಸನ್ಮುಖಿಯಾಗಿ ಕುಡಿಯುತ್ತಾ) ಅಂತೂ ನನ್ನಮ್ಮಾ! ನಿನ್ನ ಮಾತು ಕೇಳುತಾ ಇದ್ದರೆ ನಾನೆಂಥ ಪಾಪೀ ಅಂತ ಅನ್ನಿಸುತ್ತೆ.

ಸು. ಲಕ್ಷ್:—ಅಯ್ಯೋ! ಉಂಟೇ?

ಸಂಗ:—ಹೌದು ತಾಯೀ! ಇಂಥ ನಿನ್ನ ಒಂದು ಬಾಕಿ ಕೇಳಿ ಮನಸ್ಸನ್ನು ನೋಯಿಸುತ್ತೇನಲ್ಲಾ ಅಂತ (ಕುಡಿಯುತ್ತಾ ಮುಖವನ್ನು ಸಿಂಡ್ರಿಸುವನು)

ಸು. ಲಕ್ಷ್:—ತುಂಬಾ ಹುಳಿಯಾಯಿತೇನೋ?

ಸಂಗ:—ಇಲ್ಲಾ; ನಿಂಬೇಹಣ್ಣು ಸ್ವಲ್ಪ ಹೆಚ್ಚಾಗಿ ಹಿಂಡಿದ ಹಾಗಿದೆ.

ಸು. ಲಕ್ಷ್:—ನಿಂಬೇಹಣ್ಣಲ್ಲ. ಮೊನ್ನೆ ಭಾಗೀರಥಮ್ಮನವರ ಮನೆಯಲ್ಲಿ ಅರಿಸಿನ-ಕುಂಕುಮಕ್ಕೆ ಕರೆದಿದ್ದಾಗ ಅಡಕೆಲೆಯಲ್ಲಿ ಒಂದು ಚೂರು ಬೆಲ್ಲ ಇಟ್ಟುಕೊಟ್ಟಿದ್ದರೂ, ಅವರ ಸ್ವಂತ ಆಲೇದೂ. ಅದು ಮೊದಲೇ ಹುಳ್ಳಗಾಗಿತ್ತೇನೋ! ನಾನು ನೋಡದೇ ಸ್ವಲ್ಪ ಹುಣಿಸೇ ಹುಳಿ ಹಿಂಡಿದೆ. ಅದು ಹುಳಿ......

ಸಂಗ:—ಇರಲಿ ಬಿಡು. ಚೆನ್ನಾಗಿದೆ. ಇನ್ನು ನಾನು (ಎದ್ದು ಹೊರಡುತ್ತಾ)

ಬರುತೇನಮ್ಮಾ ತಾಯೀ! ದೇವರು ನಿನ್ನ ಗುಣಕ್ಕೆ ತಕ್ಕಂತೆ ಭಾಗ್ಯ ಕೊಡಬೇಕು, ಅಷ್ಟೇ. (ನಿಧಾನವಾಗಿ ನಿಷ್ಕ್ರಮಿಸುವನು)

ಸು. ಲಕ್ಷ್ಮ:—(ಅತ್ತ ಕಡೆಯೇ ನೋಡುತ್ತಿದ್ದು, ಖಾಲಿಯಾದ ಲೋಟವನ್ನು ತೆಗೆದುಕೊಂಡು) ಪುಣ್ಯಾತ್ಮಾ! ಇಂಥ ಮನೆಯವರನ್ನು ನಾನು ಎಲ್ಲೂ ನೋಡಿರಲಿಲ್ಲ. ಅಯ್ಯೋ! ಎಷ್ಟು ದಯಾ! ಎಷ್ಟು ಮಮತೆ! ಇನ್ನೊಬ್ಬರ ಕಷ್ಟಕ್ಕೆ ಎಷ್ಟು ಅನುಕಂಪ!! ಹಿಂದೆ ಇದ್ದ ಮನೆಗಳಲ್ಲಿ ಅವರ ನಿರ್ದಯಕ್ಕೆ ಹೆದರಿ ಏನಾದರೂ ಮಾಡಿ ಬಾಡಿಗೆ ಮೊದಲು ತೆತ್ತುಬಿಡುತ್ತಿದ್ದೆವು. ಈತನ ಪುಣ್ಯಕ್ಕೆ ಈಗ ಆರೇಳು ತಿಂಗಳಿಂದ....ಈತನ ದಯಾ ಹೆಚ್ಚಿದ ಹಾಗೆಲ್ಲಾ ನಮ್ಮ ಬಡತನವೂ ಹೆಚ್ಚುತಾನೇ ಇದೆ. ಮುಖ್ಯವಾಗಿ ಸ್ವಾಮಿ ಕಣ್ಣು ಬಿಟ್ಟು ನೋಡೋ ವರೆಗೆ ನಾವು ಕೊರಗಿದರೇನು ಪ್ರಯೋಜನ...... (ಒಳಕ್ಕೆ ಹೋಗುವಳು)

[ಕ್ಷಣಕಾಲಾನಂತರ ಹೆಗಲ ಮೇಲೆ ಒಂದು ಗಂಟನ್ನು ಹೊತ್ತುಕೊಂಡು ಹಿಡಿಸಲಾರದ ಆನಂದದಿಂದ ಕೈಲೊಂದು 'ಟೆಲಿಗ್ರಾಂ' ಹಿಡಿದು ಸುಬ್ಬುನರಸಿಂಹಯ್ಯನು ಹಾಡುತ್ತಾ ಪ್ರವೇಶಿಸುವನು. ಹರಿದ ಅಂಗಿ ಧೋತ್ರ ಧರಿಸಿ ಜರಿಯ ಪೇಟ ಸುತ್ತಿರುವನು. ಮುಖದ ಮೇಲೆ ಬೆಳೆದ ಗಡ್ಡ ಮೀಸೆಯಾದರೂ ಸಂತೋಷದಿಂದ ಅರಳಿದ ಮುಖಮುದ್ರೆ. ಬಲಗೈ ಬೆರಳಲ್ಲಿ ಹೊಸದಾದ ಮೂರು ವಜ್ರದ ಉಂಗುರುಗಳು. ಅಟ್ಟಹಾಸದ ನಡಿಗೆ]

ಸು. ನ:—ಭಾಗ್ಯಾದ ಲಕ್ಷ್ಮೀ ಬಾರಮ್ಮ! ನಮ್ಮಮ್ಮ ನೀ ಸೌಭಾಗ್ಯಾದ ಲಕ್ಷ್ಮೀ ಬಾರಮ್ಮಾ......! ಲೇ! ಸುಬ್ಬೂ! ಸುಬ್ಬಲಕ್ಷ್ಮೀ! ಸುಬ್ಬೀ! ಭಾಗ್ಯಾ! ಸೌಭಾಗ್ಯ!!!

ಸು. ಲಕ್ಷ್ಮ:—(ಗಾಬರಿಯಿಂದ ಹೊರಗೆ ಬಂದು) ಇದೇನು ಈ ಹೊತ್ತು ಹೀಗೆ ಕಿರಿಚುತಾ ಇದ್ದೀರಿ. ನಿಮ್ಮ ದಮ್ಮಯ್ಯ ಸುಮ್ಮನಾಗಿ! ನಿಮ್ಮ ಹುಡುಗಾಟಿಕೆಯ ಮಾತು ಭಾಗೀರಥಮ್ಮನವರ ಕಿವಿಗೆ ಬಿದ್ದರೆ ಏನು ಗತೀ?

ಸು. ನ:—(ಬಟ್ಟೆಯ ಗಂಟನ್ನು ಮೇಜಿನ ಮೇಲಿಟ್ಟು) ಗತಿ ಏನೇ? ಅವರೂ ಅವರ ಗಂಡನಿಗೆ ಹೇಳಿ ಹೀಗೆ ಕೂಗಿಸಿಕೊಳ್ಳುತ್ತಾರೆ!

ಸು. ಲಕ್ಷ್ಮ:—ಇದು ಯಾಕೆ ಹೀಗೆ ಹುಡುಗ ಹುಚ್ಚು! (ತಿರುಗುವಳು)

ಸು. ನ:—(ತಲೆಯಲ್ಲಿರುವ ಒಣ ಹೂವನ್ನು ಹಿರಿದು) ಮೊದಲು ಈ ಒಣ ಹೂವನ್ನು ಕಿತ್ತುಹಾಕು. ನಿನ್ನ ತಲೆ ಸರಿಹೋಗಲಿ.

ಸು. ಲಕ್ಷ:—ಅಯ್ಯಯ್ಯೋ! (ಎಸೆಯಲ್ಪಟ್ಟ ಹೂವನ್ನು ಆರಿಸಲು ಹೋಗಿ) ಇದೇನು ಬುದ್ಧಿ ಬಂದಿತು ನಿಮಗೇ! ಮುತ್ತೈದೆಗೆ ಹೂವು ಒಣಗಿದ್ದರೇನು—ಹೇಗಿದ್ದರೇನು!!

ಸು. ನ:—(ಅವಳ ಕೈ ತಡದು) ಬಿಡೇ! ಆ ಹೂವನ್ನು ಅಲ್ಲೇ ಬಿಟ್ಟು ಬಿಡೇ!! ನಿನ್ನ ಮುತ್ತೈದೆತನ ನನ್ನಿಂದ ಅಲ್ಲವೇನೇ?

ಸು. ಲಕ್ಷ:—ಅದೆಲ್ಲಾ ಸರೀಂದ್ರೇ. ಆದರೆ ಹೂವನ್ನು ಯಾತಕ್ಕೆ ಕಿತ್ತಿರೀ?

ಸು. ನ:—ನಿನ್ನ ಮುಖಕ್ಕೆ ಈ ಒಣಕಲು ಹೂ ಒಪ್ಪುತ್ತೈಯೇನೇ ಸುಬ್ಬೂ? ಹೋಗಲಿ ಬಿಡೇ; ನಾನು ಮಾರ್ಕೆಟನಲ್ಲಿ ಬೇರೆ ಮಲ್ಲಿಗೆ ಹೂವಿನ ದಂಡೆಗಳಿಗೆ ಆರ್ಡರ್ ಮಾಡಿ ಬಂದಿದ್ದೇನೆಯೇ!

ಸು ಲಕ್ಷ:—(ಆಶ್ಚರ್ಯದಿಂದ) ಇದೇನು ಹೀಗೆ ಮಾತನಾಡುತಾ ಇದ್ದೀರಾಂದ್ರೆ!!

ಸು. ನ:—ಹೌದೇ! ಇಲ್ಲಿ ಬಾರೆ!! ತಗೊಳ್ಳೇ ಆ ಗಂಟನ್ನ.

ಸು. ಲಕ್ಷ:—ಏನಿದೇಂದ್ರೆ ಗಂಟನಲ್ಲಿ?

ಸು. ನ:—ತಾರೇ ಇಲ್ಲಿ (ಗಂಟನ್ನು ಬಿಚ್ಚಿ ಸೀರೆ, ಪೀತಾಂಬರ ಧೋತ್ರಗಳನ್ನು ತೆಗೆದು) ತಗೊಳ್ಳೇ! ಈ ಹಳೆಯ ಸಾರಿಸುವ ಗುಡ್ಡೇನ ತೆಗೆದು, ಉಡೇ ಈ ಪೀತಾಂಬರಾನ. ನಿನ್ನ ಕಿವಿಗೆ ಒಂದು ಜೊತೆ ವಜ್ರದ ಬೆಂಡೋಲೆ, ಅದಕ್ಕೆ ಹೊಂದುವ ಹಾಗೆ ಒಂದು ಜೊತೆ ಲೋಲಾಕಿಗೆ ಆರ್ಡರ್ ಮಾಡಿ ಬಂದಿದ್ದೇನೆಯೇ—[illegible] ಜ್ಯೂಯಲರಿ ಕಂಪೆನೀಲಿ!

ಸು. ಲಕ್ಷ:—(ಸೀರೆಗಳನ್ನು ಕೈಗೆ ತೆಗೆದುಕೊಂಡು ನೋಡುತ್ತಾ) ಇದೇನು ಹೀಗೆ ಹುಡುಗಾಟಿಕೆ ಮಾಡುತ್ತೀರಿ ಅಂದರೇ? ನಾನು ಈ ನನ್ನ ಮುದಿ ವಯಸ್ಸಿನಲ್ಲಿ ಲೋಲಾಕು ಹಾಕಿಕೊಂಡರೂ ಸರಿಯೇ! ಬುಲಾಕಿಟ್ಟುಕೊಂಡರೂ ಸರಿಯೇ!

ಸು. ನ:—ಯಾಕೆ ಹಾಕಿಕೊಳ್ಳಬಾರದೇ?

ಸು. ಲಕ್ಷ:—ನೋಡಿದೋರು ಸಕ್ಕಾರೂಂದ್ರೆ!

• ಸು. ನ:—ನಗಲೇಳೇ! ಹಾಗಾದರೂ ನಗಲೇಳೇ ಆ ಗೂಬೆ-ಜನ.

ಸು. ಲಕ್ಷ್ಮಿ:—ಒಡವೆ ಹಾಕಿಕೊಂಡರೂ ವಯಸ್ಸಿಗೆ ತಕ್ಕಂತೆ ಒಡವೆ ಹಾಕ್ಕೊಳ್ಳೀಬೇಕು.

ಸು. ನ:—ಒಡವೆ ಹಾಕಿಕೊಳ್ಳೋದು ಒಂದೇ ಯಾಕೆ, ನಾವಿರೋದೇನೇ ನಮ್ಮ ಖುಷೀಗೆ ಕಾಣೇ! ಇದಕ್ಕೆ ವಯಸ್ಸನ್ನ ಯಾರೆ ನಿಷ್ಕರ್ಷೆ ಮಾಡಿದೋರೂ?....ಕೇಳೆ—ನಿನ್ನ ಕೈಗೆ ನಾಲ್ಕು ಜೊತೆ ಚಿನ್ನದ ಬಳೆ, ಕಾಲಿಗೆ ಒಂದು ಜೊತೆ ಚೈನು ಬೇರೆ ಬರುತ್ತೆಯೇ!

ಸು. ಲಕ್ಷ್ಮಿ:—ನೀವು ಸುಮ್ಮನಿರೀಂದ್ರೆ ನಿಮ್ಮ ದಮ್ಮಯ್ಯ! ನೀವು ಹೇಳುತಿರೋದು ನೋಡಿದರೆ ನನಗೆ ಭಯವಾಗುತ್ತೆ. 'ಮೈಮೇಲಿನ ಒಡವೆ ಎಲ್ಲಾ ತೆಕ್ಕೊಟ್ಟುಬಿಟ್ಟು ಒರಿಗೈಯಾದೇ' ಅಂತ ಆ ಹೊತ್ತು ಅಂದಿದ್ದಕ್ಕೆ ಕೋಪಿಸಿಕೊಂಡು, ನೀವು ನನಗೆ ಬುದ್ಧಿ ಕಲಿಸುವುದಕ್ಕೋಸ್ಕರ ಅಂಗಡಿಯವರಿಗೆ ಹೇಳಿ ಇದನ್ನೆಲ್ಲಾ ತಂದರೋ ಏನೋ....(ಪಿತಾಂಬರ, ಸೀರೆಗಳನ್ನು ಅಲ್ಲಿಯೇ ಬಿಟ್ಟು ಬಿಟ್ಟು ದೂರ ಸರಿದು) ನಾನು ಹೇಳಿದ್ದು ತಪ್ಪಾಯಿತೂ ಅಂದ್ರೆ! ಆವತ್ತೇ ನಿಮ್ಮ ಕಾಲಿಗೆ ಬಿದ್ದು ಕೇಳಿಕೊಂಡಿದ್ದೀನಿ. ಅಯ್ಯೋ! ಇದು ಯಾಕೆ ಹೀಗೆ ನಗುತ್ತಿದ್ದೀರೀ!! (ಹೆದರುವಳು)

ಸು. ನ:—(ಎದ್ದು ಹೋಗಿ ಅವಳ ಕೈ ಹಿಡಿದು) ಯಾಕೆ ಹೀಗೆ ಬೆದರುತ್ತೀಯಾ! ಇಲ್ಲಿ ನೋಡೇ ಈ ಕಾಗದಾನ!

ಸು. ಲಕ್ಷ್ಮಿ:—ಏನು ಕಾಗದಾಂದರೇ?

ಸು. ನ:—ಟೆಲಿಗ್ರಾಂಮೇ!

ಸು. ಲಕ್ಷ್ಮಿ:—ಟೆಲಿಗ್ರಾಂಮೇ? ಎಲ್ಲಿಂದಾಂದರೇ? ಯಾರು ಕಳುಹಿಸಿದಾರೆ? ಏನು ಸಮಾಚಾರ?

ಸು. ನ:—ಇನ್ನೆಲ್ಲಿಂದಾಲೇ? ಹೆಡ್ ಆಫೀಸ್‌ನಿಂದ ಕಾಣೇ. ನಿನ್ನ ಪೀತಾಂಬರ ಅಡು ಇಟ್ಟು ತಂದ ಈ ಪಾಪಿ ಕೈಲಿ ಲಾಟರೀ ಟಿಕೆಟ್ ತೆಗೆದುಕೊಳ್ಳಲಿಲ್ಲವೇನೇ, ನನ್ನ ಸುಬ್ಬುಲಕ್ಷ್ಮೀ ಹೆಸರಿನಲ್ಲಿ?

ಸು. ಲಕ್ಷ್ಮಿ:—ಹೌದು! ಹೌದು!

ಸು. ನ:—ಆ ಟಿಕೆಟ್‌ಗೇನೇ, ಡಬ್ಬಲ್ ಟಿಕೆಟ್‌ಗೇನೇ, ೧೧೭೯ನೇ ಟಿಕೆಟ್, ಎ. ಬಿ. ಎರಡರಿಂದ ಸುಬ್ಬಲಕ್ಷ್ಮಮ್ಮನ ಹೆಸರಿನಲ್ಲಿ......ನನ್ನ ಸೌಭಾಗ್ಯಲಕ್ಷ್ಮಿಯ ಹೆಸರಿನಲ್ಲಿ,ನಾನು..ಪಾಪರ್ ಸುಬ್ಬುನರಸಿಂಹಯ್ಯ..

ತೆಗೆದುಕೊಂಡ....೧೧೩೯ನೇ ಡಬ್ಬಲ್ ಟಿಕೇಟಿಗೆ......ಒಂದು ಲಕ್ಷ ರೂಪಾಯಿ....ಬಂದಿದೇಂತ ಕಾಣೇ ! ಒಂದು ಲಕ್ಷ ರೂಪಾಯಿ !!

ಸು. ಲಕ್ಷ:—....ಹೌ....ಹೌ....ಹೌದೆ....ಹೌದೇಂದ್ರೇ ?

ಸು. ನ:—ಹೌದೇ ! (ಕೈ ಹಿಡಿದು) ನಿನ್ನಾಣೆಗೂ ಕಾಣೇ ! ನನ್ನಾಣೆಗೂ ಕಾಣೇ !

(ಸುಬ್ಬುಲಕ್ಷ್ಮಮ್ಮನು ಸೀರೆ, ಪೀತಾಂಬರಗಳನ್ನಪ್ಪಿ ಗದ್ಗದಿತಳಾಗಿ ಕಣ್ಣು ಮುಚ್ಚಿ ಸ್ತಂಭೀಭೂತಳಾಗಿ ನಿಂತು ತುಟಿಗಳನ್ನು ನಾಲಿಗೆಯಿಂದ ಸವರಿಕೊಳ್ಳುವಳು)

ಸು. ನ:—ಸುಬ್ಬೂ ! ಸುಬ್ಬೀ ! ಇದೇನೇ ಹೀಗೆ ನಿಂತೆ ? ನಿನಗೆ ಇನ್ನೇನೆ ಯೋಚನೇ ?

ಸು. ಲಕ್ಷ:—(ಕಣ್ತೆರೆದು ಗಂಡನ ಕೈ ಹಿಡಿದು) ಸ್ವಾಮೀ ! ಭಗವಂತಾ ! ಪರಮಾತ್ಮಾ !! ಎಲ್ಲರನ್ನೂ ಸೌಖ್ಯವಾಗಿಟ್ಟಿರು.

ಸು. ನ:—ಏನೇ ಇದೂ ನಿನ್ನ ಮಾತೂ ? ಅಲ್ಲವೇ ? ನಾನು ನಿನಗೆ 'ಅದು ತಂದೇ, ಇದು ತಂದೇ, ಇದು ತರುತೀನೀ, ಅದು ತರುತೀನೀ' ಅಂತ ಹೇಳತಾ ಇದ್ದರೆ, ನೀನು ಒಂದು ಸಲ ನಿನ್ನ ಬಾಯಿಂದ 'ನಿಮಗೇನು ತಂದಿದೀರಿ ?' ಅಂತ ಕೇಳಲಿಲ್ಲವಲ್ಲೇ ?

ಸು. ಲಕ್ಷ:—(ತಟ್ಟನೆ ತಿರುಗಿ ಗಂಡನ ಪಾದಗಳನ್ನು ಹಿಡಿದು) ನನಗೆ ಏನು ಕೇಳಬೇಕು, ಏನು ಹೇಳಬೇಕೂನ್ನೋದೇ ತೋರದ ಹಾಗೆ ಆಗಿದೇಂದ್ರೆ.

ಸು. ನ:—ಕೂತಕೊಳ್ಳೇ ! ಸಮಾಧಾನ ಮಾಡ್ಕೊಳ್ಳೇ ! ನಿನ್ನ ಪೂಜೆ ಫಲಾ ಕಾಣೇ—ಈ ಭಾಗ್ಯ. ನನ್ನ ಭಾಗ್ಯಲಕ್ಷ್ಮೀ ಕಾಣೇ ನೀನೂ !

ಸು. ಲಕ್ಷ:—ಇದೇನೂಂದ್ರೆ ನಿಮಗೆ ಇಂಥ ಧೋತ್ರ ತಂದಿದೀರಿ ?

ಸು. ನ:—(ನಗುತ್ತಾ) ನನಗಲ್ಲವೇ ಅದೂ ! ಸುಬ್ಬುಕೃಷ್ಣನಿಗೇ. ಕಡಿಮೆ ಜರಿ ಇರುವುದು ಅವನ ಮಡಿಪಂಚೆ ಕಾಣೇ. ತಿಳೀತೇ ! ನನಗೆ ಬೇರೆ ಆರ್ಡರ್ ಕೊಟ್ಟಿದೇನೆಯೇ ನಾಲ್ಕು ಜೊತೆ ಜರಿ ಪಂಚೇಗೇ. ಒಂದಂಚಿನಲ್ಲಿ ಉದ್ದಕ್ಕೂ ಕನ್ನಡದಲ್ಲಿ 'ಶ್ರೀಮಂತ ಸುಬ್ಬುನರಸಿಂಹಯ್ಯ—ಶ್ರೀಮಂತ ಸುಬ್ಬುನರಸಿಂಹಯ್ಯ—ಶ್ರೀಮಂತ ಸುಬ್ಬುನರಸಿಂಹಯ್ಯ' ಅಂತ ಅಕ್ಷರಗಳು ಬರಬೇಕು—ಜರೀಲಿ; ಇನ್ನೊಂದು ಅಂಚಿನಲ್ಲಿ 'ಸುಬ್ಬುಲಕ್ಷ್ಮೀ—ಸುಬ್ಬುಲಕ್ಷ್ಮೀ—ಸುಬ್ಬುಲಕ್ಷ್ಮೀ' ಅಂತ ಬರಬೇಕು—ಜರೀನಲ್ಲಿ.

ಸು. ಲಕ್ಷ್ಮಿ:—ಚೆನ್ನಾಗಿದೆ. ತುಂಬಾ ಚೆನ್ನಾಗಿದೆ. ದುಡ್ಡು ಬಂದಾ ಕ್ಷಣಕ್ಕೆ ಈ ಹುಚ್ಚಾಟವೇ ? ನನ್ನ ಹೆಸರಿರೋದನ್ನ ನೋಡಿ, ಜನರು ಲೇವಡಿ ಮಾಡಿ ಹುಚ್ಚೆಬ್ಬಿಸುತ್ತಾರೆ. ಅಷ್ಟೇ ಆಗೋದು.

ಸು. ನ:—ಜನ ನಿನ್ನ ಹೆಸರಿರೋದನ್ನ ಹೇಗೆ ನೋಡುತ್ತಾರೆಯೇ ? ಆ ಅಂಚನ್ನ ಮೇಲೆ ಮಾಡಿಕೊಂಡು ಉಡುತ್ತೀನಲ್ಲೇ; ಅದು ಕೇವಲ ನನ್ನ ತೃಪ್ತಿಗೋಸ್ಕರ, ನನ್ನ ಸಂತೋಷಕ್ಕೋಸ್ಕರ. (ನಿಧಾನವಾಗಿ ಸುಬ್ಬುಲಕ್ಷ್ಮಮ್ಮನ ಕೈಬೆರಳನ್ನು ನೋಡಿ) ಇದೇನು ಮಾಡಿಕೊಂಡೆಯೇ ಬೆರಳನ್ನ ? ಹೀಗೆ ಉದಿದೆ ಯಲ್ಲೇ !

ಸು. ಲಕ್ಷ್ಮಿ:—ಚೆಟ್ನಿ ತಿರುವೋಪಾಗ ಆತುರದಲ್ಲಿ ಒರಳಿನಲ್ಲಿ ಬೆರಳು ಸಿಕ್ಕಿಕೊಂಡಿತು. ಅಷ್ಟೇ !

ಸು. ನ:—ಎಷ್ಟು ಶಾಂತವಾಗಿ ಹೇಳುತ್ತಾ ಕೂತಿದ್ದೀಯೇ—ಬೆರಳು ಬಾಳೆಕಾಯಾಗಿ ಊದಿರೋವಾಗ !! (ಮುಡಿಯನ್ನು ನೇವರಿಸುತ್ತಾ) ನೋಡೇ ಸುಬ್ಬೂ !! ಆ ಅಡಿಗೆ ಒಲೆಗೇ ನೀರು ಸುರಿದು ಆಚೆ ಎತ್ತಿಹಾಕು. ಆ ಗುಂಡ ಕಲ್ಲನ್ನ ಆ ಅಡುಗೆ ಬಚ್ಚಲಿಗೆ ತುರಿಕಿ ಮುಚ್ಚಿಬಿಡು. ಆ ಒಳಕಲ್ಲಿಗೆ ಆ ಚೆಟ್ನಿ ತುಂಬಿ ಸಾರಿಸಿಬಿಡು. ಒಳಗಿರೋ ಆ ತೂತು ಪಾತ್ರೆಗಳನ್ನೆಲ್ಲಾ ಆ ಹಳೇ ಪಾಗಿನ ಕಂಬಿಯವರಿಗೆ ಕೊಟ್ಟುಬಿಟ್ಟು ಒಂದು ಜೊತೆ ಒಳ್ಳೆ ದೀಪದ ಕಂಬ ತೆಗೆದುಕೊಂಡುಬಿಡೇ !

ಸು. ಲಕ್ಷ್ಮಿ:—ಇರೋ ಎರಡು ಪುಡಿ ಪಾತ್ರೇನಾ ಕೊಟ್ಟುಬಿಟ್ಟು, ಒಲೆಗೆ ನೀರು ಸುರಿದುಬಿಟ್ಟು ಹೊಟ್ಟೆ ಹಿಡಿದುಕೊಂಡು ಕೂತುಬಿಡೋದೇ ಜಪಾ ಮಾಡುತಾ ?

ಸು. ನ:—ಯಾಕೆ ಹೀಗೆ ಪೆಚ್ಚಳ ಹಾಗೆ ಪೇಚಾಡತೀ ? ನಿನ್ನ ಈ ಕೈಗಳಿಂದ ಇನ್ನುಮೇಲೆ ಅಡಿಗೆ ಮಾಡಿಸುತೀನೇನೇ ? ಅದೆಲ್ಲಾ ವಜಾ ಕಾಣೇ ಇನ್ನುಮೇಲೇ !!

ಸು. ಲಕ್ಷ್ಮಿ:—ಅಡುಗೇನೂ ಮಾಡದೆ ನಿಮ್ಮ ಮುಂದೆ ಕೂತು ಚಪ್ಪಾಳೆ ತಟ್ಟುತ್ತಿರಲೇ ? ಎಲ್ಲಾ ಹಣವಂತರ ಹೆಂಡತೀರೂ ಹಾಗೇ ಮಾಡುತಾ ಇರುತಾರೇನೂ ?

ಸು. ನ:—ಅಯ್ಯೋ! ಮಂಕೇ! ಏನು ಹೇಳಲೇ ನಿನ್ನದೃಷ್ಟಕ್ಕೆ. ಮನೆಗೆ ಬಂದಿರೊ ಭಾಗ್ಯಲಕ್ಷ್ಮಿ ಲಕ್ಷ ರೂಪಾಯಿನ ಅನುಭವಿಸುವುದು ಹಾಗಿರಲೇ! ಇದು ಬಂದಿರೋ ಆನಂದ ಅನುಭವಿಸೋದಕ್ಕೆ ಕೂಡ ನಿನಗೆ ತೋಚದಲ್ಲೇ! ಕೇಳೇ! ಇನ್ನುಮುಂದೆ ನೀನು ಬೆಳಿಗ್ಗೆ ಸ್ನಾನ ಪೂಜೆ ಮಾಡಿಕೊಂಡು ಪೀತಾಂಬರ ಉಟ್ಟು, ರತ್ನಗಂಬಳಿ ಮೇಲೆ ಕೂತು ವೀಣೆ ಬಾರಿಸುತ್ತಾ ಇರಬೇಕು ಸರಸ್ವತಿ ಹಾಗೇ! ನಾನು ಮುಂದೆ ಕೂತು....

ಸು. ಲಕ್ಷ್ಮ:—ಆಯಿತು ಬಿಡೀ! ನಾನು ಈ ವಯಸ್ಸಿನಲ್ಲಿ ವೀಣೆ ಕಲೀತಾ ಕೂತರೇ ಬಲು ಚೆನ್ನಾಗಿರುತ್ತೇ!

ಸು. ನ:—ಏನೇ ಅಷ್ಟು ಹೊತ್ತಿನಿಂದ 'ವಯಸ್ಸು—ವಯಸ್ಸು' ಅಂತಾ ಇದೀಯೇ? ನೀನು ಏನು ಮುದುಕೀಂತ ತಿಳಕೊಂಡುಬಿಟ್ಟಿದ್ದೀಯೇನೇ? ನೀನು ಇನ್ನೂ ಹುಡುಗಿ ಕಾಣೇ! ನಮಗೆ ದುಡ್ಡು ಸಿಗುವುದು ತಡವಾಯಿತು—ಅದಕ್ಕೋಸ್ಕರ ನೀನು ಸ್ವಲ್ಪ ಸೊರಗಿದ್ದೀ, ಅಷ್ಟೇ! ನೀನು ನನ್ನ ಭಾಗ್ಯಲಕ್ಷ್ಮೀ ಕಾಣೇ! ಈ ಮನೆಗೆ ಸೌಭಾಗ್ಯಲಕ್ಷ್ಮೀ ಕಾಣೇ! ಕೇಳೇ! ಸುಬ್ಬೂ! ಸುಬ್ಬುಲಕ್ಷ್ಮಿ ಅಂದರೇನು ಗೊತ್ತೇನೇ ನಿನಗೇ?

ಸು. ಲಕ್ಷ್ಮ:—ನಮ್ಮಮ್ಮ ನನಗಿಟ್ಟ ಹೆಸರೂಂತಾ!

ಸು. ನ:—ಹಾಗಲ್ಲವೇ. ಸಂಸ್ಕೃತದಲ್ಲಿರೋ 'ಸೌಭಾಗ್ಯಲಕ್ಷ್ಮೀ' ಅನ್ನೋ ಹೆಸರೇ ಕನ್ನಡದಲ್ಲಿ 'ಸುಬ್ಬುಲಕ್ಷ್ಮೀ' ಅಂತ ಆಗಿದೇ ಕಾಣೇ.

(ಬಾಗಿಲ ಬಳಿ ಹೆಜ್ಜೆಯ ಸಪ್ಪಳ)

ಸು. ಲಕ್ಷ್ಮ:—ಓಹೋ! ಮಗೂ ಸ್ಕೂಲಿನಿಂದ ಬಂದುಬಿಟ್ಟನೋ ಏನೋ?

(ಎಡಗೈಲಿದ್ದ ಪುಸ್ತಕಗಳನ್ನು ಎದೆಗಪ್ಪಿ, ಬಲಗೈ ತೋಳಿನಿಂದ ಕಣ್ಣುಗಳನ್ನು ಒರಸಿಕೊಂಡು, ಪೆಚ್ಚುಮುಖದೊಡನೆ ಸುಬ್ಬುಕೃಷ್ಣನ ಪ್ರವೇಶ)

ಸು. ಲಕ್ಷ್ಮ:—(ಎದ್ದು ಮುಂದೆ ಹೋಗಿ) ಯಾಕಪ್ಪಾ ಮಗೂ ಅಳುತ್ತಿದ್ದೀ?

ಸು. ಕೃಷ್ಣ:—ಫೀಸ್ ಕೊಡದಿದ್ದಕ್ಕೆ ಓಡಿಸಿಬಿಟ್ಟರೂ.

ಸು. ನ:—ಪೀಡೇ ಕಳೀತು ಬಿಡೋ.

(ತಂದೆಯ ಧ್ವನಿಯನ್ನು ಕೇಳುತ್ತಲೇ ಕತ್ತೆತ್ತಲು, ತಂದೆಯನ್ನು ಕಾಣುತ್ತಲೇ ಕೈಲಿದ್ದ ಪುಸ್ತಕಗಳು ಜಾರಿ ಬೀಳುವುವು. ತಟ್ಟನೆ ಎತ್ತಿಕೊಳ್ಳಲು ಹೋಗುವನು)

ಸು. ನ:—ಬಿಡೋ! ಬಿಡೋ! ಬಿಟ್ಟುಬಿಡೋ! ಬಿದ್ದುಹೋದ ಪುಸ್ತಕಗಳನ್ನು ಮತ್ತೆ ಎತ್ತಿಕೋಬಾರದೋ! ಅವನ್ನ ಯಾರಾದರೂ ಬಡ ಹುಡುಗರನ್ನ ಕರೆದು ತಗೊಳ್ಳೀ ಅನ್ನೋ....ಬಾರೋ ಇಲ್ಲೀ. (ಮುಂದೆ ಬರುವನು) ಯಾವನೋ ನಿನ್ನನ್ನು ಸ್ಕೂಲಿನಿಂದ ಓಡಿಸಿದವನೂ?

ಸು. ಕೃಷ್ಣ:—ನಮ್ಮ ಕ್ಲಾಸ್ ಮೇಷ್ಟ್ರು.

ಸು. ನ:—ಅವನ ಹೆಸರೇನೋ?

ಸು. ಕೃಷ್ಣ:—ಅವರ ಹೆಸರು ಅದೇ.

ಸು. ನ:—ಅದೇ ಅಂದರೆ ಯಾವದೋ?

ಸು. ಕೃಷ್ಣ:—(ತಂದೆಯ ಕಡೆಗೆ ಕೈ ತೋರಿಸಿ) ಈ ಹೆಸರೇ.

ಸು. ನ:—ಈ ಹೆಸರೂಂದರೇನೋ? ಬಾಯಿಬಿಟ್ಟು ಹೇಳೋ.

ಸು. ಕೃಷ್ಣ:—ಬಿ. ಸುಬ್ಬನರಸಿಂಹಯ್ಯನವರೂಂತ.

ಸು ನ:—(ಮೇಲೆದ್ದು) ಏನೋ! ಬಿ. ಸುಬ್ಬನರಸಿಂಹಯ್ಯನೇ? ನನ್ನ ಹೆಸರೇನೇನೋ?

ಸು. ಕೃಷ್ಣ:—ಹೂಂ.

ಸು ನ:—ಎಲಾ ಚಂಡಾಲಾ! ನನ್ನ ಹೆಸರನ್ನು ತಾನಿಟ್ಟುಕೊಂಡಿರುವುದು ಸಾಲದೇ, ನಿನ್ನನ್ನು ಬೇರೆ ಕ್ಲಾಸಿನಿಂದ ಓಡಿಸಿದನೇ, ಪಾಪೀ!

ಸು. ಲಕ್ಷ:—ಫೀಸ್ ಕೊಡದಿದ್ದರೆ ಅವರೇನು ಮಾಡುತ್ತಾರೆ?

ಸು. ನ:—ಫೀಸೂ? ಇನ್ನು ಅವನಿಗೆ ನಾನು ಕೊಡುತ್ತೇನೆ. ಲೋ! ಸುಬ್ಬಕೃಷ್ಣೋ! ಆ ಬೇಕೂಫ ನರಸಿಂಹಯ್ಯನಿಗೆ ಎಷ್ಟು ಸಂಬಳವೋ?

ಸು. ಕೃಷ್ಣ:—ಎಪ್ಪತ್ತೈದು ರೂಪಾಯಿ.

ಸು. ನ:—ನೋಡೋ, ನಾನು ಅವನಿಗೆ ಒಂದು ಅಪಾಯಿಂಟಮೆಂಟ್ ಆರ್ಡರ್ ಕೊಡುತೇನೆ. ತೆಗೆದುಕೊಂಡು ಹೋಗಿ ಕರಕೊಂಡು ಬಾ ಆ ಅಧಮನನ್ನ.

ಸು. ಕೃಷ್ಣ:—(ಆಶ್ಚರ್ಯದಿಂದ) ಅಪ್ಪಾ!

ಸು. ನ:—ಹೌದೋ. ನಾನೇ ಒಂದು ಸ್ಕೂಲ್ ಸ್ಟಾರ್ಟ ಮಾಡುತೇನೆ. ಅದಕ್ಕೆ ನಾನೇ ಪ್ರೆಸಿಡೆಂಟ್. ನೀನೇ ಪ್ರಿನ್ಸಿಪಾಲ್. ಆ ನಿನ್ನ ಬಿ. ಸುಬ್ಬನರಸಿಂಹಯ್ಯ ಇದಾನಲ್ಲಾ—ಬೇಕೂಫ — ಸುಬ್ಬನರಸಿಂಹಯ್ಯ

ಅವನೇ ಹೆಡ್‌ಮೇಷ್ಟ್ರು. ಕೇಳೋ, ಅವನಿಗೆ ಎತ್ತಿಗೊಳ್ಳುತ್ತಲೇ ಎಪ್ಪತ್ತೈದು ರೂಪಾಯಿ ಸಂಬಳ. ಇಲ್ಲೀಗ ಒರುತ್ತಿರುವುದಕ್ಕಿಂತಲೂ ಒಂದು ರೂಪಾಯಿ ಹೆಚ್ಚುಗೇನೇ!

ಸು. ಕೃಷ್ಣ:—(ಪೆಚ್ಚಾಗಿ) ಅಪ್ಪಾ!

ಸು. ನ:—ಯಾಕೋ? ಬಾರೋ ಇಲ್ಲಿ. ಕೂತುಕೊಳ್ಳೋ. ಏನೇ ಸುಬ್ಬು! ಮಗೂಗೆ ಮದುವೆ ವಯಸ್ಸಾಯಿತಲ್ಲವೇನೇ?

ಸು. ಲಕ್ಷ್ಮಿ:—ವಯಸ್ಸಾದಾಕ್ಷಣಕ್ಕೆ ಹೆಣ್ಣು ಸಿಗಬೇಕಲ್ಲ.

ಸು. ನ:—ಹೆಣ್ಣಿಗೇನೇ! ಅವನೇ ಹುಡುಗನಾಗಿದ್ದಾಗ 'ಹೆಂಡತಿ, ಹೆಂಡತಿ' ಅಂತ ಅಟ್ಟಿಸಿಕೊಂಡು ಆಟ ಆಡುತ್ತಿರಲಿಲ್ಲವೇನೇ ಸೀತಾರಾಮಯ್ಯನ ಮಗಳೂ—ಅವಳನ್ನೇ ತರುತ್ತೇನೆಯೇ.

ಸು. ಲಕ್ಷ್ಮಿ:—'ನಿಮಗೆ ತಿನ್ನುವುದಕ್ಕೆ ಗತಿಯಿಲ್ಲಾ; ಹುಡುಗ S.S L.C. ಪರೀಕ್ಷೇಲೇ ಮೂರು ಸಲ ಫೇಲಾಗಿದಾನೆ....ನಿಮ್ಮ ಮನೆಗೆ ಯಾವ ಪರದೇಶಿಗಳು ಹೆಣ್ಣುಕೊಡುತ್ತಾರೇ!' ಅಂತ ಹೋದ ವರುಷಾನೇ ಆಕೆ 'ಫಟಾರ'ನೆ ಅಂದುಬಿಡಲಿಲ್ಲವೇ ಮಲ್ಲಿಕಾರ್ಜುನ ದೇವಸ್ಥಾನದಲ್ಲಿ?

ಸು ನ:—ಹೋದ ವರುಷ ಅಂದಿರಬಹುದು ಕಾಣೇ. ಆಗ ನಮ್ಮ ಮನೇಲಿನ್ನೂ ಬೇಕಾಗಿರಲಿಲ್ಲ. ಈಗ ಹಾಗಲ್ಲವೇ. ಗಂಡ ಹೆಂಡತಿ ಇಬ್ಬರೂ ಮುಂದೇ ಹೊರಳುತಾ ಒಂದು ನಮ್ಮ ಕಾಲು ತೊಳೆದು ಮಗಳನ್ನೊಪ್ಪಿಸಿ 'ಸ್ವೀಕರಿಸಿ ಉದ್ಧಾರ ಮಾಡಿ' ಅಂತ ಅಂಗಲಾಚಿಕೊಳ್ಳುತಾರೆ ಕಾಣೇ! ಲೋ ಮಗೂ! ತಗೊಳ್ಳೋ ನೋಟ್ ಪುಸ್ತಕ, ಪೆನ್ಸಿಲ್ಲು. ಬರೆಯೋ.

(ಸುಬ್ಬುಕೃಷ್ಣನು ಹೋಗಿ ಪುಸ್ತಕಗಳನ್ನು ಜೋಡಿಸಿ ತಂದು, ನೋಟ್ ಪುಸ್ತಕವನ್ನು ತೆರೆದು, ಪೆನ್ಸಿಲ್ಲು ಹಿಡಿದು ಕುಳಿತುಕೊಳ್ಳುವನು)

ಸು. ನ:— ಬರೆಯೋ.

'ಲಾಯರ್ ಗುಡಿಬಂಡೆ ಸೀತಾರಾಮಯ್ಯನಿಗೆ—

ಶ್ರೀಮಂತ ಸುಬ್ಬುನರಸಿಂಹಯ್ಯನು ಮಾಡುವ ಆಶೀರ್ವಾದಗಳು.

ಸು. ಲಕ್ಷ್ಮಿ:—ಇದೇನೂಂದ್ರೆ, ಏಕವಚನದಲ್ಲಿ ಬರೆಸಿದ್ದಲ್ಲದೆ, ಬೀಗರಿಗೆ ಆಶೀರ್ವಾದಗಳೂಂತ ಅನ್ನೋದೇ?

ಸು. ನ:—ನಿನಗೇನು ಮಂಕು ಬಡೀತೇನೇ ? ಅವನು ಬೀಗದೇವರಾದರೂ ನನಗಿಂತ ನಾಲ್ಕು ವರ್ಷ ಚಿಕ್ಕವನಲ್ಲವೇನೇ ? ಅಲ್ಲದೆ ಈಗ ಅವನನ್ನ ಹ್ಯಾಗೆ ಕರೆದರೂ ತಡೆಯುತ್ತೈಯೇ. ಶ್ರೀಮಂತ ಸುಬ್ಬುನರಸಿಂಹಯ್ಯ—ಗಂಡಿನ ತಂದೆ—ತಾನೇ ಖುದ್ದಾಗಿ—ಹುಡುಗೀನ ಕೇಳುತಿರುವುದು. ಬರಿಯೋ ಮಗು—

'ನಾನು ಮುಂದಿನ ತಿಂಗಳಿನಲ್ಲಿಯೇ ನನ್ನ ಚಿರಂಜೀವಿ ಸಹಸ್ರಾಯು ಸುಬ್ಬುಕೃಷ್ಣಸ್ವಾಮಿಯ ವಿವಾಹವನ್ನು ನನ್ನ ಸ್ವಂತ ಗೃಹದಲ್ಲಿ ನೆರವೇರಿಸಬೇಕೆಂದು ಇರುವುದರಿಂದ......

ಸು. ಲಕ್ಷ:—ಸ್ವಂತ ಗೃಹ ಯಾವುದೂಂದ್ರೆ ?

ಸು. ನ:—ಇದೇ ಕಾಣೇ, ನಾವಿರೋ ಈ ಗುಡಿಸಲು—ಇದನ್ನು ಕೆಡವಿಸಿ ಬಿಟ್ಟು ಲಗ್ನದ ವೇಳೆಗೆ ಫಸ್ಟ್‌ಕ್ಲಾಸ್ ಎರಡು ಅಂತಸ್ತಿನ ಮನೆ ಕಟ್ಟಿಸೀ, ಬೀಗರಿಗೋಸ್ಕರ ಕಾಂಪೌಂಡ್‌ನಲ್ಲಿಯೇ ಡೇರಾ ಹಾಕಿಸುತೇನೆಯೇ !

ಸು. ಲಕ್ಷ:—ಹಾಗಾದರೆ ಈ ಮನೆಯನ್ನು ಕೊಂಡುಕೊಳ್ಳುತ್ತೀರಾ ?

ಸು. ನ:—ಹೌದೇ ! ಸಂಗ್ರಾಮ ಇದನ್ನು ಮಾರದಿದ್ದರೆ ಅವನನ್ನೇ ಕೊಂಡುಕೊಂಡುಬಿಡುತೇನೆಯೇ.

ಸು. ಲಕ್ಷ:—ಇಲ್ಲ, ಇಲ್ಲ. ಮಾರಿಬಿಡಬೇಕೂಂತಾಲೇ ಇದಾರೆ.

ಸು. ನ:—ಅದು ನಿನಗೆ ಹೇಗೆ ಗೊತ್ತು ?

ಸು. ಲಕ್ಷ:—ನೀವು ಬರುವುದಕ್ಕೆ ಎರಡು ನಿಮಿಷ ಮುಂಚೆ ಬಂದಿದ್ದರು, ಆಗ ಹೇಳಿದರು.

ಸು. ನ:—ಬಾಡಿಗೆಗೆ ಬಂದಿದ್ದನೇನೋ ?

ಸು. ಲಕ್ಷ:—ಇಲ್ಲ. ಅಕ್ಕಿ ಮೂಟೆ, ಬೆಲ್ಲದ ಮೂಟೆ ಬಂದಿದೆಯಂತೆ ಸುಬ್ಬರಾಯಶೆಟ್ಟರ ಮಂಡೀಗೆ. ಒಟ್ಟಿಗೆ ತೆಗೆದುಕೊಂಡರೆ ಸುಲಭವಾಗಿ ಇರುತ್ತೇ—ನೀವೇನಾದರೂ ತೆಗೆದುಕೊಳ್ಳುತ್ತೀರಾಂತ ಕೇಳುವುದಕ್ಕೆ..

ಸು. ನ:—ನಮಗೆ ಯಾತಕ್ಕೇ ಅದೆಲ್ಲಾ ?

ಸು. ಲಕ್ಷ:—ನಾಳೆ ಲಗ್ನಕ್ಕೆ ?

ಸು. ನ:—ಲಗ್ನಕ್ಕೆ ಆ ಮಂಡೀನೇ ಕೊಂಡುಕೊಳ್ಳೋಣೇಳೇ.... ಬರೆಯೋ....ಏನಾಯಿತೋ ?

'ಸ್ವಗ್ರುಹದಲ್ಲಿ ನೆರವೇರಿಸಬೇಕೆಂದಿದ್ದೇನೆ. ಹುಡುಗೀಗೆ ಹತ್ತು ಸಾವಿರ ರೂಪಾಯಿನ ಒಡವೆ ಇಡುತ್ತೇನೆ. ಬೀಗರ ಉಪಚಾರಕ್ಕೋಂತ ಎರಡು ಸಾವಿರ ರೂಪಾಯಿ ರಿಸರ್ವ್ ಮಾಡಿದೇನೆ. ನೀನು ಅಳಿಯನಿಗೇನೂ ಕೊಡಬೇಕಾದ್ದಿಲ್ಲ. ಎರಡು ಖರ್ಚೂ ನನ್ನದೇ—

ಸು. ಲಕ್ಷ್ಮಿ:—ಅದು ಯಾಕೇಂದ್ರೆ ಹಾಗೇ?

ಸು. ನ:—ಹೌದೇ. ನಮ್ಮಂಥ ಶ್ರೀಮಂತರು ಅವನು ಕೊಡೋ ಒಂದು ಬೆಳ್ಳಿ ಲೋಟ, ಒಂದು ಕಡ್ಡಿ-ಜರಿ-ಪಂಚೆ, ಒಂದು ಹಿತ್ತಾಳೆ ತಪ್ಪಲೆ ತೆಗೆದುಕೊಳ್ಳೋದೇನೇ? ಬೇಡವೇ. ಬರಿಯೋ—

'ನಿನಗೆ ಈ ಷರತ್ತುಗಳು ಒಪ್ಪಿಗೆಯಾಗಿರುವ ಪಕ್ಷಕ್ಕೆ ನಿನ್ನ ಮಗಳು ಚಿರಂಜೀವಿ ಸೌಭಾಗ್ಯಕಾಂಕ್ಷಿಣಿ ಹರಿದ್ರಾ-ಕುಂಕುಮ ಶೋಭಿತಳಾದ ಗುಂಡಮ್ಮನನ್ನ—ಬ್ರಾಕೆಟ್‌ನಲ್ಲಿ ಬರಿ—(ಧಾರೆಯ ಸಮಯಕ್ಕೆ ಕನ್ಯೆಗೆ ಬೇರೆ ಶುಭನಾಮಧೇಯವು ಕೊಡಲ್ಪಡುವುದು)—ನನ್ನ ಮಗನಿಗೆ ತಂದು ವಿವಾಹ ಮಾಡುತ್ತೇನೆ. ನೀನು ನಿನ್ನಿಷ್ಟವನ್ನು ಈ ಕಾಗದ ಕಂಡ ನಾಲ್ಕು ದಿವಸಗಳೊಳಗಾಗಿಯೇ ಬರೆಯುವುದು. ತಪ್ಪಿದಲ್ಲಿ ನನ್ನ ಹಿಂದಿನ ವಾಗ್ದಾನಕ್ಕೆ ನಾನು ಬಾಧ್ಯನಲ್ಲ—

—ಇಂತಿ ಆಶೀರ್ವಾದಗಳು.'

ನೀನೇ ರುಜು ಮಾಡೋ—ಶ್ರೀಮಂತ ಸುಬ್ಬುನರಸಿಂಹಯ್ಯಾಂತ.

ಸು. ಲಕ್ಷ್ಮಿ:—ಬೇಡ. ನೀವೇ ಮಾಡೀಂದರೇ. ಬೀಗರಿಗೆ ಬರೆಯೋ ಕಾಗದ.

ಸು. ನ:—ಅವನು ಬೀಗನಾಗೋದಕ್ಕೆ ಒಪ್ಪಿದ ಮೇಲೆ ನಾನೇ ರುಜು ಮಾಡುತ್ತೇನೆ. ಬರೆಯೋ ನನ್ನ ಹೆಸರನ್ನ.

ಸು. ಕೃಷ್ಣ:—ಬರೆದೇಪ್ಪ.

ಸು. ನ:—ಆತನ ಅಡ್ರೆಸ್ ಗೊತ್ತಿದೆಯೋ ಇಲ್ಲವೋ ನಿನಗೆ?

ಸು. ಕೃಷ್ಣ:—ಗೊತ್ತಿದೇಪ್ಪ.

ಸು. ನ:—ಮನೆ ನಂಬರು ಏನು ಹೇಳು?

ಸು. ಕೃಷ್ಣ:—ಎಪ್ಪತ್ತೊಂಬತ್ತು. (೭೯)

ಸು. ನ:—ಸರಿ. ಆ ಕಾಗದಾ ಪೋಸ್ಟ್‌ಗೆ ಹಾಕಿಬಿಡು. ನೋಡೋ ಮಗೂ, ಈ ಊರಿನಲ್ಲಿರೋ ಒಳ್ಳೇ ಕಂಟ್ರಾಕ್ಟರುಗಳು ಯಾರು? ಜೊಂಬಾಯಿ ತರಹ ಮನೆ ಕಟ್ಟಿಸೋರು. ಪ್ಯಾಸ್ ಮಾಡಿರೋ ಹುಡುಗರ ಹೆಸರು ಹೇಳು. ಈ ಹಳೇ ಬಾಬತ್ತು ನೋರು ಬೇಡ.

ಸು. ಕೃಷ್ಣ:—ರಾಂ ಅಂಡ್ ರಾವ್.

ಸು. ನ:—ಹೂಂ. ಆಮೇಲೆ?

ಸು. ಕೃಷ್ಣ:—ಗೃಹಸ್ಥ ಲಿಮಿಟೆಡ್.

ಸು. ನ:—ಹೂಂ. ಮುಂದೆ?

ಸು. ಕೃಷ್ಣ:—ಮೂರ್ತಿ ಅಂಡ್ ಮೂರ್ತಿ.

ಸು. ನ:—ಇದೆಂತಹ ಮೂರ್ತಿನೋ?

ಸು. ಕೃಷ್ಣ:—ಪ್ರಸನ್ನಮೂರ್ತಿ, ಕಲ್ಯಾಣಮೂರ್ತಿಂತ.

ಸು. ನ:—(ಮೆಚ್ಚಿಕೆಯಿಂದ) ಭೇಷ್! ಭೇಷ್! ಬಹಳ ಚೆನ್ನಾಗಿದೆ ಹೆಸರು. ನೀನು ಹೊರಟು ಒಂದು ಟ್ಯಾಕ್ಸಿ ಮಾಡಿಕೋ. ನೀದಾ ಆ ದ್ವಿಮೂರ್ತಿಗಳ ಹತ್ತಿರ ಹೋಗಿ, ಇಲ್ಲಿರೋ ಈ ಹಳೇ ಮನೆಯನ್ನು ಕೆಡವಿ, ಅದೇ ನಿವೇಶನದಲ್ಲಿ ಆದಷ್ಟು ಜಾಗ್ರತೆ ಜೊಂಬಾಯಿ ಫ್ಯಾಷನ್‌ದೊಂದು ಮಹಡಿ ಮನೆ ಕಟ್ಟಬೇಕಂತೆ ಅಂತ ನನ್ನ ಹೆಸರು ಹೇಳಿ, ಹತ್ತಿರದಲ್ಲಿರೋ ತರಹೇವಾರಿ ಪ್ಲಾನ್‌ಗಳನ್ನೆಲ್ಲಾ ತಗೊಂಡು ಬರೋ ಹಾಗೆ ಹೇಳು. ಹಾಗೇನೇ ಮಗೂ! ಇಲ್ಲಿ ನಮ್ಮ ವಾಸಕ್ಕೆ ಅನುಕೂಲವಾಗಿರುವ ಊಟದ ಹೋಟಲ್ ಯಾವುದು?

ಸು. ಕೃಷ್ಣ:—ಬೃಂದಾವನ ಭೋಜನಶಾಲಾ.

ಸು. ನ:—ಒಬ್ಬರ ಊಟಕ್ಕೆ ತಿಂಗಳಿಗೆಷ್ಟು ಛಾರ್ಜು?

ಸು. ಕೃಷ್ಣ:—ಇಪ್ಪತ್ತು ರೂಪಾಯಿ ಇರಬಹುದು.

ಸು. ಲಕ್ಷ:—ಅಬ್ಬಬ್ಬಾ!

ಸು. ನ:—ಸರಿ. ಒಳ್ಳೇ ಹೋಟಲೇ ಹೇಳಿದೆ. ನಮ್ಮ ಯೋಗ್ಯತೆಗೆ ತಕ್ಕ ಹಾಗಿದೆ. ನೀನು ಅಲ್ಲಿಂದ ಟ್ಯಾಕ್ಸೀಲೇ ಆ ಹೋಟಲಿಗೆ ಹೋಗಿ, ನನ್ನ ಹೆಸರಿನಲ್ಲಿ ನಾಲ್ಕು ರೂಮುಗಳನ್ನು ಗೊತ್ತುಮಾಡಿಕೊಂಡು ಮೂರು ಊಟಕ್ಕೆ ಹೇಳಿ ಬಂದು ಬಿಡು.

ಸು. ಲಕ್ಷ್ಮ:—ಹೋಟಲಲ್ಲಿ ಊಟ ಹೇಗೆ ಮಾಡೋದೂಂದ್ರೆ ?

ಸು. ನ:—ಮೇಜಿನ ಮೇಲೆ ಕಾಣೇ!....ಬಾಳೆ ಎಲೇ ಮೇಲೆ ಬೆಳ್ಳಿ ತಟ್ಟೇಲಿ ಬಡಿಸಿದ ಊಟಾನ ಚಿನ್ನದ ಚಮಚದಲ್ಲಿ ಮಾಡಿ, ಅದೇ ಕುರ್ಚಿಯನ್ನೇ ತಳ್ಳಿಕೊಂಡು ಡ್ರಾಯಿಂಗ ರೂಮಿಗೆ ಬಂದರೆ ಅಲ್ಲಿ ಇನ್ನೊಂದರ ಮೇಲೆ ರೆಡಿ ಆಗಿರೋ ಚಿಗುರೆಲೆ, ಚಿಗುರಡಿಕೆ, ಚಿಗುರು ಸುಣ್ಣ, ಯಾಲಕ್ಕಿ, ಜಾಪತ್ರಿ, ಜಾಕಾಯಿ, ಲವಂಗ ಹಾಕಿಕೊಂಡು ಜಗೀತಾ ಸೋಫಾಕ್ಕೆ ಒರಗಿಕೊಂಡೂ, ಪಕ್ಕದಲ್ಲಿರೋ 'ಬಿರುಟೇ ಅದು ಮೀ' ಆ ರೇಡಿಯೋದಲ್ಲಿ ಬರೋ ಗಂಧರ್ವ ಸಂಗೀತ ಕೇಳುತಾ ಬಿದ್ದಿದ್ದರೇ, ಆ ಕುಬೇರ ಬಂದು ಕಾಲು ಹಿಸುಕುತಾ ಎಚ್ಚರ ಮಾಡೀ, ಕೇಸರಿ, ಬಾದಾಮಿ ಹಾಕಿದ ಬಿಸಿ ಹಾಲು ಹಿಡಿದೂ—ಹುಂ......ಅದನ್ನೆಲ್ಲಾ ಅಲ್ಲೇ ನೋಡುವೆ. ಇಲ್ಲಿ ಹೇಳಿ ಏನು ಪ್ರಯೋಜನ. ನಡೀ ಮಗು ನೀನು. ಈ ಎರಡು ಕೆಲಸ ಮಾಡಿಕೊಂಡು, ಈ ಕಾಗದಾನ ರಿಜಿಸ್ಟರ್ ಮಾಡಿಸಿ ಟಪ್ಪಾಲಿಗೆ ಹಾಕಿ, ನೀನು ಟ್ಯಾಕ್ಸೀ ತೆಗೆದುಕೊಂಡು ಇಲ್ಲಿಗೇ ಬಂದುಬಿಡು. ಎಲ್ಲರೂ ಒಟ್ಟಿಗೆ ಊಟಕ್ಕೆ ಹೊರಟು ಹೋಗೋಣ, ಆ ಸುಬ್ಬುಕೃಷ್ಣನ ಬೃಂದಾವನಕ್ಕೆ....ಃ.... ಯಾಕೋ ಅನುಮಾನಿಸುತೀ ?

ಸು. ಕೃಷ್ಣ:—ದುಡ್ಡು....ರೆಜಿಸ್ಟರ್‌ಗೆ....

ಸು. ನ:—(ನಕ್ಕು) ಅದಕ್ಕೆ ಯಾಕೋ ಯೋಚನೆ. ಪುಟ್ಟಪ್ಪನ ಹೋಟಲಿಗೆ ಹೋಗು. ಪುಸ್ತಕದಲ್ಲಿ ಸೈನ್ ಮಾಡಿ ಒಂದಿಪ್ಪತ್ತು ರೂಪಾಯಿ ತೆಗೆದುಕೊಂಡು ಹೋಗು—ತಿಳೀತೇನೋ. ಈಗಲೇ ಸಾವಿರ ರೂಪಾಯಿ ಬೇಕಾದರೂ ಒಂದು ನಿಮಿಷದಲ್ಲಿ ತರುತ್ತೀನೀ.....ಕೈಲಿಭಾಗ್ಯಲಕ್ಷ್ಮಿ ತಾಂಡವಾಡುತಿರೋವಾಗ.

(ಸುಬ್ಬುಕೃಷ್ಣನು ಆನಂದದಿಂದ ನಿಷ್ಕ್ರಮಿಸುವನು)

ಸು. ಲಕ್ಷ್ಮ:—ಹೌದೂಂದ್ರೇ! ಮಗೂಗೇ, ನಿಮಗೇ, ಷರ್ಟುಗಳೂ ಕೋಟುಗಳೂ ಹೊಲಿಸಬೇಡವೇ ?

ಸು. ನ:—ಅದಕ್ಕೇನೇ. ಟ್ಯಾಕ್ಸೀಲೀ ಕೂತುಕೊಂಡೇನೇ ಆ ರೆಡಿ ಮೇಡ್ ಬಟ್ಟೆ ಅಂಗಡಿ ಮುಂದೆ, ಆ ಡ್ರೈವರ್‌ಗೆ ಹೆಳಿ ಹಾರನ್ ಅದುಮಿಸಿ

ದರೆ ಸಾಕು, ಆ ಸಾಹುಜೀನೇ ಓಡಿ ಬರುತಾನೇ—ಗಲ್ಲಾ ಮುಗ್ಗರಿಸೀ. ಎಂಥಾ ಒಟ್ಟೇ ಉಂದರೆ ಅಂಥ ಒಟ್ಟೆ ನೋಡಿ ತೆಗೆದುಕೊಂಡರಾಯಿತು.

ಸು. ಲಕ್ಷ:—ಹೌದೂ! ಆದರೆ ದೇವರನ್ನ ತಗೊಂಡು ಹೋಗಿ ಕೋಟಲಿಸಲ್ಲಿ ಹೇಗಿಟ್ಟು ಪೂಜೆ ಮಾಡೋದೂಂದ್ರೆ?

ಸು. ನ:—ಅದಕ್ಕೆ ಯೋಚನೆ ಯಾಕೆ ಸುಬ್ಬಾಣೀ!

ಸು. ಲಕ್ಷ:—ಮರೆತು ಹೋಗಿದ್ದ ಹೆಸರುಗಳೆಲ್ಲಾ ಈಗ ಜ್ಞಾಪಕಕ್ಕೆ ಬರುತಾ ಇದೇ ಕೂಗೋದಕ್ಕೆ!

ಸು. ನ:—ಹೌದು ಕಾಣೇ ಬಂಗಾರೀ! ಇಲ್ಲಿ ಕೇಳೇ! ಆ ಮಲ್ಲಿಕಾರ್ಜುನ ಗುಡಿಯ ಪೂಜಾರಿ ಆ ವಿಶ್ವನಾಥ ಜೋಯಿಸ ಇದಾನಲ್ಲಾ, ಅವನನ್ನ ಕರೆದು ನಮ್ಮ ಮನೆ ಸಾಲಿಗ್ರಾಮದ ಸಂಪುಟ, ದೇವರ ವಿಗ್ರಹ, ಗುರು ಪಾದಗಳನ್ನೆಲ್ಲಾ ಮೇಳ ಮಾಡಿಸಿಕೊಂಡು ಮಡಿಯಲ್ಲಿ ಅವನ್ನ ಜೋಯಿಸನ ಕೈಲಿ ತೆಗೆಸಿಕೊಂಡು ಹೋಗಿ, ದೇವಸ್ಥಾನದಲ್ಲಿ ದೇವರ ಬಳಿ ಇಡಿಸಿ, ನಿತ್ಯ ಕುಂಕುಮಾರ್ಚನೆ, ಸಹಸ್ರನಾಮ ಜಪ, ಮಹಾನೈವೇದ್ಯ ಮಹಾಮಂಗಳಾರತೀ ಮಾಡಿಸುತಾ ಇದ್ದೂ, ನಮ್ಮ ಸ್ವಂತ ಮನೆ 'ಸೌಭಾಗ್ಯಲಕ್ಷ್ಮೀ ಭವನ' ತಯಾರಾದ ಮೇಲೆ, ಬೆಳ್ಳಿಯ ಪಲ್ಲಕ್ಕೀಲಿ ದೇವರನ್ನ ಕೂಡಿಸಿ ಚಿನ್ನದ ಜೋಡೀ ವಾಲಗ ಬ್ಯಾಂಡ್ ಸಮೇತ ಮೆರವಣಿಗೆ ಮಾಡಿಸಿಕೊಂಡು ಸ್ವಗ್ರುಹಕ್ಕೆ ಕರೆತಂದು ಪ್ರತಿಷ್ಠಾಪನೆ ಮಾಡಿಸೋಣವೇ!

[ಹೊರಗಡೆ 'ಸುಬ್ಬುನರಸಿಂಹಯ್ಯಾ! ಸುಬ್ಬುನರಸಿಂಹಯ್ಯಾ!!' ಎಂಬ ಸಂಗರಾಮಯ್ಯನ ಕೂಗು]

ಸು. ಲಕ್ಷ:—ಯಾರದೂ?

ಸಂಗ:—(ಹೊರಗಿಂದಲೇ) ನಾನಮ್ಮ ತಾಯೀ! ಇನ್ನೂ ಬಂದೇ ಇಲ್ಲವೋ ಇವನು ಮನೇಗೇ?....ಸರಿಯೇ..ಹೋಗುತಾ ಹೋಗುತಾ ಒಳ್ಳೇ ಗುಂಪನೇ ಸೇರಿದ—ಅದೃಷ್ಟಪರೀಕ್ಷೆಗೆ. ನಾ ಬರುತೇನಮ್ಮ ಮಧ್ಯಾಹ್ನಕ್ಕೆ.

ಸು. ಲಕ್ಷ:—ಹೊರಟು ಹೋಗುತಾರೇನೋ.... (ಮುಂದೆ ಬಂದು) ಸಂಗರಾಮಯ್ಯನವರೇ!

ಸು. ನ:—ನಾನೇ ಕರೀತೇನೆ ಇರೀ! (ಮುಂದೆ ಹೋಗಿ) ಮಧ್ಯಾಹ್ನಕ್ಕೆ ಯಾಕೋ? ಈಗಲೇ ಬಾರೋ ನಿನ್ನ ಅದೃಷ್ಟಪರೀಕ್ಷೆ ಮಾಡುತೇನೆ.

(ಸಂಗರಾಮಯ್ಯನನ್ನ ಕೈಹಿಡಿದು ಕರೆತರುವನು; ಸುಬ್ಬುಲಕ್ಷ್ಮಮ್ಮನು ಒಳಗೆ ಹೋಗುವಳು)

ಸಂಗ:—(ಹೆದರಿದ್ದರೂ ನಗಲು ಯತ್ನಿಸುತ್ತಾ) ನೀನು ಮನೇಲಿದ್ದೀಂತ ನನಗೆ ಗೊತ್ತಿತ್ತು.

ಸು. ನ:—ಹೌದು ಹೌದೂ! ಅದಕ್ಕೇ ಹಿಂದಿರುಗಿ ಹೊರಟು ಹೋಗು ತಿದ್ದೀ ಅಲ್ಲವೇ?

ಸಂಗ:—ತಮಾಷೇಗೆ ಹಾಗಂದೆ ಕಾಣಯ್ಯಾ!

ಸು. ನ:—ಅದು ಸರಿ—ಹೋಗಲೀ ಬಿಡೂ. ಈಗ ಯಾಕೆ ಬಂದೆಯೋ?

ಸಂಗ:—ಸುಮ್ಮನೆ....ನಿನ್ನನ್ನ ನೋಡಿಕೊಂಡು ಯೋಗಕ್ಷೇಮ ವಿಚಾರಿಸಿಕೊಂಡು ಹೋಗೋಣಾಂತ.

ಸು. ನ:—ನನ್ನ ಯೋಗಕ್ಷೇಮ ವಿಚಾರಿಸೋಣಾಂತ ಬಂದೆಯೇನೋ? (ನಕ್ಕು) ಸುಳ್ಳೋ! ಶುದ್ಧ ಸುಳ್ಳೋ! ನಿಜ ಹೇಳೋ ಯಾಕೆ ಬಂದೇ?.... ಅದೂವೆ ಒಂದೇ ಬೆಳಿಗ್ಗೆ ಎರಡು ಸಲಾ!

ಸಂಗ:—(ಬೆದರಿ) ಬೆಳಿಗ್ಗೆ ಬಂದದ್ದು......ಆ ಬಚ್ಚಲಮನೆ ಸೋರು ತ್ತಿತ್ತಲ್ಲಾ ಒಲೇ ಮೇಲೇ, ಅದನ್ನ ನೋಡಿಕೊಂಡು ಹೋಗಿ ರಿಪೇರಿ ಮಾಡಿಸೋಣಾಂತ ಬಂದೆ..ಈಗ ಮನೇಗೆ ಹೋಗುತಾ ದಾರೀಲಿ, ಹಾಗೇ ಕೂಗು ಹಾಕಿ ಬಿಟ್ಟು ಹೋಗೋಣಾಂತ ಬಂದೆ..ಅಷ್ಟೇ.

ಸು. ನ:—ನೀನು ಯಾಕೆ ಮರೆಮಾಚುತೀಯೋ ಪಾತಕಾ? ಹೇಳೋ. ನಿಜ ಹೇಳೋ! ನೀನು ಯಾತಕ್ಕೆ ಬಂದೇ? ರಿಪೇರಿ ಮಾತು ಬಿಡು. ನಿನ್ನ ಕಣ್ಣೆದುರಿಗೇನೇ....ನೀನು ನೋಡುತ್ತಿರುವ ಹಾಗೇನೇ ಈ ಮನೆ..ಈ ನಿನ್ನ ಮುರುಕು ಮನೆ ನೆಲಸಮವಾಗುತ್ತೇ....(ಹುಚ್ಚುನಗು ನಗುವನು)

ಸಂಗ:—(ಗಾಬರಿಯಾಗಿ) ಸುಬ್ಬುಲಕ್ಷ್ಮಮ್ಮಾ! ಸುಬ್ಬುಲಕ್ಷ್ಮಮ್ಮಾ!!

ಸು. ನ:—ಅವಳನ್ನು ಯಾಕೋ ಕೂಗುತಿಯಾ? ಕೇಳೋ! ಆಮೇಲೆ ಇದೇ ಸೈಟ್‌ನಲ್ಲೇ ಒಂದು ದಿವ್ಯವಾದ ಸಿಮೆಂಟ್ ಕಾಂಕ್ರೀಟ್ ಭವನ—ಅರಮನೆ ಜಿಗಿಜಿಗೀಂತ ಎದ್ದು ನಿಲ್ಲುತ್ತೆ. ಆ ಮನೆ ಗೃಹಪ್ರವೇಶದ ದಿನ

ಪ್ರಥಮ ಪಾದಪೂಜೆ ಯಾರಿಗೆ ಗೊತ್ತೇನೋ? (ಮೆತ್ತಗೆ ಮುಂದೆ ಬಂದು ನಮ್ಮ ಮನೆ ದೇವರು ಸಂಗರಾಮಯ್ಯನಿಗೇ! (ಬಲವಾಗಿ ಬೆನ್ನು ತಟ್ಟುವನು)

ಸಂಗ:—(ಹೆದರಿ ತಪ್ಪಿಸಿಕೊಂಡು ಹೋಗಲು ಯತ್ನಿಸುತ್ತಾ) ಸುಬ್ಬನರಸಿಂ ಹಯ್ಯಾ! (ಅಂಗಲಾಚಿ) ನಾನು ಬರುತೇನಪ್ಪಾ! ಮನೇಲಿ ನನ್ನ ಅಳಿಯ ಬಂದಿದಾನಯ್ಯಾ! ಮತ್ತೆ ಮಧ್ಯಾಹ್ನ ಬಾದು ಬೇಕಾದರೆ ನಿನ್ನ ಕಾಣುತೇನೆ

ಸು. ನ:—(ಹೊರಡಲಿರುವ ಸಂಗರಾಮಯ್ಯನನ್ನ ಕೈಹಿಡಿದು ನಿಲ್ಲಿಸಿ) ಯಾಕೆ ಹೀಗೆ ಹೆದರುತೀಯಾ? ಮಧ್ಯಾಹ್ನ ಬರೋದಿರಲೀ—ಈಗ ಯಾಕೆ ಬಂದೆ ಹೇಳೋ ದೇವರೇ?

ಸಂಗ:—ಸುಮ್ಮನೇ..ಸುಂ..ಸುಂ..ಸುಮ್ಮನೇ ಕಾಣಯ್ಯಾ!

ಸು. ನ:—ಸುಂಸುಮ್ಮನೆ ಯಾರು ಬರುತಾರೋ? ನೀನು ಬಾಡಿಗೆ ವಸೂಲೀಗೆ ಬಂದಿದೀಯಾ (ಹತ್ತಿರ ಬಂದು) ಹೌದೋ ಅಲ್ಲವೋ?

ಸಂಗ:—ಹೌದು. ಹೌದು ಹೌದು.

ಸು. ನ:—(ಭುಜ ತಟ್ಟಿ) ಹಾಗೆ ಹೇಳೋ ದೇವರೇ!..ಸರಿ..ನಿನಗೀಗ ಎಷ್ಟು ಬಾಡಿಗೆ ಕೊಡಬೇಕು?

ಸಂಗ:—ನಾಳೆ ಫಸ್ಟ್‌ಗೆ ಏಳು ತಿಂಗಳಾಗುತ್ತೆ ನೀನು ಬಾಡಿಗೆ ಕೊಟ್ಟು. ಏಳು ತಿಂಗಳಿಗೆ ಪಳಾರಲಿ ನಲವತ್ತೆರಡು ರೂಪಾಯಿ ಕೊಡ ಬೇಕಾಗುತ್ತೆ.

ಸು. ನ:—ಸರೀ. ಈ ದುಡ್ಡಿಗೆ ಬಡ್ಡೀ?

ಸಂಗ:—ಬಡ್ಡಿ ಬೇಡಪ್ಪ. ನಾನೆಲ್ಲೂ ಬಾಡಿಗೆಗೆ ಬಡ್ಡಿ ತಗೊಂಡಿಲ್ಲ ಅಲ್ಲದೆ ಎಷ್ಟೋ ಕಡೆ ಬಾಡಿಗೇನೇ ತಗೊಂಡಿಲ್ಲ.

ಸು. ನ:—ಒಂದು ವೇಳೆ ನಾ ಕೊಟ್ಟರೆ ಬಡ್ಡಿ ಸೇರಿಸಿ ಎಷ್ಟು ಕೊಡ ಬೇಕು?

ಸಂಗ:—ಮೂವತ್ತೈದು ರೂಪಾಯಿ.

ಸು. ನ:—ಅಸಲೇ ನಲವತ್ತೆರಡು ರೂಪಾಯಲ್ಲೋ?

ಸಂಗ:—ಹೌದೂ; ಅದರಲ್ಲಿ ಬಡ್ಡಿ ಏಳು ರೂಪಾಯಿ ವಜಾ ಮಾಡ

ಸು. ನ:—ಏನೋ ಆಸಲಿನಲ್ಲಿ ಬಡ್ಡಿ ವಜಾ ಮಾಡೋದೇ?

ಸಂಗ:—ಅಷ್ಟೇ ಈಗಿನ ಲೇವಾದೇವಿ.

ಸು. ನ:—(ಭುಜದ ಮೇಲೆ ಕೈಹಾಕಿ) ನೋಡು ಸಂಗರಾಮಯ್ಯಾ! ನೀನು ಯಾಕೋ ಹೆದರಿ ಮಾತನಾಡುತಾ ಇದೀ ಅಂತ ಕಾಣಿಸುತ್ತೆ. ಕೇಳೋ! ನಿನ್ನ ಬಾಡಿಗೇ ದುಡ್ಡು ನಲವತ್ತೆರಡು ರೂಪಾಯಿ ಜೊತೆಗೆ ಇನ್ನೊಂದ್ಹು ನೂರು ರೂಪಾಯಿ ಸೇರಿಸಿ ಕೊಡುತೇನೆ....ಆದಿರಲಿ. ಈ ಮನೆ ಸೈಟಿಗೆಷ್ಟು ಕೊಟ್ಟಿದ್ದೆಯೋ ನೀನೂ?

ಸಂಗ:—(ಬೆದರಿ) ಹಿಂದೆ ನಮ್ಮ ತಂದೆ ಕೊಂಡಾಗಿನ ಬೆಲೆ ಕೇಳು ತೀಯಾ? ಇಲ್ಲಾ ಈಗಿನ ಬೆಲೆ ಕೇಳುತೀಯಾ?

ಸು. ನ:—ಎರಡೂ ಹೇಳೋ!

ಸಂಗ:—ನಮ್ಮ ತಂದೆಗೆ ದಿವಾನ್ ಶೇಷಾದ್ರಿ ಐಯರ್ ಆಗ ಬಲವಂತ ಮಾಡಿ ಇಪ್ಪತ್ತೈದು ರೂಪಾಯಿಗೆ ಕೊಡಿಸಿದ್ದರಂತೆ.

ಸು. ನ:—ಈಗಾ?

ಸಂಗ:—ಈಗಾ?....ಈಗಾಂದರೇ....ಇದರ ಪಕ್ಕದ ಸೈಟನ.. ಇದೇ ಅಳತೇದು-ಅರವತ್ತು-ನೂರೆಂಬತ್ತಡಿ ಸೈಟ್ ನ ದೇವನಹಳ್ಳಿ ಅಮಿಲ್ದಾ ರರು ಹೋದ ತಿಂಗಳು ಏಳುನೂರು ರೂಪಾಯಿಗೆ ಕೊಂಡುಕೊಂಡರಲ್ಲ.

ಸು. ನ:—ಆದು ಸರೀ....ಈ ನಿನ್ನ ಮುರುಕಲು ಮನೇಗೆ ಎಷ್ಟು ಖರ್ಚು ಮಾಡಿದೀ?

ಸಂಗ:—ಮನೆ ಕಟ್ಟಿಸುವುದಕ್ಕೆ ಆಗ ಒಂದೂವರೆ ಸಾವಿರ ರೂಪಾಯಿ ಖರ್ಚಾಗಿದ್ದಿತು......ಈಚೆಗೆ ರಿಪೇರಿಗೇನೇ ಎರಡು ಸಾವಿರ ರೂಪಾಯಿ ಖರ್ಚು ಮಾಡಿದೇನೆ ಈ ಇಪ್ಪತ್ತು ವರುಷಗಳಲ್ಲಿ.

ಸು. ನ:—ಭೇಷೋ! ಭೇಷಪ್ಪಾ! ಮನೆ ಕಟ್ಟೋದಕ್ಕೆ ಒಂದೂವರೆ ಸಾವಿರ ರೂಪಾಯಿ ಖರ್ಚಾಯಿತೂ ಅಂದರೆ, ರಿಪೇರೀಗೆ ಎರಡು ಸಾವಿರ ರೂಪಾಯಿ ಖರ್ಚಾಯಿತೇ!!....ನೀನು ಮಾರ್ವಾಡಿ ಮಗನಾಗಿ ಹುಟ್ಟ ಬೇಕಾಗಿತ್ತೋ ಸಂಗರಾಮಯ್ಯಾ! ನಿನ್ನ ಲೆಕ್ಕದ ಪ್ರಕಾರ ಈಗೀ ಮನೆ ಕೆಡವಿಸುವುದಕ್ಕೆ ನನಗೆ ನಾಲ್ಕು ಸಾವಿರ ರೂಪಾಯಿ ಖರ್ಚಾಗುತ್ತೇ!

ಸಂಗ:—ಈಗದರ ಮಾತು ಯಾಕೆ ಸುಬ್ಬುನರಸಿಂಹಯ್ಯಾ! ನೀನು ಸ್ವಲ್ಪ ಶಾಂತವಾದ ಮೇಲೆ ಬರುತೇನೆ. (ಹೊರಡಲಿರುವನು)

ಸು. ನ:—ಶಾಂತವಾಗೋದೇನೋ ಬಂತೂ? ಬಾರೋ ಕೂತುಕೋ!

ಪ್ರಥಮ ಪಾದಪೂಜೆ ಯಾರಿಗೆ ಗೊತ್ತೇನೋ ? (ಮೆತ್ತಗೆ ಮುಂದೆ ಬಂದು) ನಮ್ಮ ಮನೆ ದೇವರು ಸಂಗರಾಮಯ್ಯನಿಗೇ! (ಬಲವಾಗಿ ಬೆನ್ನು ತಟ್ಟುವನು)

ಸಂಗ:—(ಹೆದರಿ ತಪ್ಪಿಸಿಕೊಂಡು ಹೋಗಲು ಯತ್ನಿಸುತ್ತಾ) ಸುಬ್ಬನರಸಿಂಹಯ್ಯಾ! (ಅಂಗಲಾಚಿ) ನಾನು ಬರುತೇನಪ್ಪಾ! ಮನೇಲಿ ನನ್ನ ಅಳಿಯ ಬಂದಿದಾನಯ್ಯಾ! ಮತ್ತೆ ಮಧ್ಯಾಹ್ನ ಬಾದು ಬೇಕಾದರೆ ನಿನ್ನ ಕಾಣುತೇನೆ.

ಸು. ನ:—(ಹೊರಡಲಿರುವ ಸಂಗರಾಮಯ್ಯನನ್ನ ಕೈಹಿಡಿದು ನಿಲ್ಲಿಸಿ) ಯಾಕೆ ಹೀಗೆ ಹೆದರುತೀಯಾ ? ಮಧ್ಯಾಹ್ನ ಬರೋದಿರಲೀ—ಈಗ ಯಾಕೆ ಬಂದೆ ಹೇಳೋ ದೇವರೇ ?

ಸಂಗ:—ಸುಮ್ಮನೇ . . ಸುಂ . . ಸುಂ . . ಸುಮ್ಮನೇ ಕಾಣಯ್ಯಾ !

ಸು. ನ:—ಸುಂಸುಮ್ಮನೆ ಯಾರು ಬರುತಾರೋ ? ನೀನು ಬಾಡಿಗೆ ವಸೂಲೀಗೆ ಬಂದಿದೀಯಾ (ಹತ್ತಿರ ಬಂದು) ಹೌದೋ ಅಲ್ಲವೋ ?

ಸಂಗ:—ಹೌದು. ಹೌದು ಹೌದು.

ಸು. ನ:—(ಭುಜ ತಟ್ಟಿ) ಹಾಗೆ ಹೇಳೋ ದೇವರೇ! . . ಸರಿ . . ನಿನಗೀಗ ಎಷ್ಟು ಬಾಡಿಗೆ ಕೊಡಬೇಕು ?

ಸಂಗ:—ನಾಳೆ ಫಸ್ಟ್‌ಗೆ ಏಳು ತಿಂಗಳಾಗುತ್ತೆ ನೀನು ಬಾಡಿಗೆ ಕೊಟ್ಟು. ಏಳು ತಿಂಗಳಿಗೆ ಆರಾರಲಿ ನಲವತ್ತೆರಡು ರೂಪಾಯಿ ಕೊಡಬೇಕಾಗುತ್ತೆ.

ಸು. ನ:—ಸರೀ. ಈ ದುಡ್ಡಿಗೆ ಬಡ್ಡೀ ?

ಸಂಗ:—ಬಡ್ಡಿ ಬೇಡಪ್ಪ. ನಾನೆಲ್ಲೂ ಬಾಡಿಗೆಗೆ ಬಡ್ಡಿ ತಗೊಂಡಿಲ್ಲ; ಅಲ್ಲದೆ ಎಷ್ಟೋ ಕಡೆ ಬಾಡಿಗೇನೇ ತಗೊಂಡಿಲ್ಲ.

ಸು. ನ:—ಒಂದು ವೇಳೆ ನಾ ಕೊಟ್ಟರೆ ಬಡ್ಡಿ ಸೇರಿಸಿ ಎಷ್ಟು ಕೊಡಬೇಕು ?

ಸಂಗ:—ಮೂವತ್ತೈದು ರೂಪಾಯಿ.

ಸು. ನ:—ಅಸಲೇ ನಲವತ್ತೆರಡು ರೂಪಾಯಲ್ಲೋ ?

ಸಂಗ:—ಹೌದೂ; ಅದರಲ್ಲಿ ಬಡ್ಡಿ ಏಳು ರೂಪಾಯಿ ವಜಾ ಮಾಡು.

ಸು. ನ:—ಏನೋ ಅಸಲಿನಲ್ಲಿ ಬಡ್ಡಿ ವಜಾ ಮಾಡೋದೇ ?

ಸಂಗ:—ಅಷ್ಟೇ ಈಗಿನ ಲೇವಾದೇವಿ.

ಸು. ನ:—(ಭುಜದ ಮೇಲೆ ಕೈಹಾಕಿ) ನೋಡು ಸಂಗರಾಮಯ್ಯಾ! ನೀನು ಯಾಕೋ ಹೆದರಿ ಮಾತನಾಡುತಾ ಇದೀ ಅಂತ ಕಾಣಿಸುತ್ತೆ. ಕೇಳೋ! ನಿನ್ನ ಬಾಡಿಗೇ ದುಡ್ಡು ನಲವತ್ತೆರಡು ರೂಪಾಯಿ ಜೊತೆಗೆ ಇನ್ನೊಂದ್ನು ನೂರು ರೂಪಾಯಿ ಸೇರಿಸಿ ಕೊಡುತೇನೆ....ಆದಿರಲಿ. ಈ ಮನೆ ಸೈಟಿಗೆಷ್ಟು ಕೊಟ್ಟಿದ್ದೆಯೋ ನೀನೂ?

ಸಂಗ:—(ಬೆದರಿ) ಹಿಂದೆ ನಮ್ಮ ತಂದೆ ಕೊಂಡಾಗಿನ ಬೆಲೆ ಕೇಳು ತೀಯಾ? ಇಲ್ಲಾ ಈಗಿನ ಬೆಲೆ ಕೇಳುತೀಯಾ?

ಸು. ನ:—ಎರಡೂ ಹೇಳೋ!

ಸಂಗ:—ನಮ್ಮ ತಂದೆಗೆ ದಿವಾನ್ ಶೇಷಾದ್ರಿ ಐಯರ್ ಆಗ ಬಲವಂತ ಮಾಡಿ ಇಪ್ಪತ್ತೈದು ರೂಪಾಯಿಗೆ ಕೊಡಿಸಿದ್ದರಂತೆ.

ಸು. ನ:—ಈಗಾ?

ಸಂಗ:—ಈಗಾ?....ಈಗಾಂದರೇ....ಇದರ ಪಕ್ಕದ ಸೈಟನ.. ಇದೇ ಆಳತೇದು–ಅರವತ್ತು-ನೂರೆಂಬತ್ತಡಿ ಸೈಟ್‌ನ ದೇವನಹಳ್ಳಿ ಅಮಿಲ್ದಾ ರರು ಹೋದ ತಿಂಗಳು ಏಳುನೂರು ರೂಪಾಯಿಗೆ ಕೊಂಡುಕೊಂಡರಲ್ಲ.

ಸು. ನ:—ಅದು ಸರೀ....ಈ ನಿನ್ನ ಮುರುಕಲು ಮನೇಗೆ ಎಷ್ಟು ಖರ್ಚು ಮಾಡಿದೀ?

ಸಂಗ:—ಮನೆ ಕಟ್ಟಿಸುವುದಕ್ಕೆ ಆಗ ಒಂದೂವರೆ ಸಾವಿರ ರೂಪಾಯಿ ಖರ್ಚಾಗಿದ್ದಿತು......ಈಚೆಗೆ ರಿಪೇರಿಗೇನೇ ಎರಡು ಸಾವಿರ ರೂಪಾಯಿ ಖರ್ಚು ಮಾಡಿದೇನೆ ಈ ಇಪ್ಪತ್ತು ವರುಷಗಳಲ್ಲಿ.

ಸು. ನ:—ಭೇಷೋ! ಭೇಷಪ್ಪಾ! ಮನೆ ಕಟ್ಟೋದಕ್ಕೆ ಒಂದೂವರೆ ಸಾವಿರ ರೂಪಾಯಿ ಖರ್ಚಾಯಿತೂ ಅಂದರೆ, ರಿಪೇರೀಗೆ ಎರಡು ಸಾವಿರ ರೂಪಾಯಿ ಖರ್ಚಾಯಿತೇ!!....ನೀನು ಮಾರ್ವಾಡಿ ಮಗನಾಗಿ ಹುಟ್ಟ ಬೇಕಾಗಿತ್ತೋ ಸಂಗರಾಮಯ್ಯಾ! ನಿನ್ನ ಲೆಕ್ಕದ ಪ್ರಕಾರ ಈಗೀ ಮನೆ ಕೆಡವಿಸುವುದಕ್ಕೆ ನನಗೆ ನಾಲ್ಕು ಸಾವಿರ ರೂಪಾಯಿ ಖರ್ಚಾಗುತ್ತೇ!

ಸಂಗ:—ಈಗದರ ಮಾತು ಯಾಕೆ ಸುಬ್ಬುನರಸಿಂಹಯ್ಯಾ! ನೀನು ಸ್ವಲ್ಪ ಶಾಂತವಾದ ಮೇಲೆ ಬರುತೇನೆ. (ಹೊರಡಲಿರುವನು)

ಸು. ನ:—ಶಾಂತವಾಗೋದೇನೋ ಬಂತೂ? ಬಾರೋ ಕೂತುಕೋ!

ಸಂಗ:—(ಸಿಟ್ಟಿನಿಂದ ಆದದ್ದಾಗಲೆಂದು ಧೈರ್ಯ ತಂದುಕೊಂಡು) ಏನೋ ಈ ಹೊತ್ತು ನಿನ್ನ ಮಾತು-ಕಥೆ ವಿಚಿತ್ರವಾಗಿದೆ.

ಸು. ನ:—ವಿಚಿತ್ರವಾಗಬೇಕಾದ್ದೇ ಕಾಣೋ! ಇನ್ನುಮೇಲೆ ನೀನು ನನ್ನ ದಾರೀಲಿ ನಿಲ್ಲಿಸಿ, ಮುಖ-ಮುರಿಯೋದು ಕನಸಾಯಿತೂ ಅಂದ ಮೇಲೆ ವಿಚಿತ್ರ ಅಲ್ಲವೇನೋ? ನೀನು ಕೂತು ನೋಡುತಿರೋ ಹಾಗೇನೇ ನಿನ್ನೀ ಮನೆ ಹಾರಿಹೋಗಿ, ಇದೇ ಸ್ಥಳದಲ್ಲೇ ಒಂದು ಅರಮನೆ ಎದ್ದು, ಅದರ ಮುಂದೆ ಬಾಳೆಕಂಬಗಳು, ತಳಿರು-ತೋರಣಗಳು, ಧ್ವಜಪತಾಕೆಗಳು, ಲಕ್ಷ ಸಾಲುದೀಪಗಳು ಇವುಗಳಿಂದ ಶೃಂಗಾರವಾದ ಚಪ್ಪರದಲ್ಲಿ, ಮಂಗಳವಾದ್ಯಗಳು ಮೊಳಗುತಾ, ಭೇರಿ, ಕಹಳೆ, ತುತ್ತೂರಿಗಳು ಮೊಳಗುತಿರುವಾಗ, ನಮ್ಮ ಸುಬ್ಬುಕೃಷ್ಣಸ್ವಾಮಿಯ ಮದುವೇ ವಿಜೃಂಭಣೆಯಿಂದ ಜರುಗುತಿದ್ದರೇ..ಅದನ್ನ ನೋಡೋ ದೇವತೆಗಳಿಗೆ ಕೂಡಾ ವಿಚಿತ್ರವಾಗೇ ಇರುತ್ತೆ, ಅಲ್ಲವೇನೋ!!

ಸಂಗ:—ನಿನಗೆ ಬುದ್ಧಿ ಸ್ವಲ್ಪ....

ಸು. ನ:—ಘನವಾಗಿದೆಯೋ! ನಿನ್ನ ಬುದ್ಧೀಗೆ ಸ್ವಲ್ಪ ರಿಪೇರಿ ಆಗಬೇಕೋ....ಇಲ್ಲಿ ನೋಡೋ ಇದನ್ನ....(ಟೆಲಿಗ್ರಾಂ ತೋರಿಸುವನು)

ಸಂಗ:—(ಅರಳಿದ ಕಂಗಳಿಂದ ದಿಟ್ಟಿಸಿ ನೋಡುತ್ತಾ) ಒಂದು ಲಕ್ಷ ರೂಪಾಯೀ!....ನಿನ್ನ ಹೆಸರಿಗೇ!!....ಯಾವುದಿದು?

ಸು. ನ:—ನನ್ನ ಹೆಂಡತೀದೂ.

ಸಂಗ:—ಹೆಂಡತೀದೂ?

ಸು. ನ:—ಹೌದೋ! ಅವಳ ಹೆಸರಿನ ಲಾಟರೀ ಟಿಕೆಟ್ಟಿಗೆ ಬಂದ ಬಹುಮಾನವೋ.

ಸಂಗ:—(ಹಿಡಿಸಲಾರದ ಸಂತೋಷದಿಂದ) ಸುಬ್ಬುನರಸಿಂಹಯ್ಯಾ! (ಅಪ್ಪುವನು) ಸುಬ್ಬುನರಸಿಂಹಯ್ಯಾ!!....ನನ್ನಪ್ಪಾ!!......ದೇವರು ನಿನ್ನ ಕಾಪಾಡಲಪ್ಪಾ!

ಸು. ನ:—(ಬಿಡಿಸಿಕೊಳ್ಳುತ್ತಾ) ಕಾಪಾಡಿದನಲ್ಲೋ! ಇನ್ನೂ ಏನು ಕಾಪಾಡಬೇಕೋ ಅವನೂ ಪಾಪ?

ಸಂಗ:—ಸುಬ್ಬುಲಕ್ಷ್ಮಮ್ಮನಿಗೆ ತೋರಿಸಿದೆಯೋ? ಇನ್ನೂ ಇಲ್ಲವೋ?

ಸು. ನ:—ನಿನಗಿಂತ ಮೊದಲು ಅವಳೇ ಕಣೋ ನೋಡಿದವಳು! ಅವಳದೇ ಅಲ್ಲವೇನೋ ಈ ಸೌಭಾಗ್ಯವೆಲ್ಲಾ?..ಈಗ ಹೇಳು ಈ ಮನೇಗೆ ನಾನೆಷ್ಟು ಕೊಡಬೇಕೂಂತ!

ಸಂಗ:—ನೀನು ಕೊಂಡುಕೊಳ್ಳುತೀಯಾ?

ಸು. ನ:—ಸುಮ್ಮ ಸುಮ್ಮನೆ ಕೇಳುತೇನೆಯೇನೋ! ಕೇಳೋ! ಕೊಳ್ಳಬೇಕೂಂದರೆ ಬೇರೆ ಮನೆ ಸಿಗುತ್ತೆ. ಆದರೆ ನನ್ನ ಭಾಗ್ಯಲಕ್ಷ್ಮಿ ಒಲಿದು ಪ್ರತ್ಯಕ್ಷವಾದ ಸ್ಥಳ ಇದು. ಇದನ್ನ ಬಿಡೋದಕ್ಕೆ ಇಷ್ಟವಿಲ್ಲ ಕಾಣೋ!.. ಹೇಳೋ! ಒಂದೇ ಮಾತು; ಚೌಕಸಿ ಬೇಡ.

ಸಂಗ:—ನೆನ್ನೆ ಬಂದ ಗಿರಾಕಿ ಮೂರು ಸಾವಿರಕ್ಕೆ ಕೇಳಿದನಪ್ಪ.

ಸು. ನ:—ಸರೀ ಕಾಣೋ. ನಾನು ಮೂರು ಸಾವಿರದ ಒಂದು ರೂಪಾಯಿ ಕೊಡುತೇನೆ. ಸರಿಯೇನೋ.

ಸಂಗ—ಹುಂ.

ಸು. ನ:—ಹೋಗು. ಬೇಗ ಹೋಗಿ ಆ ಪುಟ್ಟಣ್ಣನ ಹೋಟಲ್ ಮಹಡೀ ಮೇಲೆ ಗೋವಿಂದಾಚಾರಿ ಇದಾನೆ ಸ್ಟಾಂಪವೆಂಡರು. ಅವನ ಹತ್ತಿರ ಹೋಗಿ ಮೂರು ಸಾವಿರದೊಂದು ರೂಪಾಯಿ ಲೇವಾದೇವೀಗೆ ಬೇಕಾಗೋ ಛಾಪಾ ಕಾಗದ ತಗೊಂಡು ಸಾಕ್ಷೀಗೆ ಆ ಪುಟ್ಟಣ್ಣನ್ನೂ, ಶಾಸ್ತ್ರೀನೂ ಕರೆದುಕೊಂಡು ಜಾಗ್ರತೆ ಬಂದುಬಿಡು. ಹೋಗು.

ಸಂಗ:—ಆಮೇಲೆ ಆ ಬಾಡಿಗೇ ನಲವತ್ತೆರಡು ರೂಪಾಯಿ ಇದೆಯಲ್ಲಾ....ಅದರಲ್ಲಿ....

ಸು. ನ:—ಅದನ್ನೂ ಸೇರಿಸಿ....

ಸಂಗ:—ಹಾಗಲ್ಲ ಸುಬ್ಬುನರಸಿಂಹಯ್ಯಾ! ಆ ರೂಪಾಯಿ ನಿನ್ನಲ್ಲೇ ಇರಲಿ. ಬರೋ ಸಲಕ್ಕೆ ಲಾಟರೀಲಿ ಅಷ್ಟು ದುಡ್ಡಿಗೂ ಟಿಕೆಟ್ ತಗೊಂಡು ಬಿಡು....ನನಗೋಸ್ಕರ....ಸುಬ್ಬುಲಕ್ಷ್ಮಮ್ಮನ ಹೆಸರಿನಲ್ಲೇ.....

ಸು. ನ:—ಬರೋ ಸಲಕ್ಕೇನೇನೋ?

ಸಂಗ:—ಯಾವಾಗಲಾದರೂ ಸರಿಯೇ. ನನ್ನ ಜಾತಕವನ್ನ ನಿನ್ನ ಕೈಗೇ ತಂದುಕೊಡುತೇನೆ. ನೀನು ಎಲ್ಲಾ ವಿಚಾರಿಸಿ..ಗ್ರಹಬಲ ಚೆನ್ನಾಗಿ ಇರೋವಾಗ ಹಾಕಿಸಿಬಿಟ್ಟರೆ ಸರಿ.

ಸು. ನ:—ಅಲ್ಲವ್ರೋ ! ಆಹೊತ್ತು ನನ್ನ ಡಬ್ಬಲ್ ಟಿಕೆಟ್‌ನಲ್ಲಿ ಅರ್ಧ ತಗೊಳ್ಳ್ಯೋ ಅಂದರೇ....ಹಹ್ಹಹ್ಹಹ್ಹಾ ! ಹ್ಹಹ್ಹಹಾ ! ಹಹ್ಹಹ್ಹಹ್ಹಾ !!! (ನಗುವನು)

ಸಂಗ:—(ತಲೆಯನ್ನು ಕೊಡವಿ ಹೊರಡುತ್ತಾ) ಅದನ್ನೆಲ್ಲಾ ಜ್ಞಾಪಿಸಬೇಡ ಸುಬ್ಬುನರಸಿಂಹಯ್ಯಾ!....ನಾನು ಹೋಗಿ ಬೇಗ ಬರುತ್ತೇನೆ.

ಸು. ನ:—ಹೋಗಿ ಬಾ ನನ್ನ ಮನೆ ದೇವರೇ !

(ಸಂಗರಾಮಯ್ಯನು ಕತ್ತನ್ನು ತಗ್ಗಿಸಿ ಹೊರಟು ಹೋಗುವನು)

ಲೇ ! ಸುಬಾಣೀ !! ಬಂಗಾರೀ ! ಸುಬ್ಬೂ !..ಭಾಗ್ಯಾ ! ಸೌಭಾಗ್ಯಾ !!!

ಸು. ಲಕ್ಷ್ಮಿ:—(ಈಚೆಗೆ ಬಂದು) ಏನು ಕೂಗಿದಿರಿ ?

ಸು. ನ:—ಒಳಗೆ....ಮುರುಕಲು ಮನೆಯಲ್ಲಿ ಸೇರಿಕೊಂಡು ಏನು ಮಾಡುತಿದೀಯೇ ?

ಸು. ಲಕ್ಷ್ಮಿ:—ಜೆಟ್ಟಿ ತಿರುವಿದ್ದ ಒರಳು ತೊಳದೆ. ಒರಸೋದಕ್ಕೆ ಬಟ್ಟೆ ಚೂರಿಗಾಗಿ ಹುಡುಕುತಾ ಇದ್ದೆ.

ಸು. ನ:—(ರುಮಾಲನ್ನು ತೆಗೆದು ಎಸೆದು) ಅದಕ್ಕೆ ಯಾಕೇ ಯೋಚನೇ ? ತಗೊಳ್ಳೇ ! ಒರಸಿ ಹಾಕೇ.

ಸು. ಲಕ್ಷ್ಮಿ:—ಉಂಟೇಂದ್ರೇ ?

ಸು. ನ:—ಉಂಟು ಕಾಣೇ ! ಉಂಟೇ ! ಕೂತುಕೋ ಬಾ ! ಒರಳನಾ ನುನೇ ಕಟ್ಟ್ಯೋದಕ್ಕೆ ಬರುವ ಮೇಸ್ತ್ರೀ ಕೈಲೇ ಒರಸಿಸಿದರಾಯಿತು.... ಬಾರೇ ಇಲ್ಲಿ....ಕೂತುಕೋ ಬಾರೇ....

(ಸುಬ್ಬುಲಕ್ಷ್ಮಮ್ಮನು ಬಂದು ಕೂಡುವಳು)

ನಮ್ಮ ಮಗೂ ಮದುವೇಲಿ ಸಂಗೀತ ಕಛೇರಿಗೆ ಯಾರನ್ನ ಕರೆಸೋದೇ ?

ಸು. ಲಕ್ಷ್ಮಿ:—ಪಟ್ಟಮ್ಮಾಳ್‌ನೋ, ಎಂ. ಎಸ್. ಸುಬ್ಬುಲಕ್ಷ್ಮೀನೋ ಕರೆಸೋದು.

ಸು. ನ:—ನನಗನ್ನಿಸೋದೂ......ನಿನ್ನ ಕೈಲೇ ಕಛೇರಿ ಮಾಡಿಸಿ ಬಿಡೋದೂಂತ. ನೀನು ಎಂ. ಎಸ್. ಸುಬ್ಬುಲಕ್ಷ್ಮಿ ಆಗದಿದ್ದರೂ, ಎಸ್. ಎಸ್. ಸುಬ್ಬುಲಕ್ಷ್ಮೀ ಕಾಣೇ !

ಸು. ಲಕ್ಷ್ಮಿ:—ಅಂದರೇ ?

ಸು. ನ:—ಅಂದರೆ, ಶ್ರೀಮಂತ್ ಸುಬ್ಬುನರಸಿಂಹಯ್ಯಾ ಸುಬ್ಬುಲಕ್ಷ್ಮೀ ಅಂತಾ!

ಸು. ಲಕ್ಷ:—ನೀವು ಹಾಸ್ಯಮಾಡುತೀರಿ.

ಸು. ನ:—ಹಾಸ್ಯಾಂದರೆ ಎಂಥಾದ್ದೇ? ಎಲ್ಲೀ....ಮಗೂ ಟ್ಯಾಕ್ಸಿ ತರುವ ಹೊತ್ತಿಗೆ ಒಂದು ಹಾಡು ಹೇಳು....ಹಾಗೇ ಮಗೂ ಮದುವೇ ಕಛೇರಿ ಹೇಗಿರುತ್ತೇಂತ ಕಣ್ಮುಚ್ಚಿಕೊಂಡು ನೋಡುತೇನೆ.

ಸು. ಲಕ್ಷ:—ನಾನು ಈಗ ಹಾಡೋದೂಂದ್ರೇ ಏನೂಂದ್ರೇ......

ಸು. ನ:—ಹಾಡೋದೂಂತಾಂದ್ರೇ....ಹಾಡೇ! ಹಾಡೇ!

ಸು. ಲಕ್ಷ:—ನಾನು ಹಾಡಿ ಎಷ್ಟು ವರುಷಗಳಾಗಿ ಹೋಯಿತೂ.. ಏನು ಕಥೆ!!

ಸು. ನ:—ಎಂದೂ ಹಾಡದೇನೇ ಇದ್ದವನು ಈ ವಯಸ್ಸಿನಲ್ಲಿ ನನಗೇನೇ ಹಾಡಬೇಕೂ ಅನ್ನಿಸಿಬಿಟ್ಟಿದೇ..ಆದರೆ ಯಾರೂ ಕೇಳೊಲ್ಲ..ನಿನಗೇನೇ.. ಹಾಡೇ! ದಿವ್ಯವಾಗಿರುತ್ತೆ ಹಾಡೇ ಬಂಗಾರೀ !

ಸು. ಲಕ್ಷ:—(ಗಂಟಲನ್ನು ಸರಿಮಾಡಿಕೊಂಡು)

ರಾಗ—ಕಾನಡಾ

ನಾ ನಿನ್ನ ಧ್ಯಾನದೊಳಿರಲು।
ಮಿಕ್ಕ ಹೀನಮಾನವರಿಂದಲೇನಾಗುವುದು॥
ಧಾಳೀಲಿ ಕುದುರೆ ವೈಯಾರದಿ ತಿರುಗುತ।
ಧೂಳನೆರಚಲು ಅದು ರವಿಗೆ ತಾಕುವುದೇನೋ॥

ನಾ ನಿನ್ನ ಧ್ಯಾನದೊಳಿರಲು..........

[ತೆರೆಯು ನಿಧಾನವಾಗಿ ಬೀಳುವುದು.]

—



'ಸಾಲದ ಕೈ'ಯಲ್ಲಿ ಪಾತ್ರವಹಿಸಿದ ಗದುಗಿನ ಕಟ್ಟಿ ಮತ್ತು ಗೆಳೆಯರು

ಸಾಲದ ಕೈ

"ಒಬ್ಬ ಸಾಲಗಾರನು
ತನಗೆ ಸಾಲ ಕೊಟ್ಟವರನ್ನು ತಪ್ಪಿಸಿ
ಸಂಸಾರ ಮಾಡುವ ರೀತಿ"

೩-೫-೧೯೪೭

ವಿಷಯ ಕೊಟ್ಟದ್ದು . . ಸಂಜೆ ಐದು ಗಂಟೆಗೆ
ಅಭಿನಯ ಪ್ರಾರಂಭ . . ರಾತ್ರಿ ಒಂಬತ್ತು ಗಂಟೆಗೆ
ಅಭಿನಯಿಸಿದ ವೇಳೆ . . ೨೦ ನಿಮಿಷ ಮಾತ್ರ

ಪಾತ್ರಗಳು

●

ಹನಮಂತರಾಯ . . . . . ಸಾಲಗಾರ

ಕೃಷ್ಣಕ್ಕ . . ಸಾಲಗಾರನ ತಾಯಿ (ವಿಧವೆ)

ಸಾವಿತ್ರಿ . . . . . ಸಾಲಗಾರನ ಹೆಂಡತಿ

ರಾಮು . ಈ ದಂಪತಿಗಳ ಏಕಮಾತ್ರ ಪುತ್ರ

ಇಮಾನಚಂದ . . ಸಾಹುಕಾರ ಮಾರವಾಡಿ

ಬಸಪ್ಪಶೆಟ್ಟಿ . . ಕಿರಾಣಿ ಅಂಗಡಿ ಮಾಲಕ

ಅಭಿನಯಿಸಿದವರು:

ಗದುಗಿನ "ಕಟ್ಟಿ ಮತ್ತು ಗೆಳೆಯರು"

ಪಾತ್ರವಹಿಸಿದವರು

●

ಹನಮಂತರಾಯ . . ಶ್ರೀ. ಎಚ್. ಕೆ. ಕಟ್ಟಿ

ಕೃಷ್ಣಕ್ಕ . . . ಶ್ರೀ. ಎಂ. ಆರ್. ಜೋಶಿ

ಸಾವಿತ್ರಿ . . . . ಶ್ರೀ. ಎ. ಎಂ. ಘುಳಿಗಿ

ರಾಮು . . . . ಕಟ್ಟಿ ಮುದ್ದು

ಇಮಾನಚಂದ . ಶ್ರೀ. ಜಿ. ವ್ಹಿ. ಹಿರೇಮಠ

ಬಸಪ್ಪಶೆಟ್ಟಿ . ಶ್ರೀ. ಜಿ. ವ್ಹಿ. ಪುರುಷಪ್ಪನವರ

ಪ್ರವೇಶ

[ಹನಮಂತರಾಯನ ಬಡತನ ತೋರಿಸುವ ಸಾಮಾನ್ಯವಾದ ಒಂದು ಮನೆ. ಸಾವಿತ್ರಿಯು ತನ್ನ ಹತ್ತು ವರುಷದ ಮಗು, ರಾಮುವಿನ ಹುಟ್ಟಿದ ಹಬ್ಬ ಮಾಡಬೇಕೆಂಬ ಯೋಚನೆಯಲ್ಲಿ ಕುಳಿತಿರುವಳು]

ಸಾವಿತ್ರಿ:—ಮನಿಯೊಳಗ ಬ್ಯಾರೆ ಏನೇನೂ ಇಲ್ಲ. ಇವತ್ತ ನೋಡಿದರ ಹುಡುಗನ ಹುಟ್ಟಿದ ಹಬ್ಬ! ಅವರು ನಿನ್ನೆ ರಾತ್ರೀನs ಹೊರಗ ಹೋದವರು ಇನ್ನೂತನಕ ಬರಲಿಲ್ಲ! ಹುಡುಗ್ಗ ಹಾಕ್ಕೊಳ್ಳಿಕ್ಕೆ ಒಂದ ಛಂದನ್ನ ಟೊಪ್ಪಿಗಿ ಇಲ್ಲಾ, ಅಂಗಿ ಇಲ್ಲಾ! ನಮ್ಮ ಮನಿ ಅಂದರ ಜಾಂಬ ಬಿದ್ದ ಊರು ಆಧಾಂಗ ಆಗೇದ. ಅತ್ತೆಯವರಿಗಂತೂ ನಮ್ಮ ಮನಿ ಬಗ್ಗೆ ಸ್ವಲ್ಪೂ ಕಾಳಜಿ ಇಲ್ಲಾ. ಎಲ್ಲಾ ನನಗs ಹತ್ತೇದ.

ಕೃಷ್ಟಕ್ಕ:—(ವಟಗುಡುತ್ತ) ಏನs! ಏನ ಅದು ನಿನಗ ಹತ್ತಿರೋದು? ದೆವ್ವನ್ಹಾಂಗ ಈ ಮನಿ ನಡಿಸಿಕೊಂಡು ಹೋಗೋ ಯಜಮಾನತಿ ನಾನು ಇರಲಿಕ್ಕೇ ಪ್ರಾರಂಭಾತಲ್ಲs ನಿನ್ನ ಒದರಾಟ. ನಾ ಇದ್ದರs ಇಷ್ಟ. ಇಲ್ಲ ದಿದ್ದರ ಏನು ಎಲ್ಲೆ ಹೊಲಗೇರಿ ಮಾದಿಗ್ಗೇರಿ ಒಂದ ಮಾಡತಿದ್ರೇನೋ ಅಂತೀನಿ!

ಸಾವಿತ್ರಿ:—ನೀವು ಇನ್ನೂ ತನಕ ಇದ್ದೀರಂತsನs ಒದರ್ಯಾಡೋದು, ಬಡಿದಾಡೋದು. ನೀವು ಇಲ್ಲದ್ಹೊಂದು ಅವರೆದುರಿಗೆ, 'ನಿನ್ನ ಹೇಣ್ತಿ ಹಾಂಗಿದ್ದಾಳ, ಹೀಂಗ ಮಾಡ್ತಾಳ' ಅಂತ ಸುಳ್ಳ ಸುಳ್ಳs ಏನಾದರೂ ಹೇಳೋದು. ಅವರು ನಮ್ಮ ಮ್ಯಾಲೆ ಹರಿಹಾಯೋದು. ಅಲ್ಲಾs ನಾನು 'ಇವತ್ತ ಹುಡುಗನ ಹುಟ್ಟಿದ ಹಬ್ಬ. ಅವರು ಇನ್ನೂ ತನಕ ಬರಲಿಲ್ಲ. ಇನ್ನ ಅವರು ಬಂದು ಸಾಮಾನಾ ಯಾವಾಗ ತರಬೇಕು? ನಾನು ಅಡಿಗಿ ಯಾನಾಗ ಮಾಡಬೇಕು!' ಅಂತ ಯೋಚನೆ ಮಾಡತಿದ್ದೆ. ಅದಕ್ಕ ನೀವ್ಯಾಕ ಇಷ್ಟ ಸಿಟ್ಟಿಗೇಳತೀರಿ?

ಕೃಷ್ಣಕ್ಕ:—ಸಿಟ್ಟಿಗೇಳದಿದ್ದರ ಹ್ಯಾಂಗ ಮತ್ತs? ನಿನ್ನ ಮಗಾ ಏನು ದೊಡ್ಡ ರಾಜಕುಮಾರನs ಹಬ್ಬ ಮಾಡಿಸಿಕೊಳ್ಳಲಿಕ್ಕೆ? ಏನೋ ಮನಿಯೊಳಗ ಅಷ್ಟು ಪಾಯಸಾ ಮಾಡಿ ಇಲ್ಲೀ ನಮ್ಮ ಟೇಶನ್ನದ ಹಣಮಪ್ಪಗ ಒಂದು ಕಾಯಿ ಒಡಿಸಿಕೊಂಡು ಬಂದರಾತು.

ಸಾವಿತ್ರಿ:—ನೀವ ಹೇಳಿಧಾಂಗ ಮಾಡಿದ್ರ ಮಗ್ಗಲಮನಿ ಪುಟ್ಟಕ್ಕಾವರು ನೋಡಿ ನಕ್ಕಾರು ನನ್ನ. ಯಾಕ? ಅವರು ತಂದ ಹಾಕಲಿಕ್ಕೆ ಬೇಕಾಧಾಂಗ ಘಟ್ಟಿ ಇದ್ದಾರ. ಇರೊಂವ ಒಬ್ಬ ಮಗ. ಅದೂ ವರ್ಷಕ್ಕೊಮ್ಮೆ ಮಾಡೋ ಹಬ್ಬ. ನಾ ಹಬ್ಬ ಮಾಡೇ ಬಿಡುವಾಕಿ. ಇಂಥಾ ಕೆಲಸಕ್ಕ ಸಾಲ ಆದರೂ ಅಡ್ಡಿ ಇಲ್ಲಾ.

ಕೃಷ್ಣಕ್ಕ:—ಇಷ್ಟ ಸಾಲ ಆದರೂ ಸಾಕಾಗಲಿಲ್ಲ ನಿನಗಿನ್ನೂ? ನನಗ ಏನು? ಮನಿಯೊಳಗ ಥಣ್ಣಗ ಕೂಳು ಕೆಚ್ಚತೀದಿ, ಅದು ಮಾಡಸ್ತsದ ನಿನಗ. ನಮ್ಮ ಹಣಮು ಆಗದs ಮತ್ತೊಬ್ಬರ್‍ಯಾರಾದರೂ ಆಗಿದ್ರ ಭಾವಿ ಹಾರಿಕೊಂಬೋ ಆಟ ಎಲ್ಲಾಲ್ಯದೂ. ಆ ಯೇನೋ ಪಾಕಿಸ್ತಾನಾ ಬೇಡೋ ಆ ಜಿನ್ನಾ ಸುದ್ಧಾ ನಿನ್ನಷ್ಟು ಹಟಮಾರಿ ಇರಲಿಕ್ಕಿಲ್ಲವ್ವ.

ಸಾವಿತ್ರಿ:—ನಾ ಹಟಾ ಮಾಡೂವಾಕೀನs. ಅವರ ಎಲ್ಲಾ ಸಾಲಾನೂ ಹುಡುಗನ ಹಬ್ಬಕs ಆಗೆದೇನು? ನೀವು ಇದರೊಳಗೇನು ಮಧ್ಯಸ್ತಿಕೆ ಮಾಡಲಿಕ್ಕೆ ಬರಬ್ಯಾಡ್ರಿ. ನನ್ನ ಮನಸ್ಸಿಗೆ ಬಂಧ್ಹಾಂಗ ನಾ ಮಾಡತೀನಿ.

ರಾಮು:—(ಓಡುತ್ತ ತಾಯಿಯ ಹತ್ತರ ಬಂದು) ಅವ್ವಾ, ಗೋಪ್ಯಾಗs, ದತ್ತ್ಯಾಗs ಊಟಕ್ಕ ಹೇಳಿ ಬಂದೀನಿ. ಮತ್ತs ಇವತ್ತ ನನ್ನ ಹುಟ್ಟಿದ ಹಬ್ಬ ಅಲ್ಲs? ಅವ್ವಾ, ನನಗ ಜರತಾರಿ ಟೊಪಿಗಿ, ಅಂಗಿ, ಬೇಕು ನೋಡು. ಅಪ್ಪ ಎಲ್ಲೆ ಹೋಗ್ಯಾನವ್ವ?

ಕೃಷ್ಣಕ್ಕ:—ನಿಮ್ಮಪ್ಪs? ಹೋಗ್ಯಾನಲ್ಲೆ ಉರುಲು ಹಾಕ್ಕೊಳ್ಳಿಕ್ಕೆ. ಜರದ ಟೊಪಿಗಿ ಅಂತ! ಹೊಸಾ ಅಂಗಿ ಅಂತ! ಮೈಸೂರು ಮಾರಾಜಾ-ಮಾಡತಿರಲಿಕ್ಕಿಲ್ಲಪ್ಪ ನಿನ್ನಷ್ಟು ಡೌಲು. ಹುಚ್ಚಮುಂಡೇಗಂಡ! (ರಾಮುವಿಗೆ ಒಂದೇಟು ಹೊಡೆಯುವಳು)

ಸಾವಿತ್ರಿ:—ಥೂ! ಹಬ್ಬದ ದಿವಸ ಯಾಕ ಕಣ್ಣೀರ ತಗೀಲಿಕ್ಕೆ ಹಚ್ಚ

ತೀರಿ ಹುಡುಗನ್ನ. (ರಾಮುವಿಗೆ ಸಮಾಧಾನಪಡಿಸುತ್ತ) ಅಳಬ್ಯಾಡ ಬಿಡು ರಾಮು. ಅವರು ಈಗ ಬರತಾರ, ನಾ ತರಿಸಿಕೊಡತೀನಿ.

ಕೃಷ್ಟಕ್ಕ:—ನಮ್ಮ ಹಣಮ್ಯಾ ಒಬ್ಬಾಂವಾ ಮಂಗ್ಯಾ ಆಧಾಂಗ ಆಗ್ಯಾನ ನಿನ್ನ ಕೈಯೊಳಗ. ನಮ್ಮ ಹಿರಿಯರ ಮಾತಂತೂ ಲಕ್ಷ್ಯದೊಳಗs ಇಲ್ಲ ನಿನಗ. ಅಂದಮ್ಯಾಲೆ ನನಗ್ಯಾತಕ್ಕ ಬೇಕು ಎಲ್ಲಾ ರಗಳಿ? ಹಾಳಾಗಿ ಹೋಗರಿ ಎಲ್ಲಾರು. (ಒಳಗೆ ಹೋಗುವಳು)

[ಹನಮಂತರಾಯನು ಪ್ರವೇಶಿಸುವನು]

ಹನಮಂತ:—ಯಾಕೋ ರಾಮು, ಯಾಕ ಅಳತೀದಿ? ಮತ್ತೇನಾತು ನಿನಗ?

ಸಾವಿತ್ರಿ:—ಅಳದೇನು ಮಾಡ್ಯಾನು ಮತ್ತ? ಮನಿಯೊಳಗ ಹುಡುಗನ ಹುಟ್ಟಿದ ಹಬ್ಬ ಇದ್ದದ್ದು ಸುದ್ಧಾ ಖಬರ ಇರೋ ಹಾಂಗಿಲ್ಲ ನಿಮಗ. ಅತ್ತೀಯವರು ನೋಡಿದರ ಹುಡುಗನ್ನ ಹಾಕ್ಕೊಂಡು ಧಬಧಬ ಬಡದ್ರು.

ಹನಮಂತ:—ಹೋಗಲಿ ಬಿಡs, ಮುಂದಕಿ ಆದು. ಹಂಗs ಒದರ್‍ಯಾಡೋದs. ಆಕಿ ಮಾತಿಗೆ ಅಷ್ಟ್ಯಾಕ ಲಕ್ಷ್ಯಕೊಡತೀದಿ? ನಿನಗೇನೇನು ಸಾಮಾನು ಬೇಕು ಹೇಳಿರ ಹೇಳಲಾ. (ರಾಮುವಿಗೆ) ಅಂ ರಾಮು ನೀ ಅಷ್ಟ ಹೊರಗ ಬಾಗಲದೊಳಗ ಕೂಡಪಾ. ಯಾರಾದರೂ ನನ್ನ ಕೇಳಲಿಕ್ಕೆ ಬಂದರ ಲಗೂನ ಬಂದು ನನಗ ತಿಳಸು. ನಾ ಈಗ ಅಂಗೀ, ಟೊಪಗಿ ತರತೀನಿ ಹೋಗು. (ರಾಮು ಹೋಗುವನು) ನೀ ಸುಮ್ಮನ ಯಾಕ ಚಿಂತಿ ಮಾಡತೀದೇ? ಬೇಕಾದಷ್ಟು ಸಾಲ ಆದರೂ ನಾ ತಂದ ಹಾಕಲಿಕ್ಕೆ ಘಟ್ಟಿ ಇದ್ದೀನಿ. ನೀ ಯಾತಕ್ಕ ಹೆದರತೀದಿ?

ಕೃಷ್ಟಕ್ಕ:—(ಪ್ರವೇಶಿಸಿ) ಆಕ್ಯಾಕ ಹೆದರ್‍ಯಾಳಪಾ ನೀ ಸಾಲಾ ಮಾಡ್ಲಿಕ್ಕೆ ಘಟ್ಟಿ ಇದ್ದರ? ಮಾಡು ಮಾಡು, ಬೇಕಾದಷ್ಟು ಸಾಲಾ ಮಾಡು. ಇದ್ದ ಒಂದು ಹೊಲ ಹೋತು, ಮನಿ ಹೋತು. ಇನ್ನಮ್ಯಾಲೆ ನೀನs ಹೋಗತೀದಿ!

ಹನಮಂತ:—ಅವ್ವಾ, ನಾ ಇಂಥಾದಕೆಲ್ಲ ಸೊಪ್ಪs ಹಾಕಿಲ್ಲ. ದೊಡ್ಡ ದೊಡ್ಡ ದೇಶನs ಇವತ್ತ ಹಾಳಾಗಿ ಹಳ್ಳಾಕೂಡಿ ಹೋಗಲಿಕ್ಕೆ ಹತ್ಯಾವ. ಸೊಟ್ಟ ನನ್ನ ಹೊಲಾ ಮನಿ ಹೋದರ ಹೆದರತೀನೇ ನಾನು? ರೊಕ್ಕದ

ತಿಜೋರಿ ಎರಡನೇಯವರ ಹತ್ತರ ಇದ್ರೂ ತಿಜೋರಿ ಕೀಲೀ ಕೈ ಮಾತ್ರ
ನನ್ನ ಕಡೇನs ಇರತsದ!

ರಾಮು:—(ಓಡುತ್ತ ಬಂದು) ಅಪ್ಪಾ, ಅಪ್ಪಾ, ಆ ಮಾರವಾಡಿ ಬರಲಿಕ್ಕ
ಹತ್ಯಾನ.

ಹನಮಂತ:—ಆಂss? ಮಾರವಾಡಿ ಬಂದನ? ಅಲೆಲೆಲೆ.......

ಕೃಷ್ಟಕ್ಕ:—(ಪ್ರವೇಶಿಸಿ) ಏನೋ ಹಣಮ್ಯಾ ಅದು?

ಹನಮಂತ:—ಅವ್ವಾ, ಆ ಮಾರವಾಡಿ ಬರಲಿಕ್ಕೆ ಹತ್ಯಾನಂತ
ಇವತ್ತೇನ ಅವಾ ನನ್ನ ಬಿಡೋದಿಲ್ಲ. ಮೊನ್ನೆ ಇಲ್ಲದ್ದೊಂದು ಹೇಳಿ ಕಳ
ಬೇಕಾದರs ಸಾಕಾಗಿ ಹೋತು. ಏನ ಮಾಡಲಿ?

ಸಾವಿತ್ರಿ:—(ಸ್ವಲ್ಪ ವಿಚಾರಿಸಿ) ಇವತ್ತ ಹೀಂಗ ಮಾಡ್ರೀss ಅಂತೀನಿ
ಜಡ್ಡ ಜೋರ ಬಂದವರ್‍ಹಾಂಗ ನೀವು ಮಲಿಕ್ಕೊಂಡು ಬಿಡ್ರಿ. ನಾವಿಬ್ಬರು
ಇಲ್ಲೇ ನಿಮ್ಮ ಉಪಚಾರ ಮಾಡಿದವರ್‍ಹಾಂಗ ಮಾಡತಿರತೀವಿ.

ಹನಮಂತ:—ಹೂಂ. ಇನ್ನ ಅವಾ ಬಂದಗಿಂದಾನು, ಲಗೂನ ಹಾಸಿ
ಹಾಕು.

ಸಾವಿತ್ರಿ:—ಸ್ವಲ್ಪ ಸಮಾಧಾನಾ ಮಾಡ್ರೆಲ್ಲಾ. ಇಷ್ಟ್ಯಾಕ ಅವಸ
ಮಾಡತೀರಿ—ನಾಟಕಾ ಆಡಸೋ ಮ್ಯಾನೇಜರನ್ಹಾಂಗ!

ಕೃಷ್ಟಕ್ಕ:—ಹಣಮ್ಯಾ, ಹೀಂಗ ಮಾಡೋ. ನೀ ಸುಮ್ಮನ ದೇ
ಮನಿಯೊಳಗ ದೇವರ್‍ಹಾಂಗ ಕೂತಬಿಡು. ನಮ್ಮ ಬ್ರಾಹ್ಮಣರ ದೇವರ
ಯೊಳಗ ಅದಾವ ರಂಡೇಗಂಡ ಕಾಲಿಡತಾನೋ ನೋಡತೀನಿ.

ಹನಮಂತ:—ದೇವರ ಮನಿಯೊಳಗ ಯಾಕs ದೇವರ ತಲಿ

ಳಜಿ. ನೀ ಸುಮ್ಮನ ಇರು
ನಿ.

ಗುವನು. ಸಾವಿತ್ರಿಯೂ,
ನಾಡಿಯು ಬರುವನು]

—ಅಂ. ಹನಮಂತರಾವು ಘರ್ಮೆ ಅದಾವ?

ಕೃಷ್ಟಕ್ಕ:—ಬಾರಪ್ಪಾ ಸೇಡಜಿ. ನನ್ನ ಮಗ್ಗ